THE BOOK WAS DRENCHED

TIGHT BINDING BOOK

UNIVERSAL LIBRARY
OU_200344
UNIVERSAL LIBRARY

ರಾವ್ ಬಹದ್ದರ್ ವೀರೇಶಲಿಂಗಂ ಪಂತರು ತೆಲುಗಿನಲ್ಲಿ ಬರೆದ

# * ಸತ್ಯರಾಜಾಪೂರ್ವದೇಶಯಾತ್ರೆಗಳು *

## ಪ್ರಥಮಭಾಗ - ಸ್ತ್ರೀಮಲೆಯಾಳ.

ಎಂಬೀ ಕಲ್ಪನಾಕಥೆಯನ್ನು ಮದ್ರಾಸು ಕ್ರಿಶ್ಚಿಯನ್ ಕಾಲೇಜು
ಕರ್ಣಾಟಾಧ್ಯಾಪಕರಾದ

ಬೀ. ರಾಮರಾವ್ - ಬಿ. ಎ.

ಇವರು ಕನ್ನಡಿಸಿದರು.

ಮೊದಲನೆಯ ಮುದ್ರಣವು.

ಪುರಾಣಮಿತ್ಯೇವ ನಸಾಧುಸರ್ವಂ ।
ನಚಾಪಿಕಾವ್ಯಂ ನವಮಿತ್ಯವದ್ಯಂ ।
ಸನ್ತಃ ಪರೀಕ್ಷ್ಯಾನ್ಯತರದ್ಭಜನ್ತೇ ।
ಮೂಢಃ ಪರಪ್ರತ್ಯಯನೇಯಬುದ್ಧಿಃ ॥

ಮದ್ರಾಸು :
ಮೆಸ್ಸರ್ಸ್ ಗ್ರೇವ್ಸ್ ಕೂಕ್‌ಸನ್ ಅಂಡು ಕಂಪೆನಿ,
ಸ್ಕಾಟಿಷ್ ಪ್ರೆಸ್ಸಿನಲ್ಲಿ ಮುದ್ರಿಸಲ್ಪಟ್ಟಿದೆ.

1899.

ಬೆಲೆ ಯೆಂಟಾಣೆ.] [ಅಂಚೆಯ ಹಾಸಲು ಬೇರೆ.

ರಿಜಿಸ್ಟರಾಗಿದೆ.

# PREFACE.

WHILE studying Telugu with my tutor PANDIT A. V. NARASIMHAM PANTULU, I became conscious of the greatness of RAO BAHADUR VEERESALINGAM PANTULU'S works in the field of Telugu literature; and, with the help of my tutor, I soon began to read them—especially his prose-writings. Of these only two have as yet been published and made available to the Kannada-knowing public; and this is the third that is now offered to the public. The translation of this book was undertaken long ago, but its publication had to be laid aside, on account of want of funds necessary for publishing the same. Lately, however, my esteemed friend, MR. D. SADASHIVA RAO, came forward and offered to get the book through the press. The present publication of the book is, therefore, entirely due to his willing and ready help for which I cannot be sufficiently grateful to him.

My thanks are also due to my friend and brother-in-law MR. P. MANGESH RAO, Kannada Pandit, Mangalore Government College, for the help he rendered in correcting the proof-sheets,—to RAO BAHADUR K. VEERESALINGAM PANTULU GARU, who not only gave me the permission for translating the work, but also supplied me with the block that is embodied in the book,—and lastly, to my many friends who subscribed for copies of this book and encouraged me in the execution of the undertaking.

I had also prepared a detailed biography of the renowned author and wanted to incorporate it with this book, but as there was no prospect of the book being ready even at the end of this month, I am sorry I had to append only a considerably condensed account of his life. The full account I shall think it my duty to place before the public at the earliest possible date. If this book finds a ready sale, so that at least the cost of its publication is realised, I shall soon bring out the second part of this book, as also a translation of that very interesting Marathi novel, "Ramâ and Mâdhav," by MR KASINATH RAGHUNATH MITRA, of Bombay.

Any suggestions for the improvement of the book will be thankfully recorded and duly attended to in the second edition of the book.

MADRAS CHRISTIAN COLLEGE, } **B. RAMA RAO.**

*5th October* 1899.



K. Veeresalingam.

ಪಂಡಿತ ವೀರೇಶಲಿಂಗಂ ಪಂತರು ಕ್ರಿ. ಶ. 1848ನೆಯ ವರ್ಷದಲ್ಲಿ ರಾಜ ಮಹೇಂದ್ರಪುರದಲ್ಲಿ ಹುಟ್ಟಿದರು. ಇವರ ಪೂರ್ವಜರು ಬಹಳ ವಿದ್ಯಾವಂತರಾಗಿಯೂ ಧನಿಕರಾಗಿಯೂ ಪ್ರಖ್ಯಾತರಾಗಿದ್ದರು - ವೀರೇಶಲಿಂಗಂಪಂತರ ಅಯಿದನೆಯ ವರ್ಷದೊಳಗಾಗಿಯೆ ಅವರ ತಂದೆಗಳಾದ ಸುಬ್ರಹ್ಮಣ್ಯಪಂತರು ಪರಮಪದವನ್ನು ಸೇರಿದುದರಿಂದ, ಅವರ ಪೋಷಣಾವಿದ್ಯಾಭ್ಯಾಸಾದಿಗಳನ್ನು ಚೆನ್ನಾಗಿ ನಡೆಯಿಸುವ ಭಾರವು ಅವರ ದೊಡ್ಡತಂದೆಗಳಾದ ವೆಂಕಟರತ್ನಂಪಂತರ ಮೇಲೆ ನಿಂತಿತು. ಚಿಕ್ಕಂದಿನಿಂದಲೂ ತೆಲುಗಿನಮೇಲೆ ವಿಶೇಷವಾದ ಅಭಿಮಾನವಿಟ್ಟು, ಶ್ರದ್ಧೆಯಿಂದ ಉತ್ತಮವಾದ ಗ್ರಂಥಗಳನ್ನೋದುತ್ತ ಬಂದುದರಿಂದ, ವೀರೇಶಲಿಂಗಂ ಪಂತರಿಗೆ ಹನ್ನೊಂದು ಹನ್ನೆರಡು ವರ್ಷಪ್ರಾಯವಾಗುವುದರೊಳಗಾಗಿ ಲಲಿತವಾಗಿ ತೆಲುಗು ಗ್ರಂಥಗಳನ್ನು ಬರೆಯ ತಕ್ಕ ಶಕ್ತಿಯುಂಟಾಯಿತು - ಇವರ ಹದಿಮೂರನೆಯ ವರ್ಷದಲ್ಲಿಯೆ ಇವರಿಗೆ ವಿವಾ

ಹವಾಯಿತು - 1870ನೆಯ ವರ್ಷದಲ್ಲಿ ಇವರು ಪ್ರವೇಶ ಪರೀಕ್ಷೆಯನ್ನು ಜಯಿಸಿದವರಾದರು. 1875ನೆಯ ವರ್ಷದವರೆಗೂ ಅಲ್ಲಲ್ಲಿ ಪಾಠಶಾಲೋಪಾಧ್ಯಾಯರಾಗಿ ಕೆಲಸ ನೋಡುತ್ತಿದ್ದ ಇವರನ್ನು ಆ ಸಂವತ್ಸರದಲ್ಲಿ ರಾಜಮಹೇಂದ್ರಪುರದ ಸರ್ವಕಲಾಶಾಲೆಯ ತೆಲುಗು ಪಂಡಿತರನ್ನಾಗಿ ನಿಯಮಿಸಿದರು. ಇದುವರೆಗೂ ಅದೇ ಕೆಲಸದಲ್ಲಿದ್ದ ಇವರು, ಈಗ ನೂತನವಾಗಿ ಮದರಾಸಿನ ಸಂಸ್ಥಾನ ಕಲಾಶಾಲೆಯ ತೆಲುಗು ಪಂಡಿತರಾಗಿ ನಿಯಮಿಸಲ್ಪಟ್ಟಿರುವರು.

ವೀರೇಶಲಿಂಗಂ ಪಂತರು ಅಂದಿನಿಂದ ಇಂದಿನವರೆಗೆ ಬರೆದ ಗ್ರಂಥಗಳನ್ನು ಒಟ್ಟಾಗಿ ಎಣಿಸಿದರೆ ನೂರಕ್ಕಿಂತಲೂ ಹೆಚ್ಚಾಗಿಯೇ ಇವೆ. ಪದ್ಯ, ಗದ್ಯ, ನಾಟಕ, ಪ್ರಹಸನ, ಕಥಾಪ್ರಬಂಧ, ಶಾಸ್ತ್ರೀಯಪುಸ್ತಕಗಳೆಂಬ ಈ ವಿಷಯಗಳಲ್ಲಿ ಇವರು ಬರೆಯದೆ ಬಿಟ್ಟುದೊಂದೂ ಇಲ್ಲ. ಈ ಉದ್ದಾಮಕವಿಯಿಂದ ಬರೆಯಲ್ಪಟ್ಟ ಕಾವ್ಯಗಳು ಉತ್ತಮರಾದ ಪ್ರಾಚೀನಕವಿಗಳ ಗ್ರಂಥಗಳಿಗೆ ಸಮಾನವಾಗಿದೆ ಯೆಂದು ಲಾಕ್ಷಣಿಕರು ಒಪ್ಪುವರು. ತೆಲುಗಿನಲ್ಲಿ ನೂತನರೀತಿಯ ಕಲ್ಪನಾಕಥೆಗಳನ್ನು ಬರೆಯಲು ಮೊದಲುಮಾಡಿದವರು ಇವರೆ - ಇವರು ಬರೆದ ಇಂತಹ ಪ್ರಬಂಧಗಳೊಳಗೆ ರಾಜಶೇಖರಚರಿತ್ರೆ, ಸತ್ಯವತೀಚರಿತ್ರೆ, ಸತ್ಯರಾಜಾಪೂರ್ವದೇಶಯಾತ್ರೆಗಳು ಎಂಬೀ ಮೂರು ಪುಸ್ತಕಗಳು ಪ್ರಸಿದ್ಧವಾಗಿವೆ. ಇವುಗಳಲ್ಲಿ ಮೊದಲನೆಯೆರಡು ಈ ಮೊದಲೇ ಕನ್ನಡಿಸಲ್ಪಟ್ಟಿವೆ - ಇವರು ಸತ್ಯರಾಜಾಪೂರ್ವದೇಶಯಾತ್ರೆಗಳನ್ನು ನಾಲ್ಕು ಭಾಗಗಳಾಗಿ ಬರೆಯಲುಪಕ್ರಮಿಸಿ ಇಂದಿನ ಎರಡನ್ನು ಮಾತ್ರವೇ ಬರೆದು ಪ್ರಕಾಶಗೊಳಿಸಿರುವರು- ಸಂಸ್ಕೃತಾಂಧ್ರಗಳಲ್ಲಿ ಹೇಗೆಯೋ ಹಾಗೆಯೇ ಇವರಿಗೆ ಇಂಗ್ಲೀಷಿನಲ್ಲಿಯೂ ಒಳ್ಳೆಯ ಪಾಂಡಿತ್ಯವಿರುವುದರಿಂದ, ಇಂಗ್ಲೀಷು ಗ್ರಂಥಕರ್ತೃಗಳಲ್ಲಿ ಪ್ರಸಿದ್ಧರಾದ ಅನೇಕರ ಗ್ರಂಥಗಳನ್ನು ಇವರು ಗದ್ಯರೂಪವಾಗಿಯೂ ಪದ್ಯರೂಪವಾಗಿಯೂ ತೆಲುಗಿಗೆ ಪರಿವರ್ತಿಸಿರುವರು. ಇವರ ಗ್ರಂಥಗಳ ಶೈಲಿ ಸುಲಭವಾಗಿಯೂ ಅರ್ಥಪುಷ್ಟಿಯಿಂದ ಕೂಡಿದುದಾಗಿಯೂ ಇರುವುದರಿಂದ ಸಾಧಾರಣಾಕ್ಷರದ ಗುರುತು ಉಂಟಾದಂದಿನಿಂದ ತೆಲುಗಿನಲ್ಲಿ ಒಳ್ಳೆಯ ಪಾಂಡಿತ್ಯವುಂಟಾಗುವವರೆಗೂ ಇವರ ಗ್ರಂಥಗಳನ್ನೇ ಓದಬಹುದು. ಆಂಧ್ರಸಾಹಿತ್ಯದ ಆಧುನಿಕ ಗ್ರಂಥ ಸಮುದಾಯದಲ್ಲಿ ವೀರೇಶಲಿಂಗಂ ಪಂತರು ರಚಿಸಿದ ಗ್ರಂಥಗಳನ್ನು ಬಿಟ್ಟರೆ, ಉಳಿದುದು ಬಹಳಮಟ್ಟಿಗೆ ಸ್ವಲ್ಪವೇ ಎನ್ನಬೇಕು.

ವೀರೇಶಲಿಂಗಂ ಪಂತರ ಹೆಸರನ್ನು ಸರ್ವತ್ರ ಪ್ರಖ್ಯಾತಿಗೆ ತಂದುದು ಅವರ ಸಾಮಾಜಿಕ ಸಂಸ್ಕರಣ ಪ್ರಯತ್ನಗಳೇ. ಚಿಕ್ಕ ತನದಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದ ಕಾಲದಲ್ಲಿ, ಪ್ರಸಿದ್ಧರಾದ ರಾಮಮೋಹನರಾಯ ಕೇಶವಚಂದ್ರಸೇನರೇ ಮೊದಲಾದ ಮಹನೀಯರು ಮಾಡುತ್ತಿದ್ದ ದೇಶಸೇವೆಯನ್ನು ನೋಡಿ, ಅವರ ಚರಿತ್ರಗಳನ್ನೋದಿ, ಅವರ ಅಭಿಮತಗಳನ್ನು ಪರಿಶೀಲಿಸಿ, ಇವರಿಗೂ ಅವರನ್ನನುಸರಿಸಿ ಮಾತೃದೇಶೋನ್ನತಿಗಾಗಿ ಯತ್ನಿಸಬೇಕೆಂಬ ಉತ್ಸಾಹವುಂಟಾಯಿತು. ಅಂದಿನಿಂದ ಇವರು ತಮ್ಮ ತನುಧನಮಾನಸಗಳೆಲ್ಲವನ್ನೂ ಆರ್ಯರ ಸಾಮಾಜಿಕಸ್ಥಿತಿಯನ್ನು ಸಂಸ್ಕರಿಸುವ ಕಾರ್ಯದಲ್ಲಿ ಉಪಯೋಗಿಸುತ್ತ, ಈ ಭಾರತವರ್ಷವನ್ನು ಜೀರ್ಣೋದ್ಧಾರಮಾಡುವ ಪ್ರಯತ್ನದಲ್ಲಿಯೆ ವ್ಯಗ್ರರಾಗಿರುವರು. ಮುಖ್ಯವಾಗಿ ನಮ್ಮ ಬ್ರಾಹ್ಮಣಸಮಾಜದಲ್ಲಿ ಬಾಲವಿತಂತುಗಳಿಗೆ ಉಂಟಾಗಿರುವ ದೀನಾವಸ್ಥೆಯೇ ಇವರಿಗೆ ಅತಿದಾರುಣವಾಗಿ ತೋರಿ ಮನಸ್ಸಿಗೆ ವಿಶೇಷವಾದ ದುಃಖವನ್ನುಂಟುಮಾಡಿದುದರಿಂದ, ಪರೋಪಕಾರಶೀಲರಾದ ಇವರು ಅವರ ಸಂಕಟಗಳನ್ನು ಪರಿಹರಿಸುವ ಕಾರ್ಯದಲ್ಲಿಯೆ ಹೆಚ್ಚು ಲಕ್ಷ್ಯ ಪೂರೈಸುತ್ತಿರುವರು. ತೆಲುಗುಬ್ರಾಹ್ಮಣರೊಳಗೆ ಸುಮಾರು 40 ವಿಧವಾವಿವಾಹಗಳು ನಡೆಯುವಂತೆ ಸಾಹಸಮಾಡಿದ ಇವರನ್ನು ಬಾಲವಿಧವೆಯರು ಹೆತ್ತ ತಂದೆಗಿಂತಲೂ ಹೆಚ್ಚಾಗಿ ಭಾವಿಸುವರು - ದಕ್ಷಿಣ ಹಿಂದುಸ್ಥಾನದಲ್ಲಿ ಸಾಮಾಜಿಕ ಸಂಸ್ಕರಣಕ್ಕಾಗಿ ಪ್ರಯತ್ನ ನಡೆಯಿಸಿದ ದೊಡ್ಡಮನುಷ್ಯರಲ್ಲಿ ಇವರೇ ಪ್ರಮುಖರಾದುದರಿಂದ ವಿತತ್ಪಕ್ಷದವರೆಲ್ಲರಿಗೂ ಇವರೇ ನಾಯಕರಾಗಿ ನಡೆಯಿಸುತ್ತಿರುವರು.

ವೀರೇಶಲಿಂಗಂಪಂತರಲ್ಲಿ ನೆಲೆಗೊಂಡಿರುವ ವಿನಯಸ್ವಭಾವವೂ, ಮನೋನಿರ್ಧಾರವೂ ಅತ್ಯಾಶ್ಚರ್ಯಾವಹವಾಗಿವೆ. ಇವರ ಸಂಸ್ಕರಣ ಪ್ರಯತ್ನಗಳ ದೆಸೆಯಿಂದ ಎಷ್ಟೋಜನರು ಇವರಿಗೆ ವಿರೋಧಿಗಳಾಗಿ ನಿಂತು, ಇವರಮೇಲೆ ಇಲ್ಲದ ದೋಷಗಳನ್ನಾರೋಪಿಸಿ, ಎಷ್ಟೋ ಬಾಧೆ ಕೊಡಲಾರಂಭಿಸಿದರು. ಆದರೆ ಇವರನ್ನು ಕೆರಳಿಸುವುದಕ್ಕಾಗಲೀ, ಇವರ ಪ್ರಯತ್ನಗಳನ್ನು ಖಂಡಿಸುವುದಕ್ಕಾಗಲೀ ಅವರಿಂದಾಗಲಿಲ್ಲ. ಆಲೋಚನೆಮಾಡಿ ನೀತಿಗೆ ವಿರೋಧವಲ್ಲವೆಂದು ತಿಳಿದಮೇಲೆ ಬಹುಜನಪ್ರಯೋಜಕಕಾರ್ಯವನ್ನು ಎಂತಹ ಅಂತರಾಯಗಳು ಬಂದರೂ ಇವರು ನೆರವೇರಿಸದೆ ಬಿಡರು. ಇವರ ಸಂಸ್ಕರಣ

ಕಾರ್ಯದ ವಿಷಯದಲ್ಲಿ ಜನರೊಳಗೆ ಭಿನ್ನಾಭಿಪ್ರಾಯಗಳಿರ ಬಹುದಾದರೂ, ಇವರು ಬಾಯಿಯಿಂದ ಮಾತನಾಡಿ ಕಾರ್ಯತಃಮಾಡಿ ತೋರಿಸ ತಕ್ಕವರಲ್ಲವೆಂದು ಯಾರೊಬ್ಬರೂ ಹೇಳಲಾರರು. ಜನರಿಗೆ ಇವರಮೇಲೆ ಎಷ್ಟು ಪೂಜ್ಯಭಾವವಿರುವುದೋ ಅಷ್ಟೇ ದೊರೆತನದವರಿಗೂ ಇದೆ. ಈ ತಮ್ಮ ಅಭಿಮಾನವನ್ನು ಪ್ರದರ್ಶಿಸುವುದಕ್ಕಾಗಿ ದೊರೆತನದವರು ಇವರಿಗೆ 1895ನೆಯ ವರ್ಷದಲ್ಲಿ ರಾವ್ ಬಹದ್ದರ್ ಎಂಬ ಬಿರುದು ಕೊಟ್ಟುದಲ್ಲದೆ, 1897ನೆಯ ವರ್ಷದಲ್ಲಿ ಮದರಾಸಿನ ವಿದ್ಯಾಸಮಾಜದ ಸಭಾಸದರಾಗಿಯೂ ನಿಯಮಿಸಿ ಮನ್ನಿಸಿದರು. ಇಂತಹ ವಿದ್ವಾಂಸರೂ, ದೇಶಾಭಿಮಾನಿಗಳೂ, ಸುಗುಣಸಂಪನ್ನರೂ ಆದ ಇವರು ಇನ್ನೂ ಬಹಳ ವರ್ಷಗಳ ವರೆಗೆ ಸುಖವಾಗಿ ಜೀವಿಸಿಕೊಂಡಿದ್ದು, ಭಾರತೀಯರೆಲ್ಲರಿಗೂ ನೀತಿ ಮಾರ್ಗದರ್ಶಿಗಳಾಗಿರಲೆಂದು ಪ್ರಾರ್ಥಿಸುವೆವು.

# ಸತ್ಯರಾಜಾಪೂರ್ವದೇಶಯಾತ್ರೆಗಳು.

## ಪ್ರಥಮಭಾಗ - ಸ್ತ್ರೀಮಲೆಯಾಳ.

## ಮೊದಲನೆಯ ಪ್ರಕರಣವು.

ನಾನು ಪರೀಧಾವಿ ಸಂವತ್ಸರದ ಚೈತ್ರಶುದ್ಧ ನವಮೀ ಮಂಗಳವಾರದ ಪುಷ್ಯಮೀ ನಕ್ಷತ್ರದಲ್ಲಿ ವಿಜಯನಗರದೊಳಗೆ ಹಿಂದೆ ಶ್ರೀರಾಮದೇವರು ಹುಟ್ಟಿದ ದಿನದಲ್ಲಿಯೇ ಹುಟ್ಟಿದೆನು. ನಮ್ಮ ಮನೆಯ ಹೆಸರು ಪತ್ರಿಯವರು. ನಾನು ವ್ಯಾಸರಾಯಾಚಾರ್ಯರವರ ಪುತ್ರನು. ನನ್ನ ತಾಯಿ ಲಕ್ಷ್ಮೀಬಾಯಮ್ಮ. ನಾನು ಮುಂದೆ ಮಹಾ ಸತ್ಯಸಂಧನಾಗಿ ಈ ಸತ್ಯಚರಿತ್ರೆಯನ್ನು ಬರೆಯುವೆನೆಂದು ತಿಳಿದೋ, ತನಗಿರುವ ಸತ್ಯಪ್ರಿಯತ್ವದ ದೆಸೆಯಿಂದಲೋ, ಬೇರೆ ಯಾವ ಹೇತುವಿನಿಂದಲೋ, ನಮ್ಮ ತಂದೆ, ನನಗೆ ತನ್ನ ತಂದೆಯ ಹೆಸರನ್ನೇ ಇಡದೆ, ದೇಶಾಚಾರವನ್ನು ತಪ್ಪಿಸಿ, ಚಿಕ್ಕಂದಿನಲ್ಲಿಯೆ ನನಗೆ ಸತ್ಯರಾಜಾಚಾರ್ಯನೆಂದು ಹೆಸರಿಟ್ಟರು. ನಮ್ಮ ತಂದೆಯವರು ಜ್ಯೋತಿಶ್ಶಾಸ್ತ್ರದಲ್ಲಿ ಮಹಾ ಪಂಡಿತರಾದುದರಿಂದ, ಪುಣ್ಯಪುರುಷಾಗ್ರಗಣ್ಯರಾದ ಅವರು ಸ್ವಮಹಿಮೆಯಿಂದ ನನ್ನ ಭವಿಷ್ಯದ್ಯೋಗ್ಯತೆಯನ್ನು ಮುಂದಾಗಿ ತಿಳಿದುಕೊಂಡೇ ತಪ್ಪದೆ ನನಗೆ ಹೀಗೆ ನಾಮಕರಣ ಮಾಡಿರ ಬಹುದು. "ಸುಕೃತೀ ಗತಾಯುಃ" ಎಂಬ ನ್ಯಾಯದಂತೆ ಅವರು ನನ್ನ ಪಸುಳೆತನದಲ್ಲಿಯೇ ಪುಣ್ಯಲೋಕಯಾತ್ರೆಗೆ ವಿಜಯ ಮಾಡಿದುದರಿಂದ ನನ್ನ ಹೆಸರನ್ನು ಕುರಿತು ಅವರನ್ನು ಕೇಳಿ ತಿಳಿದುಕೊಳ್ಳುವುದಕ್ಕೆ ಅವಕಾಶವಿಲ್ಲದೆ ಹೋಯಿತು ನನ್ನ ಸರಿಯಾದ ಹೆಸರು "ಸತ್ಯರಾಜಾಚಾರ್ಯ" ನೆಂದಿದ್ದರೂ ಆ ಗ್ರಾಮದಲ್ಲಿರುವವರು ನನ್ನನ್ನು 'ಸತ್ಯರಾಯಾಚಾರ್ಯ' ನೆಂದು ಕರೆಯುತ್ತಿದ್ದರು. "ರಾಜ" ಎಂಬುದನ್ನು 'ರಾಯ' ಎಂದು ವ್ಯವಹರಿಸುವುದು ಕರ್ಣಾಟಕ ಸಂಪ್ರದಾಯವು. ಅಷ್ಟೇ ಅಲ್ಲದೆ 'ಜ' ಕಾರ 'ಯ' ಕಾರಗಳಿಗೆ ಭೇದವಿಲ್ಲ. ಆದುದರಿಂದಲೇ ವಂಗಾದಿ ಉತ್ತರ ದೇಶಗಳಲ್ಲಿ "ಅಯೋಧ್ಯೆ" ಗೆ "ಅಜೋಧ್ಯೆ" ಎಂದು 'ಯ' ಕಾರದ ಪ್ರತಿಯಾಗಿ 'ಜ' ಕಾರವನ್ನು ಬಳಸುವರು. ಈ ಶಾಸ್ತ್ರಚರ್ಚೆಯನ್ನು ಹೀಗೆಯೆಬಿಟ್ಟು ಪ್ರಕೃತ ಕಾರ್ಯಾಂಶಕ್ಕೆ ಬರುವ. ನನ್ನ ಹೆಸರಿನ ಉಚ್ಚಾರಣ ಕ್ರಮವೆಂತಾದರೂ

ನನ್ನದು ಸಾರ್ಥಕ ನಾಮಧೇಯವೆಂದು ನಾನು ಬೇರೆಯಾಗಿ ಹೇಳುವ ಅವಶ್ಯ
ವಿಲ್ಲದೆ, ನಾನು ವಿವರಿಸಲು ಹೋಗುವೀ ಸತ್ಯಯಾತ್ರಾಚರಿತ್ರೆಯೇ ಅದನ್ನು
ಲೋಕಕ್ಕೆ ಸಾವಿರ ಬಾಯಿಗಳಿಂದ ಘೋಷಿಸದಿರದು. ಆತ್ಮಸ್ತುತಿ ನಿಂದ್ಯವಾದುದ
ರಿಂದ ನನ್ನ ಸತ್ಯಸಂಧತ್ವವನ್ನು ಕುರಿತು ನಾನು ಇನ್ನೂ ಹೆಚ್ಚಾಗಿ ಹೇಳೆನು.
ನಾನು ಅವಲಂಬಿಸಿರುವ ಸತ್ಯಮತವುಕೂಡ ನನ್ನ ಚರಿತ್ರೆಯ ಪರಮ ಸತ್ಯತ್ವ
ವನ್ನು ಸಾಧಿಸ ಬಹುದು. ಸತ್ಯಪ್ರೀತಿಯಿಂದಲೇ ಅಲ್ಲವೇ ನಮ್ಮ ಮತಕರ್ತರಾದ
ಶ್ರೀಮಧ್ವರಾಯರವರು ಮಿಥ್ಯಾಭೂತಗಳಾದ ಪೂರ್ವಮತ ಸಿದ್ಧಾಂತಗಳೆಲ್ಲವನ್ನೂ
ತಿರಸ್ಕರಿಸಿ, ಶ್ರೀಮದಾಂಜನೇಯನ ಸಹಾಯದಿಂದಲೂ, ಮುಖ್ಯಪ್ರಾಣನ ಅನು
ಗ್ರಹದಿಂದಲೂ, ಶಿಲವಾಗಿ ಹೋದ ಅಪೂರ್ವ ಶ್ರುತಿಸ್ಮೃತಿ ವಾಕ್ಯರತ್ನಗಳನ್ನು
ಬ್ರಹ್ಮಲೋಕದಿಂದ ತರಿಸಿ, ಬ್ರಹ್ಮಸಂಪ್ರದಾಯಾನುಸಾರವಾಗಿ ಸತ್ಯವಾದ
ದ್ವೈತಮತ ಸಿದ್ಧಾಂತವನ್ನು ಲೋಕಾನುಗ್ರಹಾರ್ಥವಾಗಿ ಸ್ಥಾಪಿಸಿರುವರು ! ಅಂತ
ಹ ಸತ್ಯಮತದಲ್ಲಿ ಜನಿಸಿ, ಸತ್ಯವ್ರತವನ್ನು ಕೈಕೊಂಡಿರುವ ನಾನು ನನ್ನ ಗ್ರಂಥ
ದಲ್ಲಿ ಸತ್ಯವಲ್ಲದ ವಾಕ್ಯವನ್ನೊಂದನ್ನಾದರೂ ಸೇರಿಸುವೆನೇ ? ಓವಾಚಕರಿರಾ !
ನನ್ನ ಮಾತು ನಂಬಿ ಇದರೊಳಗಣ ಪ್ರತಿಯೊಂದು ವಾಕ್ಯವನ್ನೂ ವೇದವಾಕ್ಯ
ದಂತೆ ವಿಶ್ವಾಸಿಸಿರಿ. ನಾನಿಂದು ತಿಳಿಸಹೋಗುವ ಸಂಗತಿಗಳು ಇದುವರೆಗೆ
ಮನುಷ್ಯರಾರಿಗೂ ತಿಳಿಯದ ದೇವರಹಸ್ಯಗಳಾದರೂ, ಸ್ವದೇಶಸ್ಥರಾದ
ನಿಮ್ಮಲ್ಲಿ ನನಗಿರುವ ಭ್ರಾತೃಸ್ನೇಹದ ದೆಸೆಯಿಂದ ಮರ್ಮಬಿಡಿಸಿ ಹೇಳಬಿಡುವೆನು.

ನಮ್ಮ ತಂದೆ ಕರ್ಮಠರಾಗಿ, ಬಾಲ್ಯದಿಂದಲೂ ವೈದಿಕರಾಗಿ ಪೂಜ್ಯವಾದ
ಆಚಾರವೃತ್ತಿಯಲ್ಲಿಯೆ ಕಾಲಕಳೆದವರಾದರೂ, ಅವರ ಮಗನಾದನನಗೆ ಮಾತ್ರವು
ಪೂರ್ವಕರ್ಮಾನುಭವದಿಂದ, ಶಿಷ್ಯಪರಂಪರೆಯಿಂದ ಸೇವಿಸಲ್ಪಟ್ಟು ಆಚಾರ್ಯಪದವಿ
ಹೊಂದಿ ಪೂಜಿಸಲ್ಪಡುವ ಭಾಗ್ಯವು ಬರಲಿಲ್ಲ. ನಮ್ಮತಾಯಿಯು ತವರುಮನೆಯ
ವರು ಮೊದಲಿಂದಲೂ ಲೌಕಿಕ ವ್ಯವಹಾರಗಳಲ್ಲಿಯೆ ಹುಟ್ಟಿ ಬೆಳೆದವರಾದುದ
ರಿಂದ ನಮ್ಮ ಸೋದರಮಾವಂದಿರಾದ ಕಂಚಿ ಶೇಷಗಿರಿರಾಯರು ನನ್ನನ್ನು ವೇದ
ಪಾಠಶಾಲೆಗೆ ಕಳುಹದೆ ಮರದೋದು ಬರಹ ಬಂದೊಡನೆಯೇ ಹೂಣ ಪಾಠಶಾ
ಲೆಗೆ ಕಳುಹಿದರು. ನಮ್ಮ ಗ್ರಾಮದಲ್ಲಿ ಒಬ್ಬ ಪಾರ್ವರ ಹುಡುಗನು ಇಂಗ್ಲೀಷು ಓದಿ
ಕ್ರೈಸ್ತವ ಮತದಲ್ಲಿ ಸೇರಿದಾಗ ನಮ್ಮತಂದೆ ನನ್ನನ್ನು ಮಾತ್ರವಲ್ಲದೆ ನಮ್ಮ ವಂಶ
ದಲ್ಲಿ ಹುಟ್ಟಿದ ಯಾರನ್ನಾದರೂ ಹೂಣಪಾಠಶಾಲೆಗೆ ಕಳುಹಲೊಲ್ಲೆನೆಂದು ಪ್ರತಿ
ಜ್ಞೆ ಮಾಡಿದ್ದರು. ನನಗೆ ಬುದ್ಧಿ ಬರುವವರೆಗೆ ಜೀವಿಸಿದ್ದ ಪಕ್ಷದಲ್ಲಿ ಅವರು

ತನ್ನ ಪ್ರತಿಜ್ಞೆಯನ್ನು ತಪ್ಪದೆ ಸಲ್ಲಿಸುತ್ತಿದ್ದರು. ಈಸೊಂದೆಣಿಸಿದರೆ ದೈವವಿನ್ನೊಂದನ್ನೆಣಿಸುವುದಲ್ಲವೇ ? ನಾನು ಚಿಕ್ಕವನಾದರೂ ಪೂರ್ವಾಚಾರ ವಿರುದ್ಧವಾದ ಹೊಲೆಯರೊಡನೊಡಾಡುವುದು ನನಗೆ ಇಷ್ಟವಿಲ್ಲದೆ ಹೋಯಿತು. ಅದರ ಸಂಗಡಲೇ ನಮ್ಮ ತಂದೆಯವರು ಈಗ ಜೀವಿಸಿದ್ದಪಕ್ಷದಲ್ಲಿ ಅವರು ನನ್ನನ್ನು ಪಾಠಶಾಲೆಗೆ ಕಳುಹುವುದಕ್ಕೆ ಇಷ್ಟಪಡುತ್ತಿರಲಿಲ್ಲ ಎಂದೊಂದು ವಿಚಾರವೂ ನನ್ನ ಮನಸ್ಸನ್ನು ಬಾಧಿಸ ತೊಡಗಿತು. ಈ ಯೆರಡು ಕಾರಣಗಳಿಂದ ನನಗೆ ಇಂಗ್ಲೀಷಿನ ಅಭ್ಯಾಸವೆಂದೂ ಸರಿ ಬೀಳಲಿಲ್ಲ. ಆದರೂ ನನಗೆ ಈಗ ಇನ್ನೊಂದು ಬಾಧೆಕೂಡ ಉಂಟಾಯಿತು. ನನ್ನ ಸೋದರಮಾವನ ಮಾತು ಕೇಳಿ ನನ್ನ ತಾಯಿ ಪ್ರತಿದಿನವೂ ಪಾಠಶಾಲೆಗೆ ಹೋಗೆಂದು ನನ್ನನ್ನು ನಿರ್ಬಂಧಿಸ ತೊಡಗಿದಳು. ಆಗ ನನಗೆ ಪರಸ್ಪರ ವಿರುದ್ಧವಾದ ಎರಡು ಧರ್ಮಗಳು ಸಂಪ್ರಾಪ್ತವಾದುವು. ನಾನು ಇಂಗ್ಲೀಷು ಪಾಠಶಾಲೆಗೆ ಹೋಗುವುದು ನನ್ನ ತಂದೆಯ ಅಭಿಮತವಲ್ಲ; ಹೋಗದಿರುವುದು ತಾಯಿಯ ಅಭಿಮತವಲ್ಲ. ಇವುಗಳಲ್ಲಿ ನಾನು ಯಾರ ಅಭಿಮತವನ್ನು ಸಲ್ಲಿಸಲಿ ? ನನ್ನ ಮನಸ್ಸು, ತಂದೆಯ ಅಭಿಮತವನ್ನೇ ಸಲ್ಲಿಸಬೇಕೆಂದು ಬೋಧಿಸುತ್ತಿದ್ದರೂ, ಸತ್ತು ಸ್ವರ್ಗದಲ್ಲಿರುವ ತಂದೆಯ ಆಜ್ಞೆಯುಪಾಗೆ, ಬದುಕಿ ಭೂಲೋಕದಲ್ಲಿರುವ ತಾಯಿಯ ಆಜ್ಞೆ ಮೀರುವುದು ನನಗೆ ಸಾಧ್ಯವಾಗಿ ಕಾಣಲಿಲ್ಲ. ನಮ್ಮ ವೇದವೋ ಎಂದರೆ 'ಪಿತೃದೇವೋಭವ' ಎಂದು ಮಾತ್ರವೇ ಅಲ್ಲ, 'ಮಾತೃದೇವೋಭವ' ಎಂದು ಕೂಡ ಹೇಳುತ್ತಿದೆ. ಹೀಗಿರುವುದರಿಂದ ಪಿತೃನಿಯೋಗವು ಹೇಗೋ ಹಾಗೆಯೇ ಮಾತೃನಿಯೋಗವೂ ನನಗೆ ಸಮಾನವಾಗಿ ಅಲಂಘ್ಯವಾದುದು. ನಾನೀಗ ತಂದೆಯ ಅಭೀಷ್ಟವನ್ನೂ ತೀರಿಸಬೇಕು, ತಾಯಿಯ ಮನೋರಥವನ್ನೂ ಸಲ್ಲಿಸಬೇಕಾಯಿತು. ಹೀಗಿರಲು ಬುದ್ಧಿವಂತನಾದುದರಿಂದ ನಾನು ಪಿತೃವಾಕ್ಯ ಪರಿಪಾಲನೆಯನ್ನೂ ಮಾತೃವಾಕ್ಯ ಪರಿಪಾಲನೆಯನ್ನೂ ಮಾಡಿ, ಉಭಯ ಋಣ ವಿಮುಕ್ತನಾಗಿ ಕೃತಾರ್ಥತೆಯನ್ನು ಹೊಂದುವಂತೆ ಒಂದು ಉಪಾಯವನ್ನಾಲೋಚಿಸಿದೆನು. ಈ ಉಪಾಯವನ್ನು ಕೇಳಿದ ಪಕ್ಷದಲ್ಲಿ ನೀವು ನನ್ನ ಬುದ್ಧಿ ಬಲಕ್ಕೆ ಸಂತೋಷಿಸದೆ ಇರಲಾರಿರಿ. ತಾಯಿಯ ಆಜ್ಞಾನುಸಾರವಾಗಿ ನಾನು ಇಂಗ್ಲೀಷು ಪಾಠಶಾಲೆಗೆ ಹೋದೆನು; ಹೋಗುತ್ತಿದ್ದರೂ ಪಾಠಗಳನ್ನೋದದೆ ತಂದೆಯ ಇಷ್ಟಾನುಸಾರವಾಗಿ ಹೋಗದವನ ಹಾಗೆಯೇ ಇದ್ದೆನು. ಈ ಉಪಾಯದಿಂದ ನಾನು ಉಭಯವಾಕ್ಯ ಪರಿಪಾಲನ ದಕ್ಷನೂ ಧನ್ಯನೂ ಆದವನಾದೆನು. ಈ ಪ್ರ

ಕಾರ ನಾನು ಹೆಚ್ಚುಕಡಿಮೆ ಹತ್ತು ವರ್ಷ ಹೂಣಪಾಠಶಾಲೆಯಲ್ಲಿ ಓದಿದರೂ, ದೊಡ್ಡ ಪರೀಕ್ಷೆಗಳು ಯಾವುದರಲ್ಲಿಯೂ ಕೃತಾರ್ಥನಾಗಲಿಲ್ಲ. ಎಷ್ಟೋ ಕಷ್ಟಪಟ್ಟ ಮೇಲೆ ಹೇಗೂ ಸಾಮಾನ್ಯ ಪರೀಕ್ಷೆಯಲ್ಲಿ ಮಾತ್ರವೇ ತೀರ್ಣನಾದೆನು. ನಾನು ಮನೆಯ ಹತ್ತರ ಪಾಠ ವೋದದೆ ಹೋದರೂ, ಉಪಾಧ್ಯಾಯರ ಕೃಷಿಯಿಂದ ಹೇಗೋ ಕೆಲವು ಇಂಗ್ಲೀಷು ಶಬ್ದಗಳು ನನ್ನ ಹೊಟ್ಟೆಯಲ್ಲಿ ತೂರಿಕೊಂಡುವು. ಆ ತರುವಾಯ ಅವನ್ನು ನನ್ನ ಹೃದಯದಿಂದ ಓಡಿಸುವುದಕ್ಕೆ ನನಗೆ ಸಾಧ್ಯವಾಗಲಿಲ್ಲ. ಯಾರಿಗಾದರೂ ಸರಿಯೇ, ಒಂದು ಬಾರಿಗೆ ಸ್ಥಳಕೊಟ್ಟಮೇಲೆ ಅವರನ್ನು ಹೊರಗೆ ತಳ್ಳುವುದು ಸುಲಭವೇ ? ಆದರೂ ನನ್ನ ಕೈಯಲ್ಲಾದ ಮಟ್ಟಿಗೆ, ನಾನು ನಮ್ಮ ವೇದಶಾಸ್ತ್ರಗಳಿಗೆ ವಿರುದ್ಧವಾಗಿ ನಮ್ಮ ಉಪಾಧ್ಯಾಯರು ಬೋಧಿಸಿದ ಭೂಗೋಳ ವಿಷಯಗಳನ್ನೂ, ಚರಿತ್ರೆಗಳನ್ನೂ, ಹೂಣಶಾಸ್ತ್ರಗಳನ್ನೂ ಸತ್ಯವೆಂದು ನಂಬದಿದ್ದೆನು. ಈ ಚರಿತ್ರೆಯನ್ನೋದಿದ ಮಟ್ಟಿಗೆ ನನ್ನ ಮಾತುಗಳ ಸತ್ಯತ್ವವನ್ನು ನೀವೇ ತಿಳಿದುಕೊಳ್ಳುವಿರಿ. ಇಂಗ್ಲೀಷು ವಿದ್ಯಾಭ್ಯಾಸದಿಂದ ಬುದ್ಧಿಹೀನರಾದ ಇಂದಿನ ಬಾಲಕರ ಹಾಗೆ, ನನಗೆ ನಮ್ಮ ಶಾಸ್ತ್ರಗಳಲ್ಲಿಯೂ ಪುರಾಣಗಳಲ್ಲಿಯೂ, ಎಳ್ಳನಷ್ಟಾದರೂ ನಂಬಿಕೆ ಕಡಿಮೆಯಾಗಲಿಲ್ಲ. ಇಂಗ್ಲೀಷು ಚೆನ್ನಾಗಿ ಓದುತ್ತಿದ್ದರೂ, ನಾನು ನಿತ್ಯವೂ ಸ್ನಾನಸಂಧ್ಯಾದ್ಯನುಷ್ಠಾನಗಳನ್ನು ಬಿಡದೆ, ಜಪಗಳನ್ನೂ ತಪಗಳನ್ನೂ ಮಾಡುತ್ತ, ಮಂತ್ರತಂತ್ರಗಳನ್ನು ಗುರುಮುಖದಿಂದ ಕಲಿತುಕೊಂಡು ನಿಷ್ಠಾಗರಿಷ್ಠನಾದೆನು. ನನ್ನ ಆಚಾರ ವ್ಯವಹಾರಗಳನ್ನು ನೋಡಿ ನನ್ನ ತಾಯಿಯೂ ಸೋದರಮಾವನೂ ಸಂತೋಷಪಡುತ್ತಿದ್ದರು.

ನಾನು ನಾಲ್ಕನೆಯ ತರಗತಿಯಲ್ಲಿ ಓದಿಕೊಳ್ಳುತ್ತಿದ್ದಾಗ ನನಗೆ ವಿವಾಹವಾಯಿತು. ಈ ಆಂಧ್ರದೇಶದಲ್ಲಿ ನಮ್ಮ ಶಾಖೆಯವರು ಬಹಳ ಕಡಿಮೆ ಯಾದುದರಿಂದ ಕನ್ನಿಕೆಯರು ದೊರೆಯುವುದು ಬಹಳ ಪ್ರಯಾಸವು. ಹೀಗಿರುವುದರಿಂದ ಸಾಮಾನ್ಯ ಸ್ಥಿತಿಯಲ್ಲಿರುವವರಿಗೆ ಸಾವಿರರೂಪಾಯನ್ನಾದರೂ ಕೊಡದೆ ಮೂರು ವರ್ಷದ ಹುಡುಗಿಯೂ ದೊರೆಯದು. ನಮ್ಮ ಸೋದರಮಾವಂದಿರ ಪ್ರಯತ್ನದಿಂದ ನಿರ್ವಾಣಿ ನೃಸಿಂಹಾಚಾರ್ಯರವರು ಒಂಭತ್ತು ವರ್ಷ ಪ್ರಾಯದ ತಮ್ಮ ಕುವರಿಯನ್ನು ಸಾವಿರವೇ ರೂಪಾಯಿಗೆ ನನಗೆ ಕೊಟ್ಟು ವಿವಾಹ ಮಾಡುವುದಕ್ಕೆ ಅಂಗೀಕರಿಸಿದರು. ಇಂತಹ ಸಂದರ್ಭ ಮರಳಿ ಬಾರದೆಂದೆಣಿಸಿ ನನ್ನ ಸೋದರಮಾವನೂ ತಾಯಿಯೂ ಸೇರಿ, ನೂರಕ್ಕೆ ಮೂರು ರೂಪಾಯಿ ಬಡ್ಡಿಯಂತೆ, ನಮ್ಮ ಪಿತ್ರಾರ್ಜಿತ ಮಾನ್ಯಗಳಮೇಲೆ ಸಾವಿರ ರೂಪಾಯಿ ಸಾಲ

ಮಾಡಿ, ವಿವಾಹದ ವೆಚ್ಚಕ್ಕೆಂದು ಇನ್ನೂರು ರೂಪಾಯನ್ನು ಮತ್ತೊಬ್ಬರ ಸಂಗಡ ಕಡವಮಾಡಿ, ಶುಕ್ಲಸಂವತ್ಸರ ವೈಶಾಖ ಮಾಸದಲ್ಲಿ ಒಂದು ಒಳ್ಳೆಯ ಮುಹೂರ್ತದಲ್ಲಿ ನನಗೆ ಮದುವೆ ಮಾಡಿದರು. ನನಗೆ ಆಗ ಹದಿನೆಂಟು ವರ್ಷತುಂಬಿತು. ನನ್ನ ಭಾರ್ಯೆ ರೂಪವತಿಯಾಗದೆ ಹೋದರೂ ಗುಣವತಿಯಾಗಿ ತೋರುತ್ತಿದ್ದಳು. ಕುಲಕಾಂತೆಯರಿಗೆ ಗುಣವೇ ಪ್ರಧಾನವಲ್ಲದೆ ಚೆಲುವಿಕೆಯಲ್ಲ. ಹೀಗೆ ಒಂದು ವರ್ಷಕಳೆದಮೇಲೆ ನನ್ನ ಭಾರ್ಯೆಗೆ ಸ್ಫೋಟಕವಾಯಿತು. ಆಗಲಾ ಚಿಕ್ಕವಳಗೆ ಜೀವಿಸುವುದೇ ದುರ್ಘಟವೆಂದು ಎಲ್ಲರೂ ಭಾವಿಸಿದರೂ, ನಾನು ಪುರಶ್ಚರಣೆ ಮಾಡಿದ ವೀರ ಹನುಮಂತ ಮಂತ್ರಪ್ರಭಾವದಿಂದ ಅವಳಿಗೆ ಪ್ರಾಣಭಯ ತಪ್ಪಿ ಬಲಕಣ್ಣು ಮಾತ್ರ ಹೋಯಿತು. ಮುಖತುಂಬ ಮಚ್ಚೆಗಳು ಬಿದ್ದು ಆಕೆ ಮತ್ತಷ್ಟೂ ಕುರೂಪಿಣಿಯಾಗಲು "ಭಾರ್ಯಾ ರೂಪವತೀ ಶತ್ರುಃ" ಎಂಬರ ಬಾಧೆ ನನಗೆ ಇಲ್ಲದೆ ಹೋಗುವುದಾಯಿತು ನಾನು ನನ್ನ ಒಂದು ಪರೀಕ್ಷೆಯಲ್ಲಿ ತೀರ್ಣನಾಗಿ ಪಾಠಶಾಲೆ ಬಿಡುವಾಗ ನನ್ನ ಹೆಂಡತಿ ಮೈನೆರೆದು ಸಂಸಾರಕ್ಕೆ ಬರುವಳಾದಳು. ನಮ್ಮ ಮಾನ್ಯಗಳಮೇಲೆ ಬರುವ ಆದಾಯವೆಲ್ಲವೂ ನಾವು ಮಾಡಿದ ಸಾಲಗಳ ಬಡ್ಡಿಗೆಕೂಡ ಸಾಲದುದರಿಂದ, ನನ್ನ ಕುಟುಂಬ ಭಾರಕೂಡ ನಮ್ಮ ಸೋದರಮಾವನ ಮೇಲೆಯೇ ಬಿತ್ತು. ಹೀಗಾಗಲು ಎರಡು ಕುಟುಂಬಗಳನ್ನೂ ಪೋಷಿಸುವುದು ದುರ್ಲಭವಾದುದರಿಂದ ನಮ್ಮ ಸೋದರಮಾವನವರು ನನ್ನ ಶಾಲೆಬಿಡಿಸಿ, ವಿಶಾಖಪಟ್ಟಣಕ್ಕೆ ಹೋಗಿ ಯಾರಾರನ್ನೋ ಆಶ್ರಯಿಸಿ ಬಹಳ ಕಷ್ಟಪಟ್ಟು, ಧೊರೆತನದವರ ಕಾರ್ಯಸ್ಥಾನದಲ್ಲಿ, ತಿಂಗಳಿಗೆ ಹದಿನೈದುರೂಪಾಯಿ ಸಂಬಳದ ಒಂದು ಉದ್ಯೋಗವನ್ನು ನನಗೆ ಹೇಳಿಕೊಡಿಸಿದರು. ಆ ಕಾಲದಲ್ಲಿಯೇ ಸಾಲಗಾರರು ನನ್ನ ಮೇಲೆ ವ್ಯಾಜ್ಯಗಳನ್ನು ಮಾಡಿ ಧನದ್ವಿಗುಣಕ್ಕೆ ತೀರ್ಪುಗಳನ್ನು ಹೊಂದಿ ನನ್ನ ಮಾನ್ಯಗಳನ್ನು ಮಾರಿಸಿದರು. ನನ್ನ ಮಾನ್ಯಗಳ ವಿಕ್ರಯದಲ್ಲಿ ಬಂದ ಹಣದಿಂದ ನನ್ನ ಸಾಲ ಅರ್ಧ ತೀರಿತು ಮಿಕ್ಕಾದುದು ತೀರುವುದಕ್ಕೆ ಸಾಧನಕಾಣಲಿಲ್ಲ. ಸಾಲಗಾರರು ಪ್ರತಿದಿನವೂ ಬಂದು ನನ್ನ ಮನೆ ಸುತ್ತಿಕೊಂಡು ಋಣ ತೀರಿಸೆಂದು ನನ್ನನ್ನು ನಾನಾ ವಿಧವಾಗಿ ಪೀಡಿಸಲು ಮೊದಲು ಮಾಡಿದರು. ಈ ತೊಂದರೆಗಳಲ್ಲಿ ಇರುವಾಗಲೇ ನನಗೆ ಗ್ರಾಮದಿಂದ ಗ್ರಾಮಕ್ಕೆ ತಿರುಗುವ ಮತ್ತೊಂದು ಕೆಲಸವಾಯಿತು. ಈ ಹೊಸ ಕೆಲಸದ ಸಂಬಳ ಇಪ್ಪತ್ತು ರೂಪಾಯಾದರೂ ಆ ಹೆಚ್ಚಿದ ಸಂಬಳ ಪ್ರಯಾಣ ವ್ಯಯಗಳಿಗೇ ಸಾಲದಿತ್ತು. ಈಗ ಇನ್ನೊಂದು ಬಗೆಯ ಹೊಸ ವೆಚ್ಚವು

ಕೂಡ ನನ್ನ ಮೇಲೆ ಬಿತ್ತು. ನನಗೆ ಎಂದಾದರೂ ಗುಪ್ತದಾನ ಮಾಡುವುದರಲ್ಲಿಯೇ ಇಷ್ಟವು ಈಗ ಅಂತಹ ದಾನಗಳನ್ನು ಮಾಡಬೇಕಾದ ನಿರ್ಬಂಧಕೂಡ ಒದಗಿ ಬಂತು. ಅಂತಹ ದಾನಗಳನ್ನು ಮಾಡದೆ ಹೋದ ಪಕ್ಷದಲ್ಲಿ ನನ್ನ ಉದ್ಯೋಗಕ್ಕೆ ಕೂಡ ಮೋಸ ಬರುವಹಾಗೆ ತೋರಿತು. ಅಂದು ನಮ್ಮ ಮಂಡಲದಲ್ಲಿ ಉದ್ಯೋಗಸ್ಥರೊಳಗೆ ಲಂಚ ತಿನ್ನುವವರೇ ಅಧಿಕರಾಗಿದ್ದರು ಈಗಲೇ ನಮ್ಮ ಮೇಲಧಿಕಾರಿಗಳು ಮೊದಲಿನವರ ಬದಲಾಗಿ ಹೊಸಬರು ಬರುವವರಾದರು. ಎಲ್ಲರಿಗಿಂತಲೂ ಕಷ್ಟಪಟ್ಟು ಹೆಚ್ಚು ಕೆಲಸ ಮಾಡುತ್ತಿದರೂ ನಾನು ಕೆಲಸ ಚೆನ್ನಾಗಿ ಮಾಡುತ್ತಿರಲಿಲ್ಲವೆಂದು ಸಿಟ್ಟಾಗುತ್ತ ಬಂದುದರಿಂದ, ನನ್ನ ಹಿತೇಷ್ಟುಗಳ ಉಪದೇಶದಿಂದ ಸಿರಸ್ತೇದಾರರಿಗೆ ಮೂರು ಸಲ ಹಿರಣ್ಯದಾನ ಮಾಡಿದೆನು ; ಎಷ್ಟು ಸಲವೋ, ಈಗ ಚೆನ್ನಾಗಿ ಜ್ಞಾಪ್ತಿಗೆ ಬಾರದು, ವಸ್ತ್ರದಾನಮಾಡಿದೆನು. ಅತನ ಮಗುವಿಗೆ ಹಾಲು ಬೇಕಾಗಿ ಬಂದುದರಿಂದ ಎರಡು ಸಲ ಸವತ್ಸಕ ಗೋದಾನವನ್ನೂ ಮಾಡಿದೆನು. ಕೊಟ್ಟದಾನಗಳನ್ನು ಹೇಳಿಕೊಳ್ಳಲಾಗದು. ನಾನು ಇಂತಹ ಗುಪ್ತದಾನಗಳನ್ನು ಇನ್ನೂ ಎಷ್ಟೆಷ್ಟನ್ನೋ ಮಾಡಿದೆನು. ಈ ಹೇತುವಿನಿಂದ ದಾನಗಳನ್ನು ಮಾಡಲಾಗಿ ಉಳಿದ ಹಣ ನನಗೂ ನನ್ನ ಭಾರ್ಯೆಗೂ ನಿತ್ಯೈಕಾದಶೀ ವ್ರತದ ಭುಕ್ತಿಗಾದರೂ ಸಾಲದಿತ್ತು ಹೀಗಿರುತ್ತಿರಲು ನನ್ನ ಹೆಂಡತಿ ಜ್ವರಬಾಧಿತೆಯಾಗಿ, ನಮ್ಮ ಗ್ರಾಮದಲ್ಲಿ ಧನ್ವಂತರಿಗೆ ಎರಡನೆಯವನೆಂದು ಪ್ರಸಿದ್ಧಿಗೇರಿದ ವೈದ್ಯಶಿಖಾಮಣಿ ಯೊಬ್ಬನಿಂದ, ಇಪ್ಪತ್ತೊಂದು ಉಪವಾಸಗಳು ಹಾಕಲ್ಪಟ್ಟು, ಅಕಸ್ಮಿಕವಾಗಿ ಸ್ವರ್ಗಸ್ಥೆಯಾದಳು. ಆ ಹುಡಿಗಿಯು ಸಾಯುವಿಕೆಯಿಂದ ನನಗೀ ಲೋಕದಮೇಲೆ ವಿರಕ್ತಿಯುಂಟಾಯಿತು ಆ ಸಮಯದಲ್ಲಿಯೆ ಋಣ ಕೊಟ್ಟವರು ಕಠಿನಚಿತ್ತರಾಗಿ ನನ್ನನ್ನು ಸೆರೆಮನೆಗೂ ಕಳುಹುವುದಕ್ಕೆ ಯತ್ನಿಸುತ್ತಿದ್ದರು ಈ ಇಷ್ಟು ಕಾರಣಗಳಿಂದಲೂ ನನಗೆ ಸಂಸಾರವೆಂಬುದು ಮಹಾರಣ್ಯದ ಹಾಗೆ ತೋರಲಾಗಿ, ಸರ್ವಸಂಗಗಳನ್ನೂ ಪರಿತ್ಯಜಿಸಿ ಮುಮುಕ್ಷುವಾದ ಯೋಗಿಯಾಗ ಬೇಕೆಂಬ ಬುದ್ಧಿನನ್ನಲ್ಲಿ ಹುಟ್ಟಿತು. ಆದುದರಿಂದ ನಾನು ನಮ್ಮ ತಾಯನ್ನು ಸೋದರ ಮಾವನ ಮನೆಗೆ ಕಳುಹಿಸಿಕೊಟ್ಟು, ಮುಂದಾಗಿ ಸಾಲಗಾರರ ಬಾಧೆ ತಪ್ಪಿಸಿಕೊಳ್ಳುವುದಕ್ಕೆ ದೇಶತ್ಯಾಗಮಾಡಿ, ದಕ್ಷಿಣಯಾತ್ರೆ ಮಾಡಬೇಕೆಂಬ ಉದ್ದೇಶದಿಂದ ಬಂದು ವಿಶಾಖಪಟ್ಟಣವನ್ನು ಸೇರಿದೆನು. ಆಗಲಾ ಪಟ್ಟಣದಲ್ಲಿರುವ ನನ್ನ ಬಾಲಮಿತ್ರನೊಬ್ಬನು ನನ್ನನ್ನು ನೋಡಿ ನನ್ನ ದುರವಸ್ಥೆ ಕೇಳಿ ವಿಚಾರಪಟ್ಟು, ನನಗೆ ನೂರು ರೂಪಾಯಿ ಕೊಟ್ಟನು. ಮರುದಿನ ದುದಯಕಾಲದಲ್ಲಿ ನಾನು ಸಮುದ್ರ

ತೀರಕ್ಕೆ ಹೋಗಿರಲು, ಧೂಮನೌಕೆಯೊಂದು ಆಗಲೇ ರೇವಿಗೆ ಬಂತು. ಅದು ಎಲ್ಲಿಗೆ ಹೋಗುವುದೆಂದು ವಿಚಾರಿಸಲಾಗಿ, ಚೆನ್ನಪುರಿಗೆ ಹೋಗುವುದೆಂದು ಅಲ್ಲಿರುವರೊಬ್ಬರು ಹೇಳಲು - ಶೀಘ್ರವಾಗಿ ಹೊರಟು ಹೋಗಬೇಕೆಂಬ ಅಭಿಲಾಷೆಯುಡೆಸೆಯಿಂದಲೂ, ದುಸ್ಸಹವಾದ ಋಣ ಪ್ರದಾತರ ಬಾಧೆ ತಪ್ಪಿಸಿಕೊಳ್ಳಬೇಕೆಂಬ ಉದ್ದೇಶದಿಂದಲೂ, ಸಮುದ್ರಯಾನವು ಶಾಸ್ತ್ರನಿಷಿದ್ಧವೆಂದು ತಿಳಿದವನಾದರೂ, ತರುವಾಯ ಪ್ರಾಯಶ್ಚಿತ್ತ ಮಾಡಿಸಿಕೊಳ್ಳಬಹುದೆಂದೆಣಿಸಿ, ಅನ್ನ ಸತ್ರಕ್ಕೆ ಹೋಗಿ ಬೇಗನೆ ಊಟಮಾಡಿ ಬಂದು ೧೮೭೫ನೆಯ ವರ್ಷದ ಮಾರ್ಗಶಿರ ಮಾಸದಲ್ಲಿ ಭಾನುವಾರ ದಿನ ವೊಂದು ಚಿಕ್ಕ ದೋಣಿಯನ್ನು ಹತ್ತಿ ಹೋಗಿ, ಹೊಗೆಯ ಹಡಗನ್ನೇರಿದೆನು. ಇಪ್ಪತ್ತೇಳನೆಯ ವರ್ಷದಲ್ಲಿ ನನಗೆ ದೇಶಾಂತರ ಯಾತ್ರೆಯೆಂದು ನನ್ನ ಜಾತಕದಲ್ಲಿಯೇ ಬರೆಯಲ್ಪಟ್ಟಿದೆ. ಹತ್ತಿದ ಜಾಮದಲ್ಲಿಯೆ ಹಡಗು ಹೊರಟು ನಾಲ್ಕನೆಯ ದಿನ ಪ್ರಾತಃಕಾಲದಲ್ಲಿ ನನ್ನನ್ನು ಚೆನ್ನಪುರಿಗೆ ಕೊಂಡುಹೋಗಿ ಬಿಟ್ಟಿತು. ಹೊಗೆ ಹಡಗಿನ ಅವಸ್ಥೆ ಈಗಿನ ಕಾಲದಲ್ಲಿ ಸಮುದ್ರಯಾತ್ರೆ ಮಾಡುವರೆಲ್ಲರಿಗೂ ತಿಳಿದುದೆ ಯಾದುದರಿಂದ ನಾನಿಲ್ಲಿ ವಿವರಿಸುವ ಅವಶ್ಯವಿಲ್ಲ. ಒಂದು ವೇಳೆಗೆ, ಸಮುದ್ರಯಾತ್ರೆ ಮಾಡದ ಶಿಷ್ಟರ ಲಾಭಕ್ಕಾಗಿ ವಿವರಿಸುವೆನೆಂದರೂ, ಹೊಗೆ ಹಡಗೇರಿ ತರುವಾಯ ಮರಳಿ ಇಳಿಯುವವರೆಗೂ ನನಗೆ ದೇಹಸ್ಮೃತಿಯೇ ಇರಲಿಲ್ಲ. ನನಗೆ ತಿಳಿದುದೇನೆಂದರೆ - ನನ್ನ ಹೊಟ್ಟೆಯಲ್ಲಿ ಯಾವುದೋ ವಿಕಾರವಾರಂಭವಾಗಿ ಆ ದಿನ ತಿಂದ ಅನ್ನಮಾತ್ರವೇ ಅಲ್ಲದೆ ಚಿಕ್ಕಂದಿನಿಂದಲೂ ಹೊಟ್ಟೆಯೊಳಗಿರುತ್ತಿದ್ದ ಪಿತ್ತವೆಲ್ಲವೂ ವಾಂತಿಯಾದುದು, ದೇಹವೆಲ್ಲವೂ ತೂಗಿದಂತಾಗಿ ಏಳುವುದಕ್ಕೆ ಕೂಡ ಶಕ್ತಿಬಾರದೆ ಕಣ್ಣು ಮುಚ್ಚಿಕೊಂಡು ಶವದ ಹಾಗೆ ಒಂದು ಮೂಲೆಯಲ್ಲಿ ಬಿದ್ದುದು - ಇಷ್ಟು ಮಾತ್ರವೇ. ಈಗ ಇನ್ನೊಂದು ಸಂಗತಿಕೂಡ ನೆನಪಿಗೆ ಬರುತ್ತಿದೆ. ನನ್ನ ಚಿಕ್ಕಂದಿನಲ್ಲಿ ನಾನು ಅಷ್ಟೊಂದು ಉಯ್ಯಾಲೆಯಲ್ಲಿ ತೂಗಿಸಿಕೊಳ್ಳುತ್ತಿರಲಿಲ್ಲ. ಹಡಗಿನಲ್ಲಿರುತ್ತಿದ್ದ ಮೂರು ದಿನಗಳಲ್ಲಿಯೂ ನನಗೆ ಯಾವಜ್ಜೀವವೂ ಸಾಕಾಗುವಷ್ಟು ಉಯ್ಯಾಲೆಯ ತೂಗಾಟ ವುಂಟಾಯಿತು. ಆ ಸೌಖ್ಯ ವನುಭವೈಕವೇದ್ಯವೇ ಅಲ್ಲದೆ ಹೇಳಿ ತೀರಿಸುವುದಕ್ಕೆ ಶಕ್ತಿಸಾಲದು. ನಾನು ಹಡಗಿನಿಂದ ಕೆಳಕ್ಕಿಳಿದು ದಡಕ್ಕೆ ಹೋದ ಮೇಲೆಯೂ ಕೆಲವು ದಿನಗಳವರೆಗೂ ನನಗೆ ಉಯ್ಯಾಲೆಯಲ್ಲಿ ತೂಗಿಸಿ ಕೊಂಡಂತೆಯೇ ಭ್ರಮೆಯಾಗುತ್ತಿತ್ತು. ನನಗೀ ಡೋಲಿಯ ಕ್ರೀಡೆ ಮೊದಲಾದ ವೈಭವಗಳನ್ನುಂಟು ಮಾಡಿದವನು ನಮ್ಮ ಮುಖ್ಯಪ್ರಾಣದೇವರೇ.

ಭಕ್ತವತ್ಸಲನಾದುದರಿಂದ ವಾಯುದೇವರು ಭಕ್ತನಾದ ನಾನು ಒಂಟಿಗನಾಗಿ ಹೋಗುವುದನ್ನು ನೋಡಿ ಸಹಿಸಲಾರದೆ ತನ್ನ ಮಹಾಬಲತ್ವ ಸಾರ್ಥಕವಾಗುವಂತೆ, ಸಮುದ್ರದೊಳಗೆಲ್ಲ ತೀರ ಮಾರ್ಗವಾಗಿಯೇ ನನಗೆ ಸಂಗಡಿಗನಾಗಿ ಬಂದು ನನಗೀ ಕ್ರೀಡಾ ಸೌಖ್ಯಗಳನ್ನು ಪ್ರಸಾದಿಸಿದನು. ವಾಯು ಮಹಿಮೆಯಿಂದುಂಟಾದ ವಿಕಾರವೂ, ವಾಂತಿಯೂ, ನನಗೆ ಅಸೌಖ್ಯವನ್ನುಂಟು ಮಾಡಿತೆಂದು ನೀವು ಎಣಿಸುವಿರೋ ಏನೋ, ಆದರೆ ನಿಜವನ್ನು ವಿಚಾರಿಸಲಾಗಿ, ನನಗವು ಒಳ್ಳೆಯ ವೈದ್ಯರಹಾಗೆ ಒಳಗಣ ಕಲ್ಮಷವನ್ನು ಹೋಗಗೊಳಿಸಿ ಆರೋಗ್ಯವನ್ನೇ ಉಂಟು ಮಾಡಿ ನನ್ನನ್ನು ಮಹಾಬಲನ ಹಾಗೆ ಸತ್ವಸಂಪನ್ನನನ್ನಾಗಿ ಮಾಡಿದುವು. ನಾನು ಹಡಗಿನಲ್ಲಿರುತ್ತಿದ್ದ ಮೂರುದಿನ ವುಪವಾಸವ್ರತ ಕೈಕೊಂಡಿದ್ದ ಸಂಗತಿಯನ್ನು ಬುದ್ಧಿವಂತರಾದ ನೀವು ಇದಕ್ಕೆ ಮೊದಲೇ ಊಹಿಸದಿರಲಾರಿರಿ. ನನ್ನ ಭಾಗ್ಯವನ್ನೇನೆಂದು ಹೇಳಲಿ ! ಅದರಲ್ಲಿ ಕಡೆಯದಿನ ಏಕಾದಶಿ ಕೂಡ ಆಯಿತು. ಆ ಕಡೆಯದಿನದ ನಿರಾಹಾರ ಪುಣ್ಯಕ್ಕೆ ಯಾವುದಾದರೂ ಸರಿಯುಂಟೇ ? ಉಳಿದ ಎರಡು ದಿನಗಳ ಫಲವೂ ಹೊಗೆಯ ಹಡಗೇರಿದ ಪಾಪಕ್ಕೆ ಪರಿಹೋದರೂ, ಹರಿವಾಸರ ದಿನದ ಶುಷ್ಕೋಪವಾಸದ ಪುಣ್ಯಫಲವು ನನಗೆ ಹೆಚ್ಚಾಗಿ ಉಳಿಯದಿರದು. ಶ್ರೀಹರಿಯ ಕರುಣಾಕಟಾಕ್ಷವುಳ್ಳವರಿಗೆ ಎಲ್ಲಿ ಹೋದರೂ ಪುಣ್ಯಕ್ಕೆ ಲೋಪವಿಲ್ಲ. ಆ ಮೇಲಿನ ಚರಿತ್ರೆಯನ್ನು ಕೇಳಿರಿ.

---

## ಎರಡನೆಯ ಪ್ರಕರಣವು.

---

ನಾಲ್ಕನೆಯದಿನ ದ್ವಾದಶಿಯ ಪಾರಣೆಗೆ ಅನುಕೂಲವಾಗಿ ಪ್ರಾತಃಕಾಲದಲ್ಲಿಯೆ ಹೊಗೆಯಹಡಗು ಚೆನ್ನಪುರಿಯ ರೇವನ್ನು ಸೇರಿತು. ಹಡಗು ಲಂಗರು ಹಾಕಿದೊಡನೆ ಯೆಷ್ಟೋ ಸಣ್ಣದೋಣಿಗಳು ಅಲ್ಲಿಗೆ ಬರಲು, ನಾನೊಂದು ದೋಣಿಯನ್ನೇರಿ ತೀರಕ್ಕೆ ಹೋದೆನು. ತೀರದಿಂದ ನೂರು ಗಜನಡೆಯುವುದರೊಳಗಾಗಿ ಎತ್ತಿನ ಬಂಡಿಯೊಂದು ಕಣ್ಣಿಗಿದಿರಾಯಿತು.

"ಊರಿಗೆ ಹೋಗುವುದಕ್ಕೆ ಬಾಡಿಗೆಗೆ ಬಂಡಿ ತೆಗೆದುಕೊಂಡು ಬರುವೆಯಾ" ಎಂದು ನಾನಾ ಬಂಡಿಗಾರನನ್ನು ಕೇಳಿದೆನು. ಅವನೇನೋ ಅರವದಲ್ಲಿ ಹೇಳಲಾಗಿ ನನಗೆ ತಿಳಿಯದೆ "ನಿನಗೆ ತೆಲುಗು ಬರುವುದೇ"! ಎಂದಾತನನ್ನು ಕೇಳಿದೆನು. ಆಮೇಲೆ ನಮಗಿಬ್ಬರಿಗೂ ಈ ಕೆಳಗಿನಂತೆ ಸಂಭಾಷಣೆ ನಡೆಯಿತು.

* * * * *

ನಾನು - “ ನನ್ನನ್ನು ಹಣ ತೆಗೆದು ಕೊಂಡು ಅನ್ನ ಹಾಕುವ ಮನೆಗೆ ಕರೆದುಕೊಂಡು ಹೋಗಬೇಕು. ಹೋಗುವೆಯಾ ?”

ಬಂಡಿಗಾರ - “ ಅನ್ನ ಹಾಕುವ ಮನೆಗೆ ಕೊಂಡು ಹೋಗಿ ಬಿಡಬೇಕೇ?”

ನಾನು - “ ಅಹುದು, ಹೊಗೆಬಂಡಿ ಏರುವ ಸ್ಥಳಕ್ಕೆ ಸಮೀಪವಾಗಿರುವ ಮನೆಗೆ ತೆಗೆದುಕೊಂಡು ಹೋಗು. ತಿಳಿಯಿತೇ ?”

ಬಂಡಿಗಾರ - “ ತಿಳಿಯಿತು. ಮುಕ್ಕಾಲು ರೂಪಾಯಿ, ಉಕ್ಕಾರುಂಗೊ.”

ನಾನು - “ ಮುಕ್ಕಾಲು ರೂಪಾಯಿ ಮಾತ್ರವೇ ಅಲ್ಲದೆ ಇನ್ನು ಉಕ್ಕಾರುಂಗೊ*ಏನು? ಆ ಮೇಲೆ ತೊಂದರೆಮಾಡದೆ ಈಗಲೆ ಸರಿಯಾಗಿ ಹೇಳಿಬಿಡು.”

ಬಂಡಿಗಾರ - “ ಅನ್ನ ಸತ್ರಕ್ಕೆ ಕೊಂಡು ಹೋಗಿ ಬಿಡುತ್ತೇನೆ. ಕುಳಿತುಕೊ. ಮುಕ್ಕಾಲು ರೂಪಾಯಿ ಕೊಡು.” ಎಂದು ಮೂರು ಬೆರಳು ತೋರಿಸಿದನು.

ಅವನ ಮಾತುಗಳಲ್ಲಿ ಕೆಲವು ನನಗೆ ಅರ್ಥವಾಗದೆ ಹೋದರೂ, ಕೊಡಬೇಕಾದ ಹಣವಿಷ್ಟೇ ಎಂದು ಸ್ಪಷ್ಟವಾಗಿ ತಿಳಿದುದರಿಂದ ಬಂಡಿಯನ್ನೇರಿ ಕುಳಿತುಕೊಂಡೆನು. ಅವನು ಬಂಡಿಯನ್ನು ಬೀದಿಯಲ್ಲಿ ಹೊಡೆದು ಕೊಂಡು ಬರುತ್ತಿರಲು, ಬೀದಿಯ ಎರಡು ಕಡೆಯಲ್ಲಿಯೂ ಚಲುವಾದುಪ್ಪರಿಗೆಗಳೂ ದಿವ್ಯ ಗೃಹಗಳೂ ಕಣ್ಣಿಗೆ ಹಬ್ಬವನ್ನುಂಟು ಮಾಡಿದುವು. ನಡುವೆನಡುವೆ ಹಲಿಗೆಯಮೇಲೆ ದೊಡ್ಡ ಅಕ್ಷರಗಳಿಂದ “ —ರವರ ಅನ್ನ ಸತ್ರ” ವೆಂದು ಬರೆಯಲ್ಪಟ್ಟಿತ್ತು. ಅವುಗಳ ಸಂಖ್ಯೆ ನೋಡಿ - ಒಂದು ಬೀದಿಯಲ್ಲಿ ಇಷ್ಟು ಅನ್ನ ಸತ್ರಗಳಿಡುವುದಕ್ಕೆ ಚೆನ್ನಪುರಿಯವರು ಎಂತಹ ಧರ್ಮಾತ್ಮರೋ ಎಂದು ಆಶ್ಚರ್ಯಪಡತೊಡಗಿದೆನು. ಹೀಗೆ ಆಶ್ಚರ್ಯಪಡುತ್ತಿದ್ದಾಗಲೇ ಬಂಡಿಯವನು ‘ ಸುಬ್ಬರಾಮ ಅಯ್ಯರವರ ಅನ್ನಸತ್ರ’ ವೆಂದು ಬರೆದಿರುವ ಸ್ಥಳದಲ್ಲಿ ಬಂಡಿನಿಲ್ಲಿಸಿ, ಇಳಿ ! ಎಂದು ಬಾಗಿಲು ತೆರೆದನು. ಅನ್ನ ಸತ್ರಕ್ಕೆ ಅಲ್ಲ ; ಹಣಕೊಟ್ಟು ಉಣ್ಣುವ ಮನೆಗೆಂದು ಹೇಳಿ, ನಾನು ಇಳಿಯದೆ . ಕೂತುಕೊಳ್ಳಲು, ಬಂಡಿಯವನು ಬಂದು ತನ್ನ ಭಾಷೆಯಿಂದ ನಾಲ್ಕು ಕೂಗುಹಾಕಿ, ನನ್ನ ಕೈ ಹಿಡಿದೆಳೆದು ನನ್ನ ಮೂಟೆಯನ್ನು ತೆಗೆದು ಕೆಳಕ್ಕೆ ಬಿಸಾಡಿದನು. ಪರದೇಶವಾದುದರಿಂದ

* ‘ ಉಕ್ಕಾರುಂಗೊ’ ಎಂಬುದು ‘ ಕೂತು ಕೊಳ್ಳಿರಿ’ ಎಂಬ ಅರ್ಥದ ತಮಿಳು ಶಬ್ದವು. ಸತ್ಯರಾಜಾಚಾರ್ಯನಿಗೆ ತಮಿಳು ತಿಳಿಯದುದರಿಂದ ಬಂಡಿಗಾರನು ಮುಕ್ಕಾಲು ರೂಪಾಯಿ ಮಾತ್ರವೇ ಅಲ್ಲದೆ ಇನ್ನೂ ಏನನ್ನೊ ಹೆಚ್ಚಾಗಿ ಕೇಳಿದನೆಂದು ಆತನು ಭ್ರಮೆ ಪಟ್ಟನು.

ಆತನೇನಾದರೂ ನನ್ನನ್ನು ಹೊಡೆದುಬಿಡುವನೆಂಬ ಭಯದಿಂದ ಕೂಡಲೇ ಬಂಡಿಯಿಂದ ಕೆಳಕ್ಕಿಳಿದು, ಮೂರು ಪಾವಲಿಕೈಗೆ ಹಾಕಿ ಆತನನ್ನು ಕಳುಹಿಸಿಕೊಟ್ಟು, ಅಡಿಗೆ ಮಾಡಿಹಾಕುವವರ ಮನೆ ಎಲ್ಲಿದೆಯೊ ಕಂಡುಕೊಳ್ಳಬೇಕೆಂಬ ಉದ್ದೇಶದಿಂದ ಒಳಕ್ಕೆ ಹೋಗಿ, "ಇದು ಅನ್ನಸತ್ರವೇ ?" ಎಂದು ಅಡಿಗೆ ಮಾಡುತ್ತಿದ್ದ ಬ್ರಾಹ್ಮಣನನ್ನು ಕೇಳಿದೆನು. "ಅಹುದು ; ಊಟಕ್ಕೆ - ಭೋಜನಕ್ಕೆ ಕಾಲು ರೂಪಾಯಿ - ನಾಕ್ಕಾಣೆ" ಎಂದವನು ನಾಲ್ಕು ಬೆರಳು ತೋರಿಸಿದನು. ಆ ಮಾತಿನಿಂದ ನನಗೆ ಅನ್ನಸತ್ರವೆಂಬುದರ ಅರ್ಥತಿಳಿದು, ನನ್ನ ಮೂಟೆಯನ್ನು ಕೆಳಕ್ಕಿಳಿಸಿ "ನನಗೆ ದ್ವಾದಶಿಯ ಪಾರಣಕ್ಕೆ ಶುಚಿಯಾಗಿ ಅಡಿಗೆ ಮಾಡಿ ಹಾಕುವಿರಾ ?" ಎಂದು ಕೇಳಿದೆನು. ಬೇಕಾದ ಹಾಗೆ ಶುಚಿಯಾಗಿ ಅಡಿಗೆ ಮಾಡಿ ಹಾಕುವೆನೆಂದು ಆತನು ಉತ್ತರಕೊಟ್ಟನು. ಆ ಮೇಲೆ ನಾನು "ಬ್ರಾಹ್ಮಣ ಸಂತರ್ಪಣೆಗೆ ಯೋಗ್ಯರಾದ ರೊಬ್ಬದ್ವೈತ ಬ್ರಾಹ್ಮಣನಿಲ್ಲಿ ದೊರೆಯುವನೇ ?" ಎಂದಾತನನ್ನು ಕೇಳುತ್ತಿರಲು - ಹೊರಗೆ ಕೂತುಕೊಂಡಿದ್ದ ಬ್ರಾಹ್ಮಣನೊಬ್ಬನು ಬಂದು ತಾನೇ ದ್ವಾದಶಿಯ ಬ್ರಾಹ್ಮಣನಾಗಿ ಬರುವೆನೆಂದು ಹೇಳಿದನು. ನಾನದಕ್ಕೆ ಸಂತೋಷಿಸಿ, ಸ್ನಾನ ಮಾಡುವುದಕ್ಕೆದ್ದು, ಆತನು ತೋರಿಸಿದ ನೀರನಲ್ಲಿಯಲ್ಲಿ ಶಿರಃಸ್ನಾನಮಾಡಿ, ಒದ್ದೆಬಟ್ಟೆಯನ್ನು ಒಣಗಹಾಕಿ ಉಟ್ಟುಕೊಂಡು ಶುಚಿಯಾಗಿ, ಹೊಗೆಯ ಹಡಗೇರಿದ ಪಾಪ ಹೋಗುವುದಕ್ಕಾಗಿ ಸಹಸ್ರ ಗಾಯತ್ರೀ ಜಪಮಾಡಿ, ಹಳೆಯ ಜನಿವಾರ ತೆಗೆದು ಹೊಸತನ್ನು ಹಾಕಿಕೊಂಡು, ಪಂಚಮುದ್ರೆಗಳನ್ನೂ ದ್ವಾದಶಪುಂಡ್ರಗಳನ್ನೂ ಧರಿಸಿ, ಗೋವಿಂದನಾಮ ಸ್ಮರಣೆ ಮಾಡುತ್ತ, ಎಲೆಯ ಮುಂದೆ ಕುಳಿತು ಕೊಂಡೆನು. ಅನ್ನಸತ್ರದ ಅಧಿಕಾರಿ ಎರಡು ಎಲೆಗಳಲ್ಲಿ ಮುಂದಾಗಿ ಅನ್ನ ಬಡಿಸಿದನು. ಆ ತರುವಾಯ ಹುಳಿ ತಂದು, ನಾನು ಬೇರೆ ಬಡಿಸೆಂದು ಹೇಳುತ್ತಿದ್ದರೂ, ನನ್ನ ಮಾತಿಗೆ ಕಿವಿಗೊಡದೆ, ಅನ್ನದಮೇಲೆಯೆ ಬಡಿಸಿ ಹೋದನು. ಅಷ್ಟರಲ್ಲಿ ದ್ವಾದಶಿಯ ಪಾರಣೆಗೆ ಬರುವೆನೆಂದ ಬ್ರಾಹ್ಮಣನು, ವಿಭೂತಿ ಹಚ್ಚಿಕೊಂಡು, ತಾನು ಅದುವರೆಗೆ ಉಟ್ಟು ಕೊಂಡಿರುತ್ತಿದ್ದ ಬಟ್ಟೆಗಳಲ್ಲಿಯೇ ಬಂದು ಎರಡನೆಯ ಎಲೆಯ ಮುಂದೆ ಕುಳಿತನು. 'ಮಡಿಕಟ್ಟಿಕೊಂಡು ಬಾರಯ್ಯಾ' ಎಂದು ನಾನು ಹೇಳಿದರೂ ನನ್ನ ಮಾತನ್ನು ಲಕ್ಷ್ಯಮಾಡದೆ ಕೊಂಚ ಹೊತ್ತು ಕುಳಿತಿದ್ದು, ಬಳಿಕ ಎದ್ದು ಬೀದಿಯಲ್ಲಿ ಅಲ್ಪಶಂಕೆಗೆ ಹೋಗಿಬಂದು, ತನ್ನ ಬಟ್ಟೆಗಳೇ ಮಡಿಗಳೆಂದು ಹೇಳುತ್ತ, ಮರಳಿ ಮೊದಲಿನ ಬಟ್ಟೆಗಳಲ್ಲಿಯೆ ಬಂದು ಕುಳಿತುಕೊಂಡನು. ಆಗ ನಾನಾತನ

ಮುಖವನ್ನು ನೋಡಿ ವಿಭೂತಿ ರೇಖೆಗಳಿರುವುದರಿಂದ ಸ್ಮಾರ್ತ ಬ್ರಾಹ್ಮಣ ನೆಂದು ತಿಳಿದುಕೊಂಡು, ವ್ರತಭಂಗಕ್ಕೆ ಶಂಕಿಸಿ, ಎದ್ದು ಹೋಗೆಂದು ಹೇಳ ಬೇಕೆಂಬ ಮಾತು ನಾಲಿಗೆಯವರೆಗೆ ಬಂದರೂ ತಡೆದುಕೊಂಡು, ಎಲೆಯ ಮುಂದೆ ಕುಳಿತಿರುವ ಬ್ರಾಹ್ಮಣನನ್ನು ಎದ್ದು ಹೋಗೆಂಬುದರಿಂದ ದೋಷ ಬರುವುದೆಂದೆಣಿಸಿ, ವಿಷಣ್ಣನಾದರೂ ಸುಮ್ಮನಾದೆನು. ಪಾಪ! ಆ ಬ್ರಾಹ್ಮಣನು 'ದ್ವೈತ' ಎಂದು ನಾನು ಹೇಳಿದಮಾತಿಗೆ 'ಅದ್ವೈತ' ಎಂದು ಗ್ರಹಿಸಿ ಹೀಗೆ ಮಾಡಿರಬಹುದು.

"ಇತರರಿಗೆ ಬಡಿಸಬೇಕು, ಬೇಗ ಪರಿಷೇಚನೆ ಮಾಡು" ಎಂದು ನಮ್ಮ ಅನ್ನಪ್ರದಾತನು ತೊಂದರೆ ಮಾಡಿದುದರಿಂದ ಪಂಥಿಯಿಲ್ಲದೆ ಅದೇ ಬ್ರಾಹ್ಮಣನಿಗೆ ಆಪೋಶನವಿತ್ತೆನು. ನಮ್ಮ ಸತ್ರಾಧಿಕಾರಿ ಬಹಳ ದೊಡ್ಡ ಮನುಷ್ಯ. ನನಗೆ ದ್ವಾದಶಿಯ ವ್ರತ ದಕ್ಕುವಹಾಗೆ ಅಗಸೆಯೆಲೆಯ ಪಲ್ಯಮಾಡಿದನು. ಇನ್ನಾವುದೋ ಒಂದು ಪಲ್ಯ ಮಾಡಿದನು; ಆದರೆ ನನಗೆ ಅದರ ಹೆಸರು ತಿಳಿಯಲಿಲ್ಲ. ಆ ಮಾಡಿದ ಪಲ್ಯವು ಕೂಡ ಕಲಸಿ ಕೊಳ್ಳುವುದಕ್ಕೆ ಸಾಲದೆ, ನಮ್ಮ ದೇಶದಲ್ಲಿ ಉಪ್ಪಿನಕಾಯಿ ಬಡಿಸಿದಹಾಗೆ ಸ್ವಲ್ಪಸ್ವಲ್ಪವಾಗಿ ಬಡಿಸಿ, ಮರಳಿ ಕೇಳಿದರೂ ಪುನಃ ತರಲಿಲ್ಲ. ಬೇಳೆಯ ತೊವ್ವೆ ಹಾಕೆಂದರೆ ಮಾಡಲೇ ಇಲ್ಲವೆಂದನು. ತುಪ್ಪ ಬೇಕೆಂದು ಕೇಳಿದುದಕ್ಕೆ ಅನ್ನ ಬಡಿಸಿದ ಕೈಯಿಂದಲೇ ಸಣ್ಣ ಬಟ್ಟಲಲ್ಲಿ ತಂದು ಒಂದಿಷ್ಟು ಸುರಿದು ಹೋದನು. ಆಗ ನನಗೆ ಏತರಿಂದ ಊಟಮಾಡಲೆಂದು ತೋಚದೆ ಅದಕ್ಕೆ ಮೊದಲೇ ಅನ್ನದಮೇಲೆ ಬಡಿಸಿ ಹೋದ ಹುಳಿಯಿಂದಲೆ ಅನ್ನ ಕಲಸಿ, ಸಣ್ಣ ಮೆಣಸಿನ ದುರ್ಗಂಧದಿಂದ ರುಚಿಯಿಲ್ಲದೆ ಹೋದರೂ ಕಣ್ಣುಮುಚ್ಚಿ ನಾಲ್ಕುಮುದ್ದೆ ನುಂಗಿದೆನು. ಇಷ್ಟರಲ್ಲಿ ಅಡಿಗೆಯ ಬ್ರಾಹ್ಮಣನು ಹುಳಿಯ ಕೊಳತಪ್ಪಲಿನ್ನೂ ಅನ್ನದ ತಪ್ಪಲಿಯನ್ನೂ ತೆಗೆದುಕೊಂಡು ಹೋಗಿ ಯಾರಿಗೋ ಶೂದ್ರರಿಗೆ ಬಡಿಸಿ, ನನಗೆ ಬಡಿಸುವುದಕ್ಕಾಗಿ ಹಿಂತಿರುಗಿ ತಂದನು. ಶೂದ್ರರು ನೋಡಿದ ಅನ್ನ ತಿನ್ನುವುದಕ್ಕೆ ನನಗೆ ಮನಸ್ಸೊಪ್ಪದೆ ಹೋದರೂ, ನಮ್ಮ ದ್ವಾದಶಿಯ ಹಾರುವಯ್ಯನು ಮಾತ್ರ ಮರಳಿ ಬಡಿಸಿಕೊಂಡು ಆ ಹುಳಿಯಿಂದಲೇ ಅರ್ಧಸೇರು ಅಕ್ಕಿಯ ಅನ್ನವುಂಡನು. ತಪ್ಪಲಿಯಲ್ಲಿ ಅನ್ನ ಕೊಂಚವೇ ಇರುವುದನ್ನು ನೋಡಿ 'ಅಷ್ಟು ಅನ್ನವನ್ನು ಶೂದ್ರರೇ ಉಂಡರೇ' ಎಂದು ನಾನು ಕೇಳಿದೆನು. 'ಇಲ್ಲ. ನೀವು ಸ್ನಾನಕ್ಕೆ ಹೋಗಿದ್ದಾಗ ಬ್ರಾಹ್ಮಣರ ಒಂದು ಪಂಕ್ತಿಗೆ ಹಾಕಿ ಎಬ್ಬಿಸಿದೆನು' ಎಂದು ಸತ್ರಾಧಿಕಾರಿ ಹೇಳಿದನು. ಆ ಮಾ

ತುಗಳಿಂದ ನನ್ನ ಮನಸ್ಸೊಡೆದು ಏಕಾದಶಿಯ ನಿರಾಹಾರ ಫಲವಷ್ಟೂ ವ್ಯರ್ಥವಾಯಿತೆಂದು ಎಷ್ಟೋ ವ್ಯಸನವಾಯಿತು. ಆ ಸಂಗತಿಯನ್ನೇ ಕುರಿತು ನಾನು ಯೋಚಿಸುತ್ತಿರಲಾಗಿ, ಸತ್ರಾಧಿಕಾರಿ ಸಾರು ಎಂಬುವ ತಂದು, ಸಣ್ಣಮೆಣಸು ಹಾಕಿದ ಹುಣಿಸೆಹಣ್ಣಿನ ನೀರು ತಂದು ಎಲೆಯಲ್ಲಿ ಸುರಿಸಿದನು. ಆ ಭೋಜನಸೌಖ್ಯವನ್ನು ಬಾಯಿಂದ ಹೇಳಲು ಶಕ್ಯವಲ್ಲ. ನಾನೊಂದು ವೇಳೆಗೆ ಹೇಳಿದರೂ, ದೂರದೇಶದಲ್ಲಿರುವ ನೀವು ಗ್ರಹಿಸಲಾರದೆ ಹೋಗುವಿರಿ. ಆದುದರಿಂದ ಓ ಪಾಠಕರೇ! ನನ್ನ ಸತ್ಯಸಂಧತೆಯನ್ನಾದರೂ ಪರೀಕ್ಷಿಸುವುದಕ್ಕೆಂದು ನೀವು ಒಂದು ಸಾರಿ ಚೆನ್ನಪಟ್ಟಣಕ್ಕೆ ಬಂದು ೧೮೬ನೆಯ ಗೃಹ ಸಂಖ್ಯೆಯುಳ್ಳ ಸುಬ್ಬರಾಮಯ್ಯರವರ ಅನ್ನಸತ್ರದಲ್ಲಿ ಒಂದು ಸಲ ಊಟಮಾಡಿ, ಅನುಭವೈಕವೇದ್ಯವಾದ ಈ ಸೌಖ್ಯವನ್ನೊಂದು ಬಾರಿ ತಪ್ಪದೆ ಅನುಭವಿಸಿ ಹೋಗಿರಿ. ನಾನೀಗ ಮುಂದಾಗಿಯೇ ಹೇಳಿ ಬಿಡುವೆನು. ಅನ್ನದ ಮೇಲಣ ರುಚಿಯೇ ಹೋಯಿತೆಂದು ಆ ಮೇಲೆ ಮಾತ್ರ ನನ್ನನ್ನು ದೂಷಿಸಬೇಡಿರಿ. ಸತ್ಯವನ್ನು ಪರೀಕ್ಷಿಸುವವರು ಈ ಲೋಕದಲ್ಲಿ ಎಷ್ಟು ಕಷ್ಟಗಳನ್ನಾದರೂ ತಾಳಬೇಕು.

ಭೋಜನವಾದೊಡನೆಯೇ ನನಗಾಗಿಯೂ ನಮ್ಮ ಬ್ರಾಹ್ಮಣನಿಗಾಗಿಯೂ ಊಟದ ಬೆಲೆಯಾಗಿ ಕೊಡಬೇಕಾದ ಎಂಟಾಣೆಯನ್ನು ನಾನು ಕೊಟ್ಟು ತೀರಿಸಿದೆನು. ಅದಲ್ಲದೆ ನಮ್ಮ ಬ್ರಾಹ್ಮಣನಿಗೆ ಎರಡಾಣೆ ದಕ್ಷಿಣೆಕೊಟ್ಟು, ಅಲ್ಲಿಯ ಸಂಗತಿಗಳನ್ನು ಕೇಳುವುದಕ್ಕೆ ಆರಂಭಿಸಿದೆನು. ಕೊಂಚ ಹೊತ್ತು ಸಂಭಾಷಣೆ ನಡೆದ ತರುವಾಯ ನೀವೆಲ್ಲಿಗೆ ಹೋಗುವವರೆಂದಾತನು ನನ್ನನ್ನು ಕೇಳಿದನು. 'ಉಡಿಪಿ ಸುಬ್ರಹ್ಮಣ್ಯ ಮೊದಲಾದ ಯಾತ್ರೆಗಳನ್ನು ಸೇವಿಸ ಹೋಗುತ್ತಿರುವೆನು' ಎಂದು ನಾನು ಬದಲು ಹೇಳಿದೆನು. ಆಗಲಾ ಹಾರುವನು, ಎಷ್ಟೋ ನೀತಿವಾಕ್ಯಗಳನ್ನು ಹೇಳಿ, ತನ್ನ ದೇಶದಲ್ಲಿ ಎಲ್ಲರೂ ಮೋಸಗಾರರೆಂದೂ, ಸಂಗಡಿಗರಿಲ್ಲದೆ ಒಂಟಿಯಾಗಿ ಪ್ರಯಾಣ ಮಾಡುವುದು ಅಪಾಯಕರವೆಂದೂ, ಮಲೆಯಾಳದಲ್ಲಿ ಎಷ್ಟೋ ಚಿತ್ರವಿಚಿತ್ರಗಳಿವೆ ಎಂದೂ, ತನ್ನೊಡನೆ ಬಂದುದಾದರೆ ಅವೆಲ್ಲವನ್ನೂ ನನಗೆ ತೋರಿಸಿ, ನನ್ನನ್ನು ಸುರಕ್ಷಿತವಾಗಿ ತಿರಿಗಿ ತೆಗೆದುಕೊಂಡು ಬರುವೆನೆಂದೂ ಹೇಳಿ, ನಾನೊಪ್ಪುವಂತೆ ಮಾಡಿ, ನನ್ನನ್ನು ಹೊಗೆಬಂಡಿಯ ಮೇಲೆ ಪಯಣ ಹೊರಡಿಸಿದನು. ಹೊಗೆಯ ಹಡಗಿನ ವೆಚ್ಚ ಮೊದಲಾಗಿ ಇದುವರೆಗೆ ಹದಿನೆಂಟು ರೂಪಾಯಿ ಹೋಗಲಾಗಿ, ನನ್ನ ಹತ್ತಿರ ಆಗ ಎಂಬತ್ತೆರಡು ರೂಪಾಯಿ ಇತ್ತು. ಅವುಗಳಲ್ಲಿ ನಾಲ್ಕು ರೂಪಾಯಿ ಹತ್ತಾಣೆ ನನಗೂ, ಬೇರೆ ನಾಲ್ಕು ರೂಪಾ

ಯಿಹತ್ತಾಣೆ ಕೈಕಡವಾಗಿ ತನಗೂ,ಒಟ್ಟಗೆ ಒಂಬತ್ತು ರೂಪಾಯಿ ನಾಲ್ಕಾಣೆ ನನ್ನ ಕೈಯ್ಯಿಂದ ತೆಗೆದುಕೊಂಡು, ನಮ್ಮ ಬ್ರಾಹ್ಮಣನು ತೂತ್ತುಕುಡಿಗಾಗಿ ಮೂರನೆ ತರಗತಿಯ ಎರಡು ಟಿಕೀಟನ್ನು ತಂದನು. ಮರುದಿನದುದಯದಲ್ಲಿ ಏಳೂಕಾಲು ಗಂಟೆಗೆ ನಾವಿಬ್ಬರೂ, ಅಂಚೆ ತೆಗೆದುಕೊಂಡು ಹೋಗುವ ಹೊಗೆಬಂಡಿಯನ್ನೇರಿ ಎಳಂಬೂರಿಂದ ಅಯೋಮಾರ್ಗವಾಗಿ ಹೊರಟೆವು. ಹೊರಡುವಾಗ ಬಂಡಿಯಲ್ಲಿ ಕುಳಿತುಕೊಂಡಿದ್ದ ನಮ್ಮ ಬ್ರಾಹ್ಮಣನು "ರಾಹುಕಾಲ * ಯಾವಾಗ?" ಎಂದು ನನ್ನನ್ನು ಕೇಳಿದನು. ರಾಹುಕಾಲವೆಂದರೇನೋ ನನಗೆ ತಿಳಿಯದೆಂದು

---

* ತಮಿಳು ದೇಶದಲ್ಲಿ ರಾಹುಕಾಲವೆಂದೂ ಗುಳಿಕಕಾಲವೆಂದೂ ಏನದಿನದ ಸಮಯದಲ್ಲಿ 1½ - 1½ ತಾಸನ್ನು ವಿಂಗಡಿಸುವರು. ರಾಹುಕಾಲವೆಂದರೆ ಕೆಟ್ಟ ಸಮಯವು; ಗುಳಿಕಕಾಲವೆಂದರೆ ಸುಮುಹೂರ್ತವು. ಇದು ಆಗಾಗ ಬದಲಾಗುವುದೆಂದಿಲ್ಲ. ಯಾವುದಾದರೊಂದು ವಾರದ ದಿನಗಳ ರಾಹು ಗುಳಿಕಕಾಲಗಳೇ ಮುಂದಿನ ಎಲ್ಲಾ ವಾರಗಳಲ್ಲಿ ಆಯಾ ದಿನಗಳಿಗೆ ಸರಿಯಾಗಿ ಬರುತ್ತಿವೆ. ಆಂಧ್ರವೇ ಮೊದಲಾದ ಇತರ ದೇಶಗಳಲ್ಲಿ ಈ ಪದ್ಧತಿ ಪ್ರಚಾರದಲ್ಲಿರುವಂತೆ ತೋರುವುದಿಲ್ಲ. ವಾಚಕರ ಸೌಕರ್ಯಕ್ಕಾಗಿ ಆ ಪಟ್ಟಿಯೇ ಕೆಳಗೆ ತೋರಿಸಲ್ಪಟ್ಟಿದೆ.

| ದಿನ. | ರಾಹುಕಾಲ. | ಗುಳಿಕ ಕಾಲ. |
|---|---|---|
| ರವಿ. | ಸಂಜೆ. 4-30— 6- 0 | ಸಂ. 3- 0— 4-30 |
| ಸೋಮ. | ಪೂ. 7-30— 9- 0 | ಮ. 1-30— 3- 0 |
| ಕುಜ. | ಸಂ. 3- 0— 4-30 | ಮ. 12- 0— 1-30 |
| ಬುಧ. | ಮ. 12- 0— 1-30 | ಪೂ. 10-30—12- 0 |
| ಗುರು. | ಮ. 1-30— 3- 0 | ಪೂ. 9- 0—10-30 |
| ಶುಕ್ರ. | ಪೂ. 10-30—12- 0 | ಪೂ. 7-30— 9- 0 |
| ಶನಿ. | ಪೂ. 9- 0—10-30 | ಪೂ. 6- 0— 7-30 |

ನಾನು ಪ್ರತ್ಯುತ್ತರ ಕೊಟ್ಟೆನು. ರಾಹುಕಾಲದಲ್ಲಿ ಪ್ರಯಾಣಕ್ಕೆ ಹೊರಡ ಬಾರದೆಂದು ಅವನು ಹೇಳಿದನು. 'ನಮ್ಮ ದೇಶದಲ್ಲಿ ರಾಹುಕಾಲವೆಂದು ಪ್ರಮಾಣವಿಲ್ಲ; ವರ್ಜ್ಯಕಾಲದಲ್ಲಿ ಮಾತ್ರ ಹೊರಡರು' ಎಂದು ನಾನು ಹೇಳಿದೆನು. ನಿಮ್ಮ ಉತ್ತರ ದೇಶದವರು ಏನೂ ತಿಳಿಯದ ಮೂಢರೆಂದು ಅವನು ಹೇಳಿದನು. ಇಷ್ಟರಲ್ಲಿ ನಾವು ಏರಿದ ಹೊಗೆಬಂಡಿ ಹೊರಟು ನಡೆಯಲಾರಂಭಿಸಿತು. ನಮ್ಮ ಬ್ರಾಹ್ಮಣನು ದೇಶತಿಳಿದ ಅನುಭವಜ್ಞನಾದುದರಿಂದಲೂ, ದೇಶಭಾಷೆ ತಿಳಿದವನಾದುದರಿಂದಲೂ, ಎಷ್ಟೋ ಪ್ರಯಾಣಗಳನ್ನು ಮಾಡಿದವನಾದುದರಿಂದಲೂ, ಭದ್ರವಾಗಿರುವುದೆಂದು ನನ್ನ ಮೂಟೆಯನ್ನು ಕೂಡ ಆತನ ಸಂಚಿಯಲ್ಲಿಯೆ ಇಟ್ಟೆನು. ಆ ದಿನ ಮಧ್ಯಾಹ್ನ ಮೂರು ಗಂಟೆಯ ಹೊತ್ತಿಗೆ ಬಂಡಿ ಗೂಡಲೂರು ಬಳಿಯಲ್ಲಿ ಹತ್ತು ನಿಮಿಷ ನಿಲ್ಲಲಾಗಿ, ನಾವಲ್ಲಿ ಲಘುಶಂಕೆಗೆ ಹೋಗುವುದಕ್ಕಿಳಿದೆವು. ಇಷ್ಟರೊಳಗೆ ನಾವೇರಿದ ಬಂಡಿಯಲ್ಲಿ ನಮ್ಮ ಹತ್ತಿರವೇ ಬೇರೆ ಯಾರೋ ಹೊಸಬರು ಬಂದು ಕುಳಿತು ಕೊಂಡಿದ್ದರು. ನಾವು ತಿರಿಗಿ ಬಂದು ಕುಳಿತುಕೊಂಡ ಎರಡು ನಿಮಿಷದೊಳಗಾಗಿ ಬಂಡಿ ಮುಂದೆ ಹೊರಟಿತು. ಆಗ ನಮ್ಮ ಬ್ರಾಹ್ಮಣನು ಅವರೊಡನೆ ಅರವದಲ್ಲಿ ಪ್ರಸಂಗಿಸಲಾರಂಭಿಸಿದನು. ಅವರಾರೆಂದು ನಾನು ತೆಲುಗಿನಲ್ಲಿ ಕೇಳಲಾಗಿ, ಅವರು ಹೊಲೆಯರೆಂದೂ, ಹೊಗೆಬಂಡಿಯಲ್ಲಿ ಪ್ರಯಾಣ ಮಾಡುವವರು ಆಚಾರವ್ಯವಹಾರಗಳನ್ನು ಯೋಚಿಸ ಬಾರದೆಂದೂ, ನಮ್ಮ ಬ್ರಾಹ್ಮಣನು ನನಗೆ ಹಿತಬೋಧೆಮಾಡಿದನು. ಈ ಪ್ರಯಾಣದ ದೆಸೆಯಿಂದ ಹೊಲೆಯರ ಸಂಪರ್ಕವಾಯಿತಲ್ಲಾ ! ಎಂದು ನನ್ನಲ್ಲಿ ನಾನೇ ಬೇಸರಪಟ್ಟು ಸಂಜೆ ಆರು ಗಂಟೆಗೆ ಮಾಯಾವರದ ಹತ್ತಿರ ಬಂಡಿ ಏಳು ನಿಮಿಷನಿಲ್ಲಲಾಗಿ, ಇಳಿದು ಮತ್ತೊಂದು ಬಂಡಿಗೆ ಹೋಗಿ ಕುಳಿತುಕೊಂಡೆನು. ಏಳೂಕಾಲು ಗಂಟೆಯ ಹೊತ್ತಿಗೆ ಬಂಡಿ ಪುನಃ ಕುಂಭಕೋಣದ ಹತ್ತಿರ ನಿಂತಾಗ, ನಮ್ಮ ಬ್ರಾಹ್ಮಣನು ಬಂಡಿಯಿಳಿದು ನನಗಾಗಿ ಏನನ್ನೋ ಫಲಹಾರಕ್ಕೆ ತಂದನು. ಆದರೆ ನಾನು ಹೊಲೆಯಬಟ್ಟೆಯಲ್ಲಿ ಏನೂ ತಿನ್ನದುದರಿಂದ, ನನ್ನ ಪಾಲಿಗೆ ಬಂದುದನ್ನು ಕೂಡ ಆತನೇ ತಿಂದು ಬಂಡಿಯೊಳಕ್ಕೆ ಹೋದನು. ಆ ರಾತ್ರಿ ನಾವಿಬ್ಬರೂ ಮರಳಿ ಒಟ್ಟಿಗೆ ಕೂಡಲಿಲ್ಲ. ಸ್ಥಳ ಇಕ್ಕಟ್ಟಾದುದರಿಂದ ಮಲಗುವುದಕ್ಕೆ ತಾಣವಿಲ್ಲದೆ, ನನಗೆ ಚೆನ್ನಾಗಿ ನಿದ್ರೆ ಬರಲಿಲ್ಲ. ಮರುದಿನ ಹೊತ್ತಾರೆಯಲ್ಲಿ ಅಯಿದೂ ಕಾಲು ಗಂಟೆಗೆ ನಾವಿಬ್ಬರೂ ಹೊರಗಡೆಗೆ ಹೋಗುವುದಕ್ಕಾಗಿ ಮಧುರೆಯ ಹತ್ತಿರ ಇಳಿದೆವು. ಅವನು ಎಷ್ಟು ಹೊತ್ತಾದರೂ ತಿರಿಗಿ ಬರಲಿಲ್ಲ. ಕಾಲುಗಂಟೆಯ

ಹೊತ್ತಿಗೆ ಮರಳಿ ಬಂಡಿ ಹೊರಡುವುದಕ್ಕೆ ಸಿದ್ಧವಾಗಲು, ಆತನು ಯಾವುದಾದ
ರೊಂದು ಬಂಡಿಯಲ್ಲಿ ಏರದಿರನೆಂದು ನೆನಸಿ, ಗಡಿಬಡಿಯಲ್ಲಿ ನಾನೊಂದು ಬಂಡಿ
ಯೇರಿದೆನು. ಆ ದಿನ ಹನ್ನೊಂದು ಗಂಟೆಯ ಹೊತ್ತಿಗೆ ಬಂಡಿ ತೊತ್ತುಕುಡಿಗೆ ಬಂ
ದುಸೇರಿತು. ಬಂಡಿಯ ಹತ್ತಿರ ನಿಂತು ಕೊಂಡು ಎಷ್ಟು ಹುಡುಕಿದರೂ, ಬ್ರಾಹ್ಮ
ಣನ ಕುರುಹು ಕಂಡುಬರಲಿಲ್ಲ. ಆ ಬ್ರಾಹ್ಮಣನನ್ನು ಮಧುರೆಯಲ್ಲಿ ಕಳ್ಳರು
ಹೊಡೆದರೋ, ಆಲಸ್ಯವಾದುದರಿಂದ ಬಂಡಿ ತಪ್ಪಿಹೋಯಿತೋ ಮತ್ತೇನು
ಆಪತ್ತು ಬಂತೋ, ಅಲ್ಲದಿದ್ದರೆ ಬಾರದಿರುವನಲ್ಲ; ಆತನಿಗೆ ದ್ರೋಹಚಿಂತನೆ
ಯೇ ಇದ್ದ ಪಕ್ಷದಲ್ಲಿ, ರಾತ್ರಿ ಎಲ್ಲಿಯೋ ಕತ್ತಲೆಯಲ್ಲಿ ಓಡಿಹೋಗದೆ,
ಹೊತ್ತಾರೆ ಮಧುರೆಯ ವರೆಗೆ ಏಕೆ ಬರುವನು ? ಆ ಧನವು ನನಗೆ ಧರ್ಮಾ
ರ್ಥವಾಗಿಯೇ ಬಂದುದಾದುದರಿಂದ, ಹೋದ ಹಣ ಮರಳಿ ಬಾರದೆಂದು ನಿರಾಶೆ
ಯುಂಟಾದಪೋತ್ತೆ, ಕಳ್ಳರ ಕೈಗೆ ಬೀಳದೆ ಬ್ರಾಹ್ಮಣನ ಕೈಗೆ ಸಿಕ್ಕಿ, ನನಗೆ ಸತ್ಪಾ
ತ್ರದಾನ ಲಭಿಸಿತೆಂದು ಸಂತೋಷಿಸಿದೆನು.

ಈ ಬ್ರಾಹ್ಮಣನ ನಿಮಿತ್ತವಾಗಿ ನಾನು ಹುಡುಕುತ್ತಿರಲು, ದೈವಿಕವಾಗಿ ನನ
ಗೊಬ್ಬ ತೆಲುಗು ಬ್ರಾಹ್ಮಣನು ಇದಿರುಬಿದ್ದು, ನನ್ನ ಸಂಗತಿ ಕೇಳಿ ವಿಚಾರ
ಪಟ್ಟು, ತನ್ನ ಮನೆಗೆ ತೆಗೆದುಕೊಂಡು ಹೋಗಿ ನನಗಂದು ಊಟವಿಟ್ಟು, ಮರು
ದಿನ ನನ್ನನ್ನು ತನ್ನ ಬಂಡಿಯಲ್ಲೇರಿಸಿ ಕೊಂಡು, ತೆಗೆದುಕೊಂಡು ಹೋಗಿ
ಕೆಲವು ದಿನಗಳೊಳಗೆ ದಕ್ಷಿಣ ಮಲೆಯಾಳಕ್ಕೆ ರಾಜಧಾನಿಯಾದ ತಿರುವನಂತ
ಪುರಕ್ಕೆ ಮುಟ್ಟಿಸಿದನು. ಆ ಪಟ್ಟಣದಲ್ಲಿ ನಾನೊಂದು ತಿಂಗಳ ವರೆಗಿದ್ದೆನು. ಆ ಪಟ್ಟ
ಣವನ್ನು ಸೇರಿದ ಮರುದಿನವೇ ನನಗೆ ಅಲ್ಲಿ ತೆಲುಗು ದೇಶದ ಒಬ್ಬ ಬ್ರಾಹ್ಮಣ
ನೋಗಿಯೊಡನೆ ಮೈತ್ರಿಯುಂಟಾಯಿತು. ಆತನು ನಮ್ಮ ಪೂರ್ವದ ಋಷಿಗ
ಳಿಗೆ ಸಮಾನವಾದ ಮಹಿಮೆಯೂ ತಪಶ್ಶಕ್ತಿಯೂ ಉಳ್ಳವನು. ಅಂತಹ ಮಹಾನು
ಭಾವರು ಲೋಕದಲ್ಲಿ ಅಲ್ಲಲ್ಲಿ ಇರುವರಾದರೂ ಅವರ ಮಹತ್ವ ತಿಳಿದುಕೊಳ್ಳತಕ್ಕ
ವರು ಮಾತ್ರ ಈಗಿನ ದಿನಗಳಲ್ಲಿ ವಿಶೇಷವಾಗಿ ಕಂಡುಬರುವುದಿಲ್ಲ. ನೋಡಿದೊ
ಡನೆಯೇ ನನಗೆ ಆತನ ಮಹಾನುಭಾವತ್ವವು ಜಟ್ಟಿನಂತೆ ಬೆಳೆದ ಗಡ್ಡದಿಂದಲೇ
ತಿಳಿದುಬಂದುದು. ಕೆಲವು ದಿನಗಳ ವರೆಗೆ ಆತನ ಶುಶ್ರೂಷೆಮಾಡಿ "ನಮ್ಮವರು
ಸ್ತ್ರೀ ಮಲೆಯಾಳವೆನ್ನುತ್ತಾರಲ್ಲವೇ, ಅದಾವುದು ?" ಎಂದು ನಾನವನನ್ನು
ರಹಸ್ಯವಾಗಿ ಕೇಳಿದೆನು. ಆತನು ಮೊತ್ತಮೊದಲು ಮರ್ಮ ಬಿಟ್ಟು ಹೇಳದೆ
'ಇದುವೇ ಸ್ತ್ರೀಮಲೆಯಾಳ' ವೆಂದು ಅಪ್ಪಣೆ ಕೊಟ್ಟನು. ಬುದ್ಧಿವಂತನಾದು

ದರಿಂದ ನಾನಾ ಮಾತುಗಳನ್ನು ಅಷ್ಟರಲ್ಲಿಯೆ ನಂಬದೆ " ಇದುವೇ ಸ್ತ್ರೀ ಮಲೆಯೊಳವಾದರೆ ಇಲ್ಲಿ ಗಂಡಸರು ಏಕೆ ಇರುವರು? ಸ್ತ್ರೀ ಮಲೆಯೊಳದಲ್ಲಿ ಗಂಡಸರ ಅವಶ್ಯಕವಿಲ್ಲದೆಯೇ ಗಾಳಿಗೆ ಮಕ್ಕಳು ಹುಟ್ಟುವರೆಂದು ನಮ್ಮ ದೇಶದಲ್ಲಿ ತಿಳಿದ ಹಿರಿಯರು ನಂಬಿಕೆಯಾಗಿ ಹೇಳಿದ್ದರು. ಅದು ಇಲ್ಲಿ ಎಲ್ಲಿಯೂ ಕಂಡು ಬರಲಿಲ್ಲ. ಬ್ರಾಹ್ಮಣರಲ್ಲಿ ಹುಡುಗಿಯರು ಪ್ರಬುದ್ಧೆಯರಾದಮೇಲೆ ಮದುವೆ ಮಾಡುವುದೂ, ಶೂದ್ರಿಯರು ಸೆರಗು ಹಾಕಿಕೊಳ್ಳದೆ ಇರುವುದೂ, ಸ್ತ್ರೀಯರಲ್ಲಿ ಬಹಳ ಮಂದಿ ಮದುವೆಮಾಡಿಕೊಳ್ಳದೆ ತಮ್ಮ ಮನಸ್ಸಿಗೊಪ್ಪಿದವರನ್ನಿಟ್ಟುಕೊಂಡು ಮನಸ್ಸು ಬಂದಾಗ ಬಿಟ್ಟುಬಿಡುವುದೂ, ಪುರುಷರಿಗೆ ಭಾಗ್ಯವಿಲ್ಲದೆ ಕುಟುಂಬದ ಸೊತ್ತೆಲ್ಲವನ್ನೂ ಸ್ತ್ರೀಯರು ಅನುಭವಿಸುತ್ತಿರುವುದೂ, ಹಡೆದ ಮಕ್ಕಳಿಲ್ಲದಿದ್ದರೆ ಪಟ್ಟಕ್ಕೆ ಸಹೋದರಿಯರ ಮಕ್ಕಳು ಬರುವುದೂ - ಇಷ್ಟೆಯಲ್ಲದೆ ನಮ್ಮದೇಶಕ್ಕೂ ಈ ದೇಶಕ್ಕೂ ಏನೊಂದೂ ಹೆಚ್ಚುಕಡಿಮೆ ಕಣ್ಣಿಗೆ ಬೀಳುವುದಿಲ್ಲ. ಇದು ಸ್ತ್ರೀ ಮಲೆಯೊಳವಲ್ಲ. ಸ್ತ್ರೀ ಮಲೆಯೊಳವೆಲ್ಲಿದೆಯೋ ಹೇಳದೆ ಬಿಡೆನು" ಎಂದು ನಾನಾತನ ಕಾಲುಗಳ ಮೇಲೆ ಬಿದ್ದು ಏಳಲಿಲ್ಲ ಈ ಪ್ರಕಾರ ನಾನಾತನಿಗೆ ಪರಮಭಕ್ತಿಯಿಂದ ಒಂದು ತಿಂಗಳ ತನಕ ಶುಶ್ರೂಷೆ ಮಾಡುತ್ತಿರಲು, ನನ್ನಲ್ಲಿ ಅಪರಿಮಿತಾನುಗ್ರಹವುಂಟಾಗಿ ಒಂದು ದಿನ ಪ್ರಾತಃಕಾಲದಲ್ಲಿ ನನ್ನನ್ನು ಆತನು ಸ್ತ್ರೀ ಮಲೆಯೊಳಕ್ಕೆ ದಾರಿ ತೋರಿಸುತ್ತೇನೆ, ಬಾರೆಂದು ಪಟ್ಟಣಕ್ಕೆ ವಾಯುವ್ಯ ದಿಕ್ಕಿನಲ್ಲಿ ಎರಡು ಹರದಾರಿ ದೂರಕ್ಕೆ ಕರೆದುಕೊಂಡು ಹೋಗಿ, ಒಂದು ಅಡವಿಯನ್ನು ಪ್ರವೇಶಿಸಿ ಕೊಂಚದೂರ ನಡೆದು ಒಂದು ಸಣ್ಣ ಬೆಟ್ಟವೇರಿಸಿ, ಅದರಲ್ಲಿರುವ ಗುಹೆಯೊಂದು ತೋರಿಸಿ, ಸ್ತ್ರೀ ಮಲೆಯೊಳಕ್ಕೆ ಇದುವೇ ದಾರಿ, ಭಯಪಡದೆ ಹೋಗೆಂದು ಹೇಳಿದನು. ಪ್ರಾಣಾಧಿಕರಾದ ನನ್ನ ದೇಶಸ್ಥರಲ್ಲಿ ನನ್ನ ಹಾಗೆಯೇ ಸ್ತ್ರೀ ಮಲೆಯೊಳಕ್ಕೆ ಹೋಗಲುದ್ದೇಶಿಸಿರುವವರು ಇರುವ ಪಕ್ಷದಲ್ಲಿ, ಅವರು ಇತರರಾರನ್ನೂ ಕೇಳಿ ತಿಳಿದುಕೊಳ್ಳಬೇಕಾದ ಕೆಲಸವಿಲ್ಲದಂತೆ, ಅವರಿಗೆ ವಿವರವಾಗಿ ತಿಳಿಸುವುದಕ್ಕಾಗಿ, ನಡೆಯುವಾಗ ನಾನಾ ದಾರಿಯನ್ನೆಲ್ಲಾ ಅಳೆದು, ಗುರುತುಗಳು ಹಾಕಿಕೊಂಡು, ತರುವಾಯ ಪುಸ್ತಕದಲ್ಲಿ ಬರೆದುಕೊಂಡೆನು. ಒಂದಕ್ಷರವಾದರೂ ಹೆಚ್ಚು ಕಡಿಮೆ ಮಾಡದೆ ನಾನಾಗ ಬರೆದುಕೊಂಡ ಹಾಗೆಯೇ ನಿಮಗದನ್ನು ಈಗ ಹೇಳುವೆನು. ಶ್ರದ್ಧೆವಹಿಸಿ ಕೇಳಿರಿ. ಪಟ್ಟಣದ ಹೊರಗಿರುವ ದೊಡ್ಡ ಅರಳಿಯ ಮರ ಮೊದಲ್ಗೊಂಡು ಉಸುಬಿನಲ್ಲಿ ಮೂಗಿಗೆ ಸರಿಯಾಗಿ ವಾಯುವ್ಯ ದಿಕ್ಕಿಗೆ ಮೂರು ಮೊಳಕಡಿಮೆ ಮುಕ್ಕಾಲು ಹರದಾರಿ ದೂರ ನಡೆದ

ಬಳಿಕ, ಬೇಲದ ಮರದ ಹತ್ತಿರ ಎಡಗಡೆಗೆ ತಿರುಗಬೇಕು. ಅಲ್ಲಿಂದ ಎಡಗೈ ಪಾರ್ಶ್ವವಾಗಿ ಕಾಲು ಹರದಾರಿ ನಡೆದು, ಸಣ್ಣ ಮುತ್ತುಗದ ಗಿಡ ಕಣ್ಣಿಗೆ ಬಿದ್ದೊಡನೆಯೇ ಬಲಗಡೆಗೆ ತಿರಿಗಿ, ಹರದಾರಿಯ ಮೇಲೆ ಮೂರು ಮೊಳ ಹೋದರೆ, ಸಣ್ಣ ಅಡವಿ ಕಣ್ಣಿಗೆ ಬೀಳುವುದು. ಆ ಅಡವಿ ಹೊಕ್ಕು ಬಸುರಿಯ ಮರಕ್ಕೆ ಇದಿರಾಗಿರುವ ನಡುದಾರಿಯಲ್ಲಿ ಎಡದ ಪಾರ್ಶ್ವಕ್ಕೂ ಬಲದ ಪಾರ್ಶ್ವಕ್ಕೂ, ಮುಂದಕ್ಕೂ ಹಿಂದಕ್ಕೂ ಪಕ್ಕಕ್ಕೂ ಕೊಂಕುಡೊಂಕಾಗಿ, ದಾರಿ ಹೋಗುವ ಹಾಗೆ ಅರ್ಧ ಹರದಾರಿಯಮೇಲೆ ಒಂಬತ್ತು ಮಾರು, ಮೂರು ಮೊಳ, ಎರಡು ಅಡಿ, ನಾಲ್ಕಂಗುಲ ನಡೆದೊಡನೆ ಒಂದು ಪರ್ವತ ಕಾಣುವುದು. ಆ ಬೆಟ್ಟದಮೇಲೆ ಮೆಲ್ಲನೆ ೧೦ ಮಾರು ದೂರದ ವರೆಗೇರಿ, ಮೂಲೆಯಾಗಿ ಮೂರು ಮೊಳದಷ್ಟು ಕೆಳಗಿಳಿದೊಡನೆಯೇ ಕುರುಚೇಟಲ ಹೊದರ ಮರೆಯಲ್ಲಿ ಒಂದು ಗುಹೆ ಕಾಣುವುದು. ಈ ಅಳತೆ ಮರೆತುಹೋದ ಪಕ್ಷದಲ್ಲಿ ದಾರಿತಪ್ಪಿ ಸಂಕಟಗಳಲ್ಲಿ ಬೀಳ ಬಹುದಾದುದರಿಂದ, ಇದನ್ನು ನೀವು ಸಂಧ್ಯಾವಂದನೆ ಮಾಡುವ ಹಾಗೆ, ನಿತ್ಯವೂ ತ್ರಿಕಾಲಗಳಲ್ಲಿಯೂ ಸ್ಮರಿಸಿರಿ. ನಾನು ಆ ಗುರೂಪದೇಶವನ್ನು ಭಗವದ್ವಾಕ್ಯವನ್ನಾಗಿ ನಂಬಿಕೊಂಡು, ಅಂಧಕಾರ ಬಂಧುರವಾದ ಆ ಗುಹೆಯಲ್ಲಿ ಪ್ರವೇಶಿಸಿ ಸ್ವಲ್ಪದೂರ ನಡೆಯುವಷ್ಟರೊಳಗೆ ಕಾಲುಜಾರಿ ಕೆಳಗೆ ಬೀಳುವುದಕ್ಕೆ ಆರಂಭವಾಯಿತು. ಈಪ್ರಕಾರ ಯೋಜನದೂರ ಬೀಳುವ ವರೆಗೆ ಸೆಕೆಯುಷ್ಟಷ್ಟಕ್ಕೆ ಹೆಚ್ಚಾಗಿ ದುಸ್ಸಹವಾಗಿ ಕಂಡು ಬಂದರೂ ಆ ಮೇಲೆ ಸೆಕೆಯುಷ್ಟಷ್ಟಕ್ಕೆ ಕಡಿಮೆಯಾಗಿ ಎಷ್ಟೋ ಮನೋಹರವಾಗಿತ್ತು. ಕೆಳಗೆ ಹೋದ ಹಾಗೆ ಭೂಮಿಯಲ್ಲಿ ಸೆಕೆ ಅಷ್ಟಷ್ಟಕ್ಕೆ ಹೆಚ್ಚುವುದೆಂದೂ, ಕೊಂಚದೂರ ಹೋದ ತರುವಾಯ ಅಗ್ನಿಮಯವಾಗಿ ಭೂಮಧ್ಯದಲ್ಲಿ ಸಮಸ್ತವೂ ಕರಗಿ ದ್ರವರೂಪವಾಗಿರುವುದೆಂದೂ, ನಾನು ಚಿಕ್ಕವನಾಗಿದ್ದಾಗ ಪಾಠಶಾಲೆಯಲ್ಲಿ ನಮ್ಮ ಉಪಾಧ್ಯಾಯನು ಹೇಳಿದ್ದನಾದರೂ, ಪ್ರಕೃತಿಶಾಸ್ತ್ರವೇತ್ತರೆನ್ನಿಸಿಕೊಳ್ಳುವ ಹೂಣಪಂಡಿತರು ಹೇಳುವ ಈ ಸಂಗತಿ ಅಸತ್ಯವೆಂದೂ, ನಮ್ಮ ಪುರಾಣಗಳೇ ನಿಜವೆಂದೂ, ನಾನೀಗ ಅನುಭವದಿಂದ ಕಂಡುಕೊಂಡೆನು. ಈ ವಿಷಯದಲ್ಲಿ ಸಂದೇಹವುಳ್ಳವರು ನನ್ನನ್ನು ಬಂದು ಕೇಳಿದ ಪಕ್ಷದಲ್ಲಿ ನಾನು ಸರ್ವವನ್ನೂ ಸರಹಸ್ಯಕವಾಗಿ ಹೇಳಿ, ಸಂಶಯ ನಿವೃತ್ತಿಮಾಡಿ ಕಳುಹುವೆನು. ಹೀಗೆ ಸ್ವಲ್ಪದೂರದ ವರೆಗೆ ಬಿದ್ದ ತರುವಾಯ ನನ್ನ ಕಾಲಿಗೆ ಏನೋ ಹತ್ತಿಯಂತೆ ಮೆತ್ತಗಾಗಿ ತಗಲಿತು. ಆಯಾಸಪಟ್ಟುದರಿಂದ ನಾನಾಗ ಅದರಮೇಲೆ ಕಾಲೂರಿಕುಳಿತುಕೊಂಡು, ಬೆನ್ನಮೇಲೆ ಹಿಂದಕ್ಕೊರಗಿದೆನು. ಆಗ ನಾನು ಹಾಸಿಗೆ

ಯಿಂದ ಮೆಲ್ಲನೆ ಜಾರುವ ಹಾಗೆ ತೋರಿತು. ಇಷ್ಟರವರೆಗೂ ನಾನು ಪ್ರತ್ಯಕ್ಷ ವಾಗಿ ನೋಡಿದುದು. ಪ್ರತ್ಯಕ್ಷಪ್ರಮಾಣವು ಸರ್ವೋತ್ಕೃಷ್ಟವಾದುದೆಂದು ಎಲ್ಲಾ ಮತದವರೂ ಅಂಗೀಕರಿಸಿದುದೇ ಯಲ್ಲವೆ ? ಹಾಗೆಯೇ ನನಗೆ ನಿದ್ರೆ ಬಂದುದು. ಆ ನಿದ್ದೆ ಎಷ್ಟು ದಿನಗಳತ್ತೋ, ಯಾವಯಾವ ದಾರಿಯಿಂದ ನಡೆದೆನೋ ನನಗಾಗ ತಿಳಿಯಲಿಲ್ಲವಾದರೂ, ನಿದ್ದೆ ತಿಳಿದು ನಾನು ಕಣ್ಣುಬಿಟ್ಟು ನೋಡುವಾಗ ಒಂದು ಗುಹೆಯ ಸಮೀಪದಲ್ಲಿ ಕಲ್ಲಿನ ಮೇಲೆ ಮಲಗಿದ್ದೆನು. ಸೂರ್ಯನು ಆಗಲೇ ಪಶ್ಚಿಮದಲ್ಲಿ ಉದಯಿಸುತ್ತಿದ್ದನು. ಇನ್ನು ಮುಂದೆ ಹೇಳ ಹೋಗುವ ರೀತಿ ಯಾಗಿ ಆ ದೇಶಾಚಾರಗಳು ನಮ್ಮ ದೇಶಾಚಾರಗಳಿಗೆ ವಿರುದ್ಧವಾದ ಹಾಗೆ ಯೇ, ಅಲ್ಲಿ ಸೂರ್ಯನು ಪಡುವಲಿಗೆ ಉದಯಿಸಿ ಮೂಡಲಲ್ಲಿ ಅಸ್ತಮಿಸುವನು. ಅಷ್ಟರವರೆಗೂ ನನಗೆ ಹಸಿವಾಗದಿದ್ದುದೂ, ದೇಹದಲ್ಲಿ ಗಾಯಗಳು ತೆಗ ಲದೆ ಇದ್ದುದೂ, ನಿದ್ದೆ ಬಂದುದೂ, ಇದೆಲ್ಲವೂ ನಮ್ಮ ಗುರು ಪ್ರಭಾವದಿಂದಲೇ ಕಂಡಿರಾ ! ನಿದ್ದೆಯಲ್ಲಿರುವ ವರೆಗೂ ಹಸಿವಿಲ್ಲದೆ ನಿದ್ದೆಯೆದ್ದೊಡನೆಯೇ ಉಂಟಾ ಗುವುದಕ್ಕೆ ಗುರುಕಟಾಕ್ಷವಲ್ಲದೆ ಬೇರೇನು ಕಾರಣವಿರಬಹುದು ?

## ಮೂರನೆಯ ಪ್ರಕರಣವು

ನಾನು ನಿದ್ರೆಯಿಂದೆದ್ದು ಕಣ್ಣು ತೆರೆದು ನೋಡುವಾಗ ಪಶ್ಚಿಮದಲ್ಲಿ ಸೂರ್ಯನು ಉದಯಿಸುತ್ತಿದ್ದನೆಂದು ಹಿಂದಿನ ಪ್ರಕರಣದಲ್ಲಿಯೇ ಹೇಳಿದೆನಲ್ಲವೆ ! ಏನೊಂದೂ ತಿಳಿಯದ ಹೊಸದೇಶದಲ್ಲಿ ಮೂಡಲಾವುದೋ ಪಡುವಲಾವುದೋ ಉಳಿದ ದಿಕ್ಕುಗಳು ಯಾವುವೋ ಸೂರ್ಯೋದಯದಿಂದಲ್ಲದೆ ಮತ್ತೆ ಹೇಗೆ ತಿಳಿದುಕೊಂಡೆನೆಂದು ನಿಮ್ಮಲ್ಲಿ ಬುದ್ಧಿವಂತರಾದಕೆಲವರಿಗೆ ಸಂದೇಹವುಂಟಾಗಬ ಹುದು. ಇದನ್ನೋದುವವರಿಗೆ ಇದರಲ್ಲಿ ಯಾವ ವಿಷಯದಲ್ಲಿಯೂ ಸಂದೇ ಹವಿರಲಾಗದಾದುದರಿಂದ ಸಹೇತುಕವಾಗಿಯೂ ತೃಪ್ತಿಕರವಾಗಿಯೂ ತಕ್ಕ ಸಮಾಧಾನ ಹೇಳಿ ಈಗಲೇ ಅವರ ಸಂಶಯ ನಿವಾರಣೆ ಮಾಡುವೆನು. “ ಸಂಶ ಯಾತ್ಮಾ ವಿನಶ್ಯತಿ” ಎಂಬ ಭಗವದ್ಗೀತಾ ಪ್ರಮಾಣವನ್ನು ನೀವು ತಿಳಿದವ ರೇ ಆದುದರಿಂದ ಅದನ್ನು ಯಾವಾಗಲೂ ಮನಸ್ಸಿನಲ್ಲಿಟ್ಟುಕೊಂಡು ಆಸ್ತಿಕ ಶಿರೋಮಣಿಗಳಾದ ನೀವು ಪ್ರಮಾಣಬುದ್ಧಿಯಿಂದ ನನ್ನ ವಾಕ್ಯಗಳನ್ನು

ವ್ಯಾಸವಾಕ್ಯಗಳೇ ಸರಿಯೆಂದು ಇದಿರಾಡದೆ ವಿಶ್ವಾಸಿಸಿ, ಮೇಲು ಹೊಂದ ಬೇಕಲ್ಲದೆ ನಾಸ್ತಿಕಾಧಮರಹಾಗೆ ಸಂದೇಹಪಟ್ಟು ಕೆಟ್ಟುಹೋಗ ಬಾರದು ಕಂಡಿರಾ! ನಾನು ನಿದ್ದೆಯಿಂದೆದ್ದು ಕಣ್ಣುಬಿಟ್ಟು ನೋಡುತ್ತಿರುವಾಗ ಅಂಗತ್ತಲಾಗಿ ಮಲಗಿದ್ದೆನು; ಆಗ ಕಣ್ಣಿಗೆ ಚೆಲುವಾಗಿ ಸೂರ್ಯಬಿಂಬವು ರತ್ನಕುಂಭದ ಹಾಗೆ ಭೂಮಿಗೆ ಮೊಳದಷ್ಟು ಮೇಲೆ ನನ್ನ ಎಡದಕಡೆಗೆ ದಿಙ್ಮಂಡಲದಲ್ಲಿ ಕೆಂಪಾಗಿ ಕಾಣುತ್ತಿತ್ತು. ಅದನ್ನು ನೋಡಿ ಹೊತ್ತುಮೊದಲು ನಾನು ಸೂರ್ಯನು ಅಸ್ತಮಿಸುತ್ತಿರುವನೆಂದು ಭ್ರಮಿಸಿದೆನಾದರೂ, ಕೆಳಕ್ಕೆ ಹೋಗದೆ ಸೂರ್ಯಬಿಂಬವು ಹಾಗೆಯೇ ಮೇಲೆ ಬರಲಾರಂಭಿಸಿದುದರಿಂದ ಸೂರ್ಯೋದಯವಲ್ಲದೆ ಅದು ಸೂರ್ಯಾಸ್ತಮಾನವಲ್ಲವೆಂದು ಕೊಂಚ ಹೊತ್ತಿನಲ್ಲಿಯೆ ಭ್ರಾಂತಿ ನಿವಾರಣೆ ಮಾಡಿಕೊಂಡೆನು. ಕರ್ಮಭೂಮಿಯಾದ ಭರತಖಂಡದಲ್ಲಿ ಕರ್ಮಪ್ರಧಾನವಾದ ಬ್ರಾಹ್ಮಣವರ್ಣದಲ್ಲಿ ಕರ್ಮಠರಾದ ವ್ಯಾಸರಾಮಾಚಾರ್ಯರಿಗೆ ಸುಪುತ್ರನಾಗಿ, ಕುಲಪವಿತ್ರನಾದ ನಾನು ಮರೆತಾದರೂ ನಿದ್ರೆಯಲ್ಲಾದರೂ, ಸದಾಚಾರ ವಿರುದ್ಧವಾಗಿ ಶಾಸ್ತ್ರನಿಷಿದ್ಧವಾದ ಉತ್ತರದಿಕ್ಕಿಗೆ ತಲೆಯಾಗಿ ಮಲಗಿರಲಾರೆನೆಂಬುದು ನಿಶ್ಚಯವು. ಪೂರ್ವದಲ್ಲಿ ಉತ್ತರದಿಕ್ಕಿಗೆ ತಲೆಯಿಟ್ಟುಕೊಂಡು ನಿದ್ರಿಸಿದ ದೋಷದಿಂದಲ್ಲವೇ ತಲೆ ಹೋಗಲಾಡಿಸಿಕೊಂಡ ವಿಘ್ನೇಶ್ವರನ ಮುಂಡಕ್ಕೆ ಜೋಡಿಸುವುದಕ್ಕೆ ಆನೆಯ ತಲೆ ಕಡಿಯಲ್ಪಟ್ಟುದು! ಆದುದರಿಂದ ಈಗ ನನ್ನ ತಲೆ ಇರುವ ದಿಕ್ಕು ತಪ್ಪದೆ ದಕ್ಷಿಣದಿಕ್ಕಾಗಿರಬೇಕಲ್ಲದೆ ಉತ್ತರದಿಕ್ಕಾಗಿರದು. ದಕ್ಷಿಣದ ಕಡೆಗೆ ತಲೆಯಾಗಿ ಆಕಾಶದ ಕಡೆಗೆ ದೃಷ್ಟಿ ಮಾಡಿ ಮಲಗಿರುವಾಗ ನನ್ನ ಎಡಗೈಯ ಬದಿ ಪಶ್ಚಿಮವಾಗಿರ ಬೇಕಾದುದರಿಂದ ಶಾಸ್ತ್ರಪ್ರಾಮಾಣ್ಯದಿಂದ ಸೂರ್ಯನು ಉದಯಿಸುವುದು ಪಡುವಲಲ್ಲದೆ ಮೂಡಲಲ್ಲವೆಂದು ತತ್ಕ್ಷಣವೇ ನಿಶ್ಚಯಿಸಿಕೊಂಡೆನು. ಈ ಪ್ರಕಾರ ಸೃಷ್ಟಿಯಲ್ಲಿ ಒಂದು ಅಪೂರ್ವ ಸತ್ಯವನ್ನು ಮಹಾದ್ಭುತವಾಗಿ ಕಂಡುಹಿಡಿದುದಕ್ಕಾಗಿ ನನ್ನಲ್ಲಿ ನಾನೇ ಆನಂದಿಸುತ್ತ ಕಣ್ಣು ಮುಚ್ಚಿಕೊಂಡು, ಈ ಹೊಸದೇಶದಲ್ಲಿ ನಾನು ಒಂಟಿಯಾಗಿ ಎಲ್ಲಿಗೆ ಹೋಗುವುದೋ ಭಗವಂತನೇ! ಎಂದು ಆಲೋಚಿಸಿಕೊಳ್ಳುತ್ತಿರುವಷ್ಟರಲ್ಲಿ, ಕೊಂಚ ಮೋಡವೆದ್ದು ಮಂದಾರವಾಗಿದ್ದುದರಿಂದಲೂ, ಮಾರ್ಗಾಯಾಸದಿಂದಲೂ, ನನಗೆ ಸೊಂಪಾಗಿ ನಿದ್ರೆಹಿಡಿಯಿತು. ಈಶ್ವರಾನುಗ್ರಹದಿಂದ ನನಗಾನಿದ್ದೆಯಲ್ಲಿ ದಿವ್ಯವಾದ ಸ್ವಪ್ನವೊಂದುಬಂದುದು. ಆ ಕನಸಿನಲ್ಲಿ ಹಸಿವಿನಿಂದ ನಾನು ಹಿಂದೆ ಹಾಸಿಗೆಯಮೇಲೆ ಆಯಾಸದಿಂದ ಒರಗಿ ನಿದ್ರೆಯಲ್ಲಿಯೇ ಜಾರಿದುದು ಮೊದ

ಕ್ಕೊಂಡು ಇಲ್ಲಿಗೆ ಬರುವ ವರೆಗೂ ನಡೆದ ಸರ್ವವೃತ್ತಾಂತವನ್ನೂ ಕಣ್ಣಾರೆ ನಿದರ್ಶನವಾಗಿ ನೋಡಿದೆನು. ಇದು ಪರಮರಹಸ್ಯವಾದ ಅರ್ಥವೇ ಆದರೂ ಶ್ರದ್ಧಾಳುಗಳಾದ ನಿಮಗೊಬ್ಬರಿಗೆ ಮಾತ್ರವೇ ಹೇಳುವೆನು. ನೀವೀ ಮರ್ಮವನ್ನು ಕರ್ಮಭ್ರಷ್ಟರಿಗೂ ವೇದಬಾಹ್ಯರಿಗೂ ನಾಸ್ತಿಕರಿಗೂ ವಿಶ್ವಾಸಹೀನರಿಗೂ ಹೇಳದೆ ಗೋಪ್ಯವಾಗಿಡಿರಿ. ನಾನು ಬೆನ್ನನೊರಗಿಸಿದ ಹಾಸಿಗೆ, ಭೂಮ್ಯಂತರಾಳದಲ್ಲಿ ಸಾಯಂಸಮಯದ ವರೆಗೂ ಮೆಲ್ಲನೆ ಅಧೋಮುಖವಾಗಿ ದಕ್ಷಿಣಕ್ಕೆ ಜಾರಿತು. ನನ್ನ ಹಾಗೆಯೇ, ಪಾಠಶಾಲೆಗಳಲ್ಲಿ ಗೋಡೆಗಳಿಗೆ ತಗಲಿಸಿಡುವ ದೇಶಪಟಗಳನ್ನು ನೋಡಿದ್ದ ನಿಮಗೆ ಮೇಲ್ಗಡೆ ಉತ್ತರವೆಂದೂ ಕೆಳಗಡೆ ದಕ್ಷಿಣವೆಂದೂ ತಿಳಿದಿರಬಹುದು. ಆ ಮೇಲೆ ಕತ್ತಲೆ ಮುಚ್ಚಿದ ತರುವಾಯ ರಾತ್ರಿಯೆರಡು ಜಾಮದವರೆಗೂ ಭೂಮಿಯೊಳಗೆ ಮಧ್ಯಭಾಗದಲ್ಲಿರುವ ಮಹಾವಾಯುಪಥದಲ್ಲಿ ದೇವತಾವಿಮಾನದಹಾಗೆ ದಶದಿಶೆಗಳಿಗೂ ನೂರುಯೋಜನದ ವರೆಗೆ ವ್ಯಾಪಿಸಿ, ಆ ಮೇಲೆ ಮತ್ತೊಂದು ಗುಹಾಮುಖದಲ್ಲಿ ನಾನು ನನ್ನ ಹಾಸಿಗೆಯೊಡನೆ ಏರಗಿದೆನು. ಆ ತರುವಾಯ ನನ್ನ ಹಾಸಿಗೆ ಮುಂಚಿನಂತೆಯೇ ಮೇಲಕ್ಕೆ ಜಾರಲಾರಂಭಿಸಿತು. ಆ ಮೇಲೆ ಭಗವನ್ಮಾಯೆಯಿಂದ ಆ ಹಾಸಿಗೆ ಆಕಸ್ಮಿಕವಾಗಿ ಅದೃಶ್ಯವಾಯಿತು. ಆಗ ನಾನು ಅಲ್ಲಿಂದ ಹಿಂದಿನಂತೆಯೇ ಮೇಲಕ್ಕೆ ಹೋಗುವುದಕ್ಕೆ ಮೊದಲುಮಾಡಿದೆನು. ಹಾಗೆ ಕೊಂಚದೂರ ಹೋದ ತರುವಾಯ ನನ್ನ ಶರೀರಕ್ಕೆ ದುಃಸ್ಸಹವಾದ ಸೆಕೆಯುಂಟಾಯಿತು. ಆ ಸೆಕೆ ಅಷ್ಟಕಷ್ಟಕ್ಕೆ ಕಡಿಮೆಯಾಗುತ್ತ ಬಂದು ನಾನು ಯೋಜನದೂರ ಹೋಗುವ ವೇಳೆಗೆ ನನ್ನ ಕಾಲಿಗೆ ಗಟ್ಟಿಯಾಗಿ ನೆಲ ತಗಲಿತು. ಆ ನೆಲದ ಮೇಲೆ ಸ್ವಲ್ಪ ದೂರ ನಡೆದು, ಗುಹೆಯಿಂದ ಹೊರಕ್ಕೆ ಬಂದು ಭೂಮಿಯಮೇಲೆ ನಾನೀ ಮೊದಲು ಹೇಳಿದ ಕಲ್ಲಿನ ಮೇಲೆ ಮಲಗುತ್ತಿರುವುದರೊಳಗಾಗಿ ಹೊತ್ತಾರೆ ಸೂರ್ಯೋದಯವಾಯಿತು. ಇಷ್ಟರಲ್ಲಿ ನನಗಾ ಸ್ವಪ್ನ ಹೋಗಿ ಎಚ್ಚರಾಯಿತು. ಸ್ತ್ರೀ ಮಲೆಯಾಳಕ್ಕೆ ಇದುವೇ ಸರಿಯಾದ ದಾರಿ. ಓ ಧೀಮಂತರಿರಾ! ಇದು ಕನಸೆಂದು ಭ್ರಮೆಪಟ್ಟು ಇವುಗಳ ಸತ್ಯವನ್ನು ಕುರಿತು ನೀವು ಒಂದು ವೇಳೆ ಸಂಶಯಪಡುವಿರಿ, ಕಂಡಿರೇ! ಹಾಗೆ ಸಂದೇಹಪಡಲಾಗದು. ಪ್ರಮಾಣಬದ್ಧರಾದ ನೀವು ಇದನ್ನು ಎರಡನೆಯ ವೇದವಾಕ್ಯವನ್ನಾಗಿ ವಿಶ್ವಾಸಿಸಬೇಕು. ಈ ಸ್ವಪ್ನವನ್ನು ವೇದವಾಕ್ಯವಾಗಿ ಏಕೆ ವಿಶ್ವಾಸಿಸ ಬೇಕೆನ್ನುವಿರೋ? ಹೇಳುವೆನು ಕೇಳಿರಿ. ಪೂರ್ವಕಾಲದಲ್ಲಿ ಮಂತ್ರದ್ರಷ್ಟೃಗಳಾದ ನಮ್ಮ ಮಹರ್ಷಿಗಳಿಗೆ ವೇದಗಳು ಪ್ರತ್ಯಕ್ಷವಾದ

ರೀತಿ ಇಂತಹುದೇಸರಿ. ಅವರು ಈಶ್ವರಧ್ಯಾನಮಾಡುತ್ತ ಕಣ್ಣುಮುಚ್ಚಿಕೊಂಡು ಚಿಂತನೆಮಾಡುತ್ತಿರಲು, ಈಶ್ವರ ಪ್ರಸಾದದಿಂದ ಆ ಮಹಾನುಭಾವರಿಗೆ ವೇದಗಳು ಸ್ವಪ್ನಗಳ ಹಾಗೆ ನಿದರ್ಶನವಾಗಿ ಸರ್ವಜನರಿಗೂ ಪರಮ ಪ್ರಮಾಣಗಳಾದುವು. ಈಶ್ವರಕಟಾಕ್ಷವು ಆಕಾಲದವರ ಮೇಲೆ ಮಾತ್ರವಿದ್ದು ಈ ಕಾಲದವರ ಮೇಲೆ ಇಲ್ಲದೆ ಹೋಗುವುದೆಂದು ಭಾವಿಸ ಬೇಡಿರಿ. ಮಹಾನುಭಾವರಾದ ಭಕ್ತರಿಗೆ ಯಾವಾಗಲೂ ಭಗವಂತನ ನಿರ್ಹೇತುಕಪಾಯಮಾನ ಕಟಾಕ್ಷವುಂಟಾಗಿರುವುದು. ಆದುದರಿಂದ ಹಿಂದಿನ ಹಾಗೆಯೇ ಈಶ್ವರಾನುಗ್ರಹದಿಂದ ನನಗೀಗ ದರ್ಶನಕೊಟ್ಟ ಈ ಕಡೆಯ ವಾಕ್ಯಗಳನ್ನು ನೀವೆಲ್ಲರೂ ಪರಮ ಪ್ರಮಾಣವಾಗಿ ಅಂಗೀಕರಿಸಿ ಗೌರವಿಸಬೇಕು. ಇವು ಭಕ್ತಿ ವಿಶ್ವಾಸಗಳುಳ್ಳವರೆಲ್ಲರಿಗೂ ತಪ್ಪದೆ ವೇದಗಳ ಹಾಗೆಯೇ ಪ್ರತ್ಯಕ್ಷದೃಷ್ಟಗಳಿಗಿಂತಲೂ ಅಧಿಕ ಪ್ರಾಮಾಣಿಕಗಳಾಗುವುವು. ಮತ್ತು ನಾನು ಮೊತ್ತಮೊದಲು ಭೂಮಿಯ ಮೇಲಣ ಗುಹೆಯಲ್ಲಿ ಇಳಿದುದೇ ಆದಿಯಾಗಿ ಹಾಸಿಗೆಯಮೇಲೆ ಜಾರಿದುದರವರೆಗೆ ಎಚ್ಚರಿಕೆಯಾಗಿರುವಷ್ಟರಲ್ಲಿ ನಡೆದ ದಾರಿಯ ಪಯಣವಷ್ಟೂ, ನಾನು ಕಟ್ಟಕಡೆಗೆ ಗುಹೆಯಲ್ಲಿ ಹಾಸಿಗೆಯಮೇಲೆ ಒರಗಿಕೊಂಡುದು ಮೊದಲ್ಗೊಂಡು ಭೂಮಿಯಮೇಲೆ ಬರುವವರೆಗೂ ನಡೆದ ದಾರಿಯ ಪಯಣದೊಡನೆ ಸರಿಯಾಗಿ ಸರಿಹೋದುದರಿಂದ ನನ್ನ ಸ್ವಪ್ನ ವರ್ಣನಮಾತ್ರವೂ ಪ್ರತ್ಯಕ್ಷಕ್ಕೆ ವಿರುದ್ಧವಾದುದಲ್ಲ. ಅಷ್ಟೇ ಅಲ್ಲದೆ ನನಗಾ ಕನಸು ಹೊತ್ತಾರೆಯ ಜಾಮದಲ್ಲಿ ಬಂದುದಾದುದರಿಂದ ಅಧಿಕ ವಿಶ್ವಾಸಾರ್ಹವಾಯಿತು. ನಾನೀಗ ಹೇಳಿದುದೆಲ್ಲವೂ ಸ್ತ್ರೀ ಮಲೆಯಾಳಕ್ಕೆ ಸರಿಯಾದ ಮಾರ್ಗವು. ಈ ಗುರುತುಗಳನಿಟ್ಟುಕೊಂಡು ಆ ದೇಶಕ್ಕೆ ಯಾರು ಯಾವ ನಿಮಿಷದಲ್ಲಿ ಹೋಗಲೆಣಿಸಿದರೂ ಬೇರೊಬ್ಬನು ತಿಳಿಯದಂತೆ ಮೆಲ್ಲಗೆ ಕಣ್ಣುಮುಚ್ಚಿಕೊಂಡು ಹೋಗಬಹುದು. ಅಲ್ಲಿಯ ದೇಶಭಾಷೆಯನ್ನು ಕಲಿತುಕೊಂಡು ಆತರುವಾಯ ಹೋಗಲೆಣಿಸುವ ಪಕ್ಷದಲ್ಲಿ ಮುಂದಾಗಿ ನನ್ನ ಬಳಿಗೆಬಂದು ಆರುತಿಂಗಳು ಶುಶ್ರೂಷೆಮಾಡಿರಿ. ನಿಮ್ಮನ್ನು ಆ ಭಾಷೆಯಲ್ಲಿ ಪಂಡಿತರನ್ನಾಗಿ ಮಾಡಿ ಕಳುಹುವೆನು. ಗುರುದಕ್ಷಿಣೆಯನ್ನು ಆ ಮೇಲೆ ನಿಮಗಿಷ್ಟಬಂದಷ್ಟು ಸಮರ್ಪಿಸಬಹುದು. ಗುರುದಕ್ಷಿಣೆಯಿಲ್ಲದೆ ಅಭ್ಯಾಸಿಸಿದ ವಿದ್ಯೆ ಸಫಲವಲ್ಲವೆಂದು ಹಿರಿಯರ ಬಳಿಯಲ್ಲಿ ಸಹವಾಸಗೊಂಡ ನಿಮಗೆ ವಿಶದವಾಗಿಯೇ ಇರುವುದು. ನೀವು ಕಾಲಾಣಿಚೀಟಿಯಮೇಲೆ ನನಗೆ ಪತ್ರಬರೆವ ಪಕ್ಷದಲ್ಲಿ ನನ್ನ ಈಗಿನ ವಾಸಸ್ಥಾನಾದಿಗಳನ್ನು ನಿಮಗೆ ವಿವರವಾಗಿ ತಿಳುಹುವೆನು. ಪ್ರಯಾಣ

ಕಥೆಯನ್ನು ಇಲ್ಲಿಗೆ ಮುಗಿಸಿ ಇನ್ನು ದೇಶ ವೃತ್ತಾಂತಕ್ಕೆ ಆರಂಭಿಸುವೆನು, ಸಾವಧಾನವಾಗಿ ಕೇಳರಿ.

ಆಗ ನಾನು ಎದ್ದು ಕೊಂಚದೂರ ನಡೆದು, ಒಂದು ಗಿಡದ ನೆರಳಿಗೆ ಕುಳಿತು ಕೊಂಡು, ಯಾವಕಡೆಗೆ ಹೋಗಲೆಂದು ಆಲೋಚಿಸಿ ಕೊಳ್ಳುತ್ತಿರಲು, ಮೂಡ ಲಿಂದ ಎರಡು ವಿಗ್ರಹಗಳು ನನ್ನ ಕಡೆಗೆ ನಡೆದು ಬಂದುವು. ಆ ಬಂದವರು ಪುರು ಷರೋ ಸ್ತ್ರೀಯರೋ ಎಂದು ನನ್ನ ಮನಸ್ಸಿಗೆ ಆಗ ಒಂದು ದೊಡ್ಡ ಸಂದೇಹ ವುಂಟಾಯಿತು. ಅವರ ಮುಖಗಳನ್ನು ನೋಡಲಾಗಿ ಹೆಚ್ಚುಕಡಿಮೆ ಅವರು ಮೂವತ್ತು ವರ್ಷ ಹರೆಯದವರಾಗಿ ಕಾಣಬರುತ್ತಿದ್ದರು. ಅವರ ಮುಖಗಳಿಗೆ ಗಡ್ಡಗಳಾಗಲೀ ಮೀಸೆಗಳಾಗಲೀ ಇರಲಿಲ್ಲ. ಇದರಿಂದ ಅವರು ಹೊಸತಾಗಿ ಕ್ಷೌರಕರ್ಮಮಾಡಿಸಿ ಕೊಂಡಿದ್ದರೆಂದು ನೀವು ಭಾವಿಸಕೂಡದು. ನಮ್ಮ ಸ್ತ್ರೀ ಯರ ಹಾಗೆಯೇ ಅವರಿಗೂ ಮುಖದಮೇಲೆ ಗಡ್ಡ ಮೀಸೆಗಳನ್ನು ಭಗವಂತನೇ ಪ್ರಸಾದಿಸಲಿಲ್ಲ. ಅವರಿಬ್ಬರೂ ಕಪಿಲವರ್ಣದವರಾಗಿ ನನಗಿಂತಲೂ ಒಂದು ಹಿಡಿ ಎತ್ತರವಾಗಿದ್ದರು. ಅವರಿಗೇನೂ ಆಭರಣಗಳಿರಲಿಲ್ಲ; ಮುಖದಲ್ಲಿ ಬೊಟ್ಟುಗಳಿ ರಲಿಲ್ಲ; ಕಣ್ಣಿಗೆ ಕಾಡಿಗೆ ಇರಲಿಲ್ಲ. ಏಕರೀತಿಯಾಗಿ ಅವರಿಬ್ಬರೂ ಉದ್ದವಾದ ಕಪ್ಪು ಚಲ್ಲಣಗಳನ್ನೂ, ಕೆಂಪಾದ ಅಂಗಿಗಳನ್ನೂ, ತಲೆಯಲ್ಲಿ ಹುಲ್ಲಿಂದ ಮಾಡಿದ ಬಿಳಿಯ ಟೊಪ್ಪಿಗೆಗಳನ್ನೂ ಧರಿಸಿದ್ದರು; ಕಾಲುಗಳಿಗೆ ಎಲೆಯ ಕೆರಗ ಳನ್ನು ಹಾಕಿಕೊಂಡಿದ್ದರು. ಅವರ ಸೊಂಟದ ಸುತ್ತಲೂ ಪಟ್ಟುದಟ್ಟಿಗಳು ಬಿಗಿಯಲ್ಪಟ್ಟಿದ್ದುವು. ಆ ಪಟ್ಟುದಟ್ಟಿಗಳಿಗೆ ಮುಂದುಗಡೆಯಲ್ಲಿ ಏನೋ ಅಕ್ಷರ ಗಳು ಕೆತ್ತಿಸಿರುವ ಹಿತ್ತಾಳಿಯ ಬಿಲ್ಲೆಗಳಿದ್ದುವು. ಅವರ ಕೈಗಳಲ್ಲಿ ಎರಡು ಮೊಳ ದುದ್ದದ ಗುಂಡಾದ ಎರಡು ಚಂದನದ ಸೋಂಟಾಗಳಿದ್ದುವು. ಈ ಲಕ್ಷಣಗಳೆಲ್ಲವು ಗಳಿಂದಲೂ ಅವರಾರೋ ರಾಜಭಟರೆಂದೂ ನಪುಂಸಕಮುಖದವರೆಂದೂ ನಾನಾಗ ನಿಶ್ಚಯಿಸಿಕೊಂಡೆನು. ಅವರು ಮೊತ್ತಮೊದಲು ನನ್ನೊಡನೆ ಏನನ್ನೂ ಮಾತನಾಡದೆ, ತರುಣಿಯಾದ ಹೊಸ ಸ್ತ್ರೀಯಾರಾದರೂ ಬೀದಿಯಲ್ಲಿ ಕಂಡುಬಂದಾಗ ನಮ್ಮ ದೇಶದಲ್ಲಿ ಪುರುಷರು ಅವಳ ಮುಖದಕಡೆಗೆಯೇ ನೋಡು ವ ಹಾಗೆ ಅವರೂ ನನ್ನ ಮುಖದಕಡೆಗೆ ಹತ್ತು ನಿಮಿಷಗಳ ವರೆಗೆ ರೆಪ್ಪೆಹಾಕದೆ ನೋಡಿ, ತಮ್ಮೊಳಗೆ ಮೆಲ್ಲನೆ ಏನನ್ನೋ ಗುಸುಗುಸು ಮಾತನಾಡಿಕೊಂಡು, ತರುವಾಯ ಅವರಲ್ಲಿ ಒಬ್ಬನು ನನ್ನ ಸಮೀಪಕ್ಕೆ ಬಂದು “ತೂಮಿಾಭೂ ಫೇ!” ಎಂದು ಯಾವುದೋ ಪ್ರಶ್ನೆ ಹಾಕಿದಹಾಗೆ ಮಾತನಾಡಿದನು. ನನಗಾ

ಮಾತಿನ ಅರ್ಥವಾಗಲಿಲ್ಲ. ಆದರೂ ದೊಡ್ಡ ಮನುಷ್ಯನು ಯಾವುದಾದರೂ ಕೇಳಿದಾಗ ಪ್ರತ್ಯುತ್ತರ ಹೇಳದಿರುವುದು ಧರ್ಮವಲ್ಲವೆಂದು ತಿಳಿದು, ಆತನು ನನ್ನ ಹೆಸರು ಕೇಳಿರ ಬಹುದೆಂದು ಊಹಿಸಿ, ತೆಲುಗು ಭಾಷೆಯಿಂದ ‘ನಾ ಪೇರು ಸತ್ಯರಾಜಾಚಾರ್ಯ್ಯುಲು’ ಎಂದು ಹೇಳಿದೆನು. ಅವನು ಸ್ವಲ್ಪ ಹೊತ್ತು ಆಲೋಚಿಸಿ ತಿರಿಗಿ ಗಟ್ಟಿಯಾಗಿ “ತೂವಿಸಾ ಭೂಭೇ” ಎಂದು ಹೇಳಿದನು. ನಾನೂ ಆತನಿಗೆ ತೆಲುಗು ತಿಳಿಯದೆಂದು ಗ್ರಹಿಸಿ, ಹಿಂದುಸ್ಥಾನೀ ಭಾಷೆ ಸಮಸ್ತ ದೇಶಗಳಲ್ಲಿಯೂ ತಿಳಿಯುವುದೆಂದು, ನಾನು ವಿಜಯನಗರದಲ್ಲಿ ಮಹಾರಾಜರ ಸಂಗಡ ಕಾಶೀನಗರಕ್ಕೆ ಹೋದವರೊಡನೆ ಸಹವಾಸದಿಂದ ಮಾತನಾಡ ಕಲಿತುಕೊಂಡ ಆ ಭಾಷೆಯಿಂದ “ಮೇರಾನಾಂ ಸತ್ಯರಾಜಾಚಾರ್” ಎಂದು ಹೇಳಿದೆನು, ಅವನು ಆ ಮಾತನ್ನು ಕೂಡ ಗ್ರಹಿಸದೆ “ತೂವಿಸಾ ಭೂಭೇ” ಎಂದು ತಿರಿಗಿ ಮತ್ತಷ್ಟು ಗಟ್ಟಿಯಾಗಿ ಕೇಳಿದನು. ಆ ಮೇಲೆ ನಾನು ಅವನಿಗೆ ಈ ಭಾಷೆ ತಿಳಿಯದೆ ಹೋದರೂ, ಈ ಕಾಲದಲ್ಲಿ ಸರ್ವತ್ರ ವ್ಯಾಪಿಸಿರುವ ಇಂಗ್ಲೀಷಾದರೂ ತಿಳಿಯ ಬಹುದೆಂದು ‘ಮೈನೇಮ್ ಇಸ್ ಸತ್ಯರಾಜಾಚಾರ್ಯ’ ಎಂದು ಹೇಳಿದೆನು. ಅವನಾ ಭಾಷೆಯನ್ನು ಕೂಡ ತಿಳಿದುಕೊಳ್ಳದೆ ಕೋಪ ಬಂದ ತಿರಿಗಿ ಅದೇಪ್ರಶ್ನೆಯನ್ನು ಹಾಕಿದನು. ಆ ಮೇಲೆ ನನಗೆ ಏನು ಮಾಡಲಿಕ್ಕೂ ತೋರದೆ ದೇಶ ಭಾಷೆಗಳು ತಿಳಿಯದೆ ಹೋದರೂ, ದೇವಭಾಷೆಯಾದರೂ ತಿಳಿಯುವುದೋ ಏನೋ ಎಂದು ಸಂಸ್ಕೃತದಿಂದ ‘ಅಹಂ ಸತ್ಯರಾಜಾಚಾರ್ಯ ನಾಮಕೋಽಸ್ಮಿ’ ಎಂದು ಸ್ಪಷ್ಟವಾಗಿ ಹೇಳಿದೆನು. ಆ ಮೂರ್ಖನು ಅದನ್ನೂ ತಿಳಿದು ಕೊಳ್ಳಲಾರದೆ ಎರಡನೆಯವನನ್ನು ನೋಡಿ ತಿರಿಗಿ ಯಾವದೋ ಭಾಷೆಯಿಂದ ಮಾತನಾಡಿದನು. ಪ್ರಸಿದ್ಧವಾದ ನನ್ನ ಹೆಸರು ಅವರಿಗೆ ತಿಳಿಯಗೊಳಿಸದಿರುವುದು ನನಗಿಷ್ಟವಿಲ್ಲದೆ ಅರವದೇಶಕ್ಕೆ ಸಮೀಪವಾಗಿರುವುದರಿಂದ ದ್ರಾವಿಡಭಾಷೆಯಾದರೂ ತಿಳಿಯುವುದೇನೋ ಎಂದು ‘ಎನ್ ಪೇರ್ ಸತ್ಯರಾಜಾಚಾರ್’ ಎಂದು ಹೇಳಿದೆನು. ಈ ಅರವದಲ್ಲಿ ತಪ್ಪಿರುವ ಪಕ್ಷದಲ್ಲಿ ಇದನ್ನೋದುವ ಅರವರು ನನ್ನನ್ನು ಮನ್ನಿಸಬೇಕು. ನಾನು ಹಿಂದೆ ಹೊಗೆ ಬಂಡಿಯಲ್ಲಿ ಯಾತ್ರೆ ಮಾಡುವಾಗ ನಾಲ್ಕು ಅರವಶಬ್ದಗಳನ್ನು ನಮ್ಮ ಬ್ರಾಹ್ಮಣನಿಂದ ಕಲಿತುಕೊಂಡಿದ್ದೆನು. ಆದುದರಿಂದ ಆತನ ಕೈಗೆ ಸಿಕ್ಕಿದ ನನ್ನ ಹಣವನ್ನು ಆತನು ಗುರುದಕ್ಷಿಣೆಯಾಗಿ ಗ್ರಹಿಸಿದುದಾದರೂ ನೀವು ಊಹಿಸಬಹುದು. ಅವರಿಗೀ ಅರವದ ಗೋಳೂ ತಿಳಿಯಲಿಲ್ಲ. ಆಗ ನಾನು ನನ್ನ ಸ್ವಭಾ

ಷೆಯಾದ ಕನ್ನಡದಲ್ಲಿ ಹೇಳ ನೋಡೋಣವೆಂದು "ನಮ್ಮ..." ಎಂದು ಆರಂಭಿಸುವಷ್ಟರೊಳಗೆ ಅವರಿಬ್ಬರೂ ನನ್ನ ಬಳಿಗೆ ಬಂದು ಕೈಹಿಡಿದು ನನ್ನನ್ನು ಏಳೆಂದು ಎಳೆದರು. ನಾನು ಆಗ ನನ್ನ ಭಾಷಾಪಾಂಡಿತ್ಯ ತೋರಿಸುವುದಕ್ಕೆ ಅದು ಸಮಯವಲ್ಲವೆಂದು ಮೌನಧರಿಸಿ, ನಿಮ್ಮ ಹಿಂದೆ ಬರುವೆನು, ನನ್ನನ್ನು ಎಳೆಯ ಬಾರದೆಂದೂ, ನನ್ನ ಊರು ವಿಜಯನಗರವೆಂದೂ ನನ್ನ ಹೆಸರು ಸತ್ಯರಾಜಾಚಾರ್ಯನೆಂದೂ, ನಾನು ಸದ್ಬ್ರಾಹ್ಮಣನೆಂದೂ, ಸಮಸ್ತವನ್ನೂ ಕೈಸನ್ನೆ ಮಾಡಿ ಹೇಳಿ, ತತ್‌ಕ್ಷಣವೇ ಎಟ್ಟನೆದ್ದು ಅವರ ಹಿಂದೆಯೆ ನಡೆಯಲಾರಂಭಿಸಿದೆನು. ಊರನ್ನೂ ಹೆಸರನ್ನೂ ವಂಶವನ್ನು ಕೂಡ ಹೇಗೆ ಸನ್ನೆ ಮಾಡಿದೆನೆಂದು ನಿಮ್ಮಲ್ಲಿ ತಿಳಿಯದವರಿಗೆ ಕೆಲವರಿಗೆ ಸಂದೇಹ ಬರಬಹುದು. ಆದರೆ ಆ ಸಂಶಯವು ನಾನು ಕೈಸನ್ನೆ ಮಾಡುತ್ತಿದ್ದಾಗ ಶ್ರದ್ಧೆಯಿಂದ ನೋಡಿದವರಿಗೆ ನಿವಾರಣೆಯಾಗ ಬೇಕಾದುದೇ ಹೊರತು, ಬರೀ ಹೇಳುವುದರಿಂದ ಸಂಶಯಬಿಟ್ಟುಹೋಗದು. ಆ ರಾಜಭಟರಲ್ಲೊಬ್ಬನು ಮುಂದೆನಡೆಯಲಾಗಿ, ನಮ್ಮ ದೇಶದಲ್ಲಿಯ ದೊಡ್ಡ ರಾಜಕೀಯ ಉದ್ಯೋಗಿಯ ಹಾಗೆ, ಅವನ ಹಿಂದೆ ನಾನೂ ತಲೆ ಬೊಗ್ಗಿಸಿಕೊಂಡು ನಡೆಯ ತೊಡಗಿದೆನು. ಎರಡನೆಯವನು ನನ್ನ ಹಿಂದೆ ನಡೆಯುತ್ತಿದ್ದನು. ಹೀಗೆ ಸ್ವಲ್ಪದೂರದವರೆಗೆ ನಡೆಯುತ್ತ, ನಾವು ಒಂದು ಪಟ್ಟಣದ ರಾಜಬೀದಿಯನ್ನು ಪ್ರವೇಶಿಸಿದೆವು. ಆಗ ಬೀದಿಯುದ್ದಕ್ಕೂ ನನಗೆ ಮನುಷ್ಯರು ಕಣ್ಣಿಗೆ ಬೀಳ ತೊಡಗಿದರು. ಅವರು ಧರಿಸಿಕೊಂಡ ಬಟ್ಟೆ ಮೊದಲಾದುವು ವಿವಿಧವಾಗಿದ್ದರೂ, ಅವರಲ್ಲಿ ಒಬ್ಬರಿಗೂ ಗಡ್ಡ ಮೀಸೆಗಳಿರಲಿಲ್ಲ. ಅಂತಹ ವಿಚಿತ್ರವಾದ ಸೃಷ್ಟಿಯಿಂದ ನನಗಾಗ ಉಂಟಾದ ಅದ್ಭುತಾನಂದಕ್ಕೆ ಪರಿಮಿತಿಯಿಲ್ಲ. ಅಘಟನಘಟನಾಸಮರ್ಥನಾದ ಸರ್ವೇಶ್ವರನು ಆ ದೇಶದಲ್ಲಿ ಗಂಡಸರಿಗೆ ಮುಖಕ್ಕೆ ಮೀಸೆಗಳಿಲ್ಲದಂತೆ ಏಕೆ ಮಾಡಿದನೋ ಎಂದು ಹಾದಿಯುದ್ದಕ್ಕೂ ನನ್ನಲ್ಲಿ ನಾನೇ ವಿತರ್ಕಿಸಿ ಕೊಳ್ಳುತ್ತಿದ್ದೆನು. ಆ ಸಮಯದಲ್ಲಿ ನನಗೆ ಆಕಸ್ಮಿಕವಾಗಿ ಮತ್ತೊಂದು ಸಂಗತಿ ನೆನಪಿಗೆ ಬಂತು. ಇದು ಸ್ತ್ರೀ ಮಲೆಯಾಳವಲ್ಲವೇ; ಇದರಲ್ಲಿ ಪುರುಷರು ಹೇಗಿರುವರೆಂದು ನನ್ನ ಮನಸ್ಸಿಗೆ ಸ್ಫುರಿಸಿದೊಡನೆಯೇ ನಾನು ನೋಡಿದವರೆಲ್ಲರೂ ಸ್ತ್ರೀಯರೇ ಎಂದೂ, ಈ ದೇಶದಲ್ಲಿ ಪುರುಷರು ಇಲ್ಲವೆಂದೂ, ಗಾಳಿಗೆಯೇ ಮಕ್ಕಳು ಹುಟ್ಟುವರೆಂದೂ, ಸ್ತ್ರೀ ಮಲೆಯಾಳವನ್ನು ಕುರಿತು ನಮ್ಮವರು ಹೇಳದುದೆಲ್ಲವೂ ಸತ್ಯವೇ ಎಂದೂ, ನಾನು ನಿಶ್ಚಯಿಸಿಕೊಂಡೆನು. ನನ್ನ ಮನಸ್ಸಿನಲ್ಲಿ ಈ ಆಲೋಚನೆ ಮುಗಿಯು

ವವೇಳೆಗೆ ನಾವು ಒಂದು ಮನೆಯನ್ನು ಸೇರಿದೆವು. ಆ ಮನೆಯ ಬಾಗಿಲ ಬಳಿಯಲ್ಲಿಯೂ ಒಳಗೂ ನನ್ನನ್ನು ಕರತಂದವರಹಾಗೆ ವೇಷಂಗಳನ್ನು ಧರಿಸಿಕೊಂಡ ನಪುಂಸಕಮುಖದ ರಾಜಭಟರನೇಕರಿದ್ದರು. ಮೊದಲಿಗರು ಇಬ್ಬರು ನನ್ನನ್ನು ಒಳಕ್ಕೆ ಕೊಂಡುಹೋಗುತ್ತಲು, ಒಳಗಿನವರೆಲ್ಲರೂ ಗುಂಪು ಗುಂಪುಗಳಾಗಿ ಬಂದು ಅಡವಿಯ ಮೃಗವನ್ನು ನೋಡುವ ಹಾಗೆ ನನ್ನನ್ನು ಮೇಲಿಂದ ಕೆಳಗಿನ ವರೆಗೂ ದಿಟ್ಟಿಸಿನೋಡತೊಡಗಿದರು. ಹಾಗೆಯೇ ಅವರ ಲ್ಲಿಯೇ ಅವರು ಏನನ್ನೋ ಆಲೋಚಿಸಿಕೊಂಡು ನನ್ನನ್ನು ದೂರವಾಗಿ ತೆಗೆದುಕೊಂಡು ಹೋಗಿ ಮೂಲೆಗಿರುವ ಒಂದು ಕೋಣೆಯಲ್ಲಿ ಹಾಕಿ ಮೇಲಿಂದ ಕದವನ್ನು ಹಾಕಿದರು. ತರುವಾಯ ರಾಜಭಟರು ಕೆಲವರು ಒಬ್ಬರ ಹಿಂದೊ ಬ್ಬರುಬಾಗಿಲ ಬಳಗೆಬಂದು ಅದಕ್ಕೆ ನಿಲುವಾಗಿ ಹಾಕಿದ ಕಬ್ಬಿಣದ ಕಂಬಿಗಳ ಸಂದಿನಿಂದ ಬೋನಿನಲ್ಲಿರುವ ಕಾಡು ಜಂತುವನ್ನು ನೋಡುವ ಹಾಗೆ ನನ್ನ ನ್ನು ಬಗ್ಗಿಬಗ್ಗಿ ನೋಡುತ್ತ ಹೊರಗೆ ಹೋಗುತ್ತಲೂ ಬರುತ್ತಲೂ ಇದ್ದರು. ಹೀಗೆ ಬರುವುದೂ ಹೋಗುವುದನ್ನೂ, ಅವರಲ್ಲಿಯೆ ಏನೋ ಆಲೋಚಿಸಿಕೊಳ್ಳು ತ್ತಿರುವುದನ್ನೂ, ನೋಡುವಲ್ಲಿ ನಮ್ಮದೇಶದ ಪೋಲೀಸುಭಟರ ಸಂಗತಿ ನನಗೆ ಜ್ಞಾಪ್ತಿಗೆ ಬಂದು, ಅವರಲ್ಲಿ ಏನೋ ದುರುದ್ದೇಶವಿರುವಹಾಗೆ ನನಗೆ ಕಂಡು ಬಂದುದು. ಆದರೆ ನಾನು ಸ್ತ್ರೀಯಲ್ಲ, ಪುರುಷನಾದುದರಿಂದ ಅಂತಹ ಅನುಮಾ ನಪಡುವ ಕೆಲಸವಿಲ್ಲವೆಂದು ಮನಸ್ಸಮಾಧಾನಮಾಡಿಕೊಂಡೆನು. ಹೀಗೆ ಈ ರೀತಿಯಾಗಿ ರಾಜಭಟರೊಳಗೆ ಯಾವುದೋ ಆಲೋಚನೆ ನಡೆಯುತ್ತಿರು ವಷ್ಟರಲ್ಲಿ ಅವರ ಯಜಮಾನನು ಅಲ್ಲಿಗೆ ಬಂದನು. ಆತನನ್ನು ದೂರದಿಂದ ನೋಡಿ ಅವರೆಲ್ಲರೂ ತಮ್ಮತಮ್ಮ ಯಥಾಸ್ಥಾನಗಳಿಗೆ ಹೊರಟು ಹೋದರು. ಆ ತರುವಾಯ ಅವನು ತನ್ನ ಕೆಲಸ ತೀರಿಸಿಕೊಂಡು, ತಾನು ಮೊದಲು ಬರು ತ್ತಿರುವಾಗ ನನ್ನ ಕೋಣೆಯ ಮುಂದೆ ಭಟರು ಗುಂಪು ಗುಂಪಾಗಿ ಕೂಡಿ ಓಡಿ ಹೋದುದನ್ನು ನೋಡಿದವನಾದುದರಿಂದ ಅದರಲ್ಲೇನೋ ವಿಚಿತ್ರವಿದೆಯೆಂದೂ ಹಿಸಿ, ನನ್ನ ಕೋಣೆಯ ಬಳಗೆ ಬಂದು ಬಾಗಿಲು ತೆಗಿಸಿ, ರಾಜಭಟರು ನನ್ನ ಮೇಲೆ ಏನಪರಾಧ ಹೊರಿಸುವರೋ ಎಂದು ಭಯಪಟ್ಟು ಗಡಗಡನೆ ನಡುಗುವ ನನ್ನನ್ನು ನೋಡಿ, ನನ್ನನ್ನೇನೋ ಪ್ರಶ್ನೆಮಾಡಿ ನನ್ನಿಂದ ಪ್ರತ್ಯುತ್ತರ ಹೊಂ ದದೆ, ತನ್ನ ಭಟರನ್ನೇನೋ ಕೇಳ ತಿಳಿದುಕೊಂಡು, ನನ್ನಲ್ಲಿ ನಿರ್ಹೇತುಕ ಕರುಣಾಕಟಾಕ್ಷವುಂಟಾದವನಾಗಿ ನನ್ನನ್ನು ಹಿಂದೆಯೇ ತನ್ನ ಮನೆಗೆ ಕರೆದು

ಕೊಂಡು ಹೋದನು. ಈಶ್ವರಾನುಗ್ರಹದಿಂದ ನಾನು ಹೀಗೆ ಕಾರಾಗೃಹ ವಿಮುಕ್ತನಾಗಿ ಒಳ್ಳೆಯ ಮನೆಯಲ್ಲಿ ಬಿದ್ದವನಾದೆನು. ಆತನು ದಯಾರಸವುಳ್ಳವನಾದುದರಿಂದ ನನ್ನನ್ನು ಆದರಿಸಿ, ತನ್ನ ಮನೆಯಲ್ಲಿ ಬೀದಿಯಕಡೆಗೆ ನನಗೊಂದು ಕೊಟ್ಟಡಿ ಕೊಡಿಸಿ, ಮಲಗುವುದಕ್ಕೆ ಆ ಕೋಣೆಯಲ್ಲಿ ಒಂದು ಮಂಚವಿಡಿಸಿ, ತನ್ನ ಸೇವಕನಿಂದ ಭೋಜನ ಪದಾರ್ಥಗಳನ್ನು ತರಿಸಿ ನನ್ನಿದಿರಿಗೆ ಇಡಿಸಿದನು. ಅವರು ಯಾವ ಜಾತಿಯವರೋ ತಿಳಿಯದೆ ಹೋದುದರಿಂದ ಅವರು ಮುಟ್ಟಿದ ಪದಾರ್ಥಗಳನ್ನು ತಿನ್ನಲು ನಾನು ಮೊತ್ತಮೊದಲು ಸಂಕೋಚಿಸಿದೆನಾದರೂ ಯಾವುದಾದರೂ ಸರಿಯೇ, ತಿನ್ನೆಂದು, ಕ್ಷುದ್ದೇವತೆ ನನ್ನ ಹೊಟ್ಟೆಯಲ್ಲಿ ತೂರಿ ನನ್ನನ್ನು ಬಾಧಿಸಿದುದರಿಂದಲೂ, ಆ ದೇಶದಲ್ಲಿ ಬ್ರಾಹ್ಮಣರು ಇರುವರೆಂಬ ಗುರುತೇ ಇಲ್ಲದೆ ಹೋದುದರಿಂದಲೂ, ಪೂರ್ವಕಾಲದಲ್ಲಿ ಆಪತ್ಸಮಯಗಳಲ್ಲಿ ವಿಶ್ವಾಮಿತ್ರಾದಿಗಳು ಚಂಡಾಲಗೃಹದಲ್ಲಿ ಅಶ್ವಮಾಂಸಾದಿಗಳನ್ನು ಕದ್ದುಕೊಂಡು ಕ್ಷುತ್ತು ತೀರಿಸಿಕೊಂಡುದು ಪುರಾಣಗಳಲ್ಲಿ ಓದಿರ್ದುದರಿಂದಲೂ, ಆತ್ಮರಕ್ಷಣವೇ ಪರಮಧರ್ಮವೆಂದು ನಮ್ಮ ಶಾಸ್ತ್ರಗಳು ಹೇಳಿರುವುದರಿಂದಲೂ, ಸ್ವದೇಶವನ್ನು ಸೇರಿದ ತರುವಾಯ ಪ್ರಾಯಶ್ಚಿತ್ತ ಮಾಡಿಸಿಕೊಂಡು ಬ್ರಾಹ್ಮಣ ಸಂತರ್ಪಣೆ ಮಾಡಿ ಶುದ್ಧನಾಗಬಹುದೆಂದೂ, ಆ ದಿನ ಭೋಜನಮಾಡಿದೆನು. ಆ ದಿನ ಬಾಯಿಗೆ ಸ್ವಲ್ಪವೂ ಅನ್ನ ಹೋಗಲಿಲ್ಲವಾದರೂ ತರುವಾಯ ಕ್ರಮಕ್ರಮವಾಗಿ ಅಭ್ಯಾಸವಾದುದರಿಂದ ವಾಙ್ನಿಶ್ಚಯವಾದ ಮದುಮಗನಹಾಗೆ ಭೋಜನಪ್ರಿಯನಾಗಿ ಊಟಮಾಡ ತೊಡಗಿದೆನು. ನಮ್ಮ ಮನೆಯ ಯಜಮಾನನ ಹೆಸರು 'ಪಾಂಡೀಭೆಂಗೀ'. ಆತನು ಬ್ರಾಹ್ಮಣ ಭಕ್ತಿಯಿಂದಲ್ಲದೆ ಹೋದರೂ ಒಳ್ಳೆಯ ಹೃದಯವುಳ್ಳವನಾದುದರಿಂದ, ನನಗೆ ಸಮಸ್ತೋಪಚಾರಗಳೂ ನಡೆಯುವಹಾಗೆ ವ್ಯವಸ್ಥೆಯಿಟ್ಟು, ಆರಂಭದಲ್ಲಿ ತಮ್ಮ ಭಾಷೆಯನ್ನು ನನಗೆ ಸ್ವಯಮಾಗಿ ಕಲಿಸುತ್ತ ಬಂದನು. ನಾನು, ಗೋಡೆ, ಉಪ್ಪರಿಗೆ, ಉಪ್ಪು, ಬೇಳೆ, ಹಸಿಯಸುಂಟಿ, ಬೆಲ್ಲ, ಬಟ್ಟೆ, ತಟ್ಟೆ, ದನ, ಕುರಿ, ಮೊದಲಾದುವನ್ನು ತೋರಿಸಿ, ಅವುಗಳ ಹೆಸರುಗಳೇನೆಂದು ಸನ್ನೆಮಾಡುತ್ತ ಬರಲಾಗಿ, ಅವನು ತಿಳುಹುತ್ತ ಬಂದನು. ಆ ಹೆಸರುಗಳೆಲ್ಲವನ್ನೂ ನಾನು ಹಿಂದೆ ಕೊಂಡುಹೋದ ಬಿಳಿಯ ಕಾಗದದ ಪುಸ್ತಕದ ಮೇಲೆ ತೆಲುಗಿನಲ್ಲಿ ಬರೆದುಕೊಂಡು, ಕಲಿಯುತ್ತ ಬಂದೆನು. ಮೊದಲನೆಯ ದಿನ ನಾನಾಮಾತುಗಳನ್ನು ಬರೆಯುತ್ತಿರಲು, ಅವನು ನೋಡಿ, ಅತ್ಯಾಶ್ಚರ್ಯಪಟ್ಟನು. ಈ ಆಶ್ಚರ್ಯದ ಕಾರಣವನ್ನು ನಿಮಗೆ ಮುಂದೆ ಹೇಳು

ವೆನು. ನಾನವರ ಭಾಷೆಯನ್ನು ಅಭ್ಯಾಸಿಸಿದ ಕ್ರಮವೆಲ್ಲವನ್ನೂ ಹೇಳಲಾರಂಭಿಸಿದ ಪಕ್ಷದಲ್ಲಿ ನಿಮಗೆ ಅಸಹ್ಯವಾಗಿ ತೋರಬಹುದು. ಇಷ್ಟೆಯಲ್ಲದೆ ಇಂತಹ ವರ್ಣನೆಗಳಿಂದ ನಿಮಗೂ ನನಗೂ ಲಾಭವಿಲ್ಲ. ವಿಶೇಷ ಪ್ರಯಾಸಪಟ್ಟು ಮೂರು ತಿಂಗಳೊಳಗೆ ಅವರ ಭಾಷೆಯನ್ನು ನಾನು ಧಾರಾಳವಾಗಿ ಮಾತನಾಡುವುದಕ್ಕೆ ಕಲಿತುಕೊಂಡೆನು.

---

## ನಾಲ್ಕನೆಯ ಪ್ರಕರಣವು.

ಪ್ರಥಮವಾದ ಒಂದು ದಿನದಲ್ಲಿ ಭೋಜನಮಾಡಿ ಕುಳಿತುಕೊಂಡ ತರುವಾಯ ನನ್ನ ಯಜಮಾನನಾದ 'ಫಾಂಡೀಭಂಗಿ' ನನ್ನನ್ನು ನೋಡಿ ವಿಚಾರಪಡುತ್ತ "ನಿನ್ನ ಹೆಂಡತಿ ಸತ್ತು ಹೋಗಿರುವಳಲ್ಲವೇ ?" ಎಂದು ರಂಥೀ ಭಾಷೆಯಿಂದ ಕೇಳಿದನು. ಅವರ ದೇಶವನ್ನು ನಾವು ಸ್ತ್ರೀಮಲೆಯಾಳವೆಂದು ವ್ಯವಹರಿಸಿದರೂ ಸ್ವದೇಶಸ್ಥರದನ್ನು ರಂಥೀ ದೇಶವೆಂಬರು. ಅದರಿಂದ ಅವರ ಭಾಷೆಯೂ ರಂಥೀ ಭಾಷೆಯೆನ್ನಲ್ಪಡುವುದು. ನನ್ನನಾತನಾ ಪ್ರಶ್ನೆಯನ್ನು ಕೇಳಿದೊಡನೆಯೇ ಆತನ ಜ್ಞಾನಕ್ಕೆ ನಾನು ಅತ್ಯಾಶ್ಚರ್ಯಪಟ್ಟು, ಆತನಿಗೆ ಜ್ಯೋತಿಶ್ಶಾಸ್ತ್ರ ಪರಜ್ಞಾನದಿಂದಲೇ ಈ ಸಂಗತಿ ತಿಳಿದುದೆಂದೆಣಿಸಿಕೊಂಡು, ಆ ಶಾಸ್ತ್ರವನ್ನು ಗ್ರಹಿಸಬೇಕೆಂಬ ಉದ್ದೇಶದಿಂದ "ಅಯ್ಯಾ! ನನ್ನ ಹೆಂಡತಿ ಸ್ವರ್ಗಸ್ಥೆಯಾದ ಸಂಗತಿ ನಿಮಗೆ ಹೇಗೆ ತಿಳಿದುದು ?" ಎಂದು ಕೇಳಿದೆನು.

ಫಾಂಡೀ—(ಕಿರುನಗೆಯೊಡನೆ) ನಿನ್ನ ಹೆಂಡತಿ ತೀರಿ ಹೋದ ಸಂಗತಿ ಮಾತ್ರವೇ ಅಲ್ಲದೆ ಆಕೆ ನಿನ್ನ ಬಾಲ್ಯದಲ್ಲಿಯೆ ಸತ್ತಳೆಂದು ಕೂಡ ನಿನ್ನ ರೂಪಿಂದಲೇ ಗ್ರಹಿಸಿದೆನು.

ನಾನು—(ಇದು ಜೋತಿಶ್ಶಾಸ್ತ್ರದಿಂದಲ್ಲ; ಸಾಮುದ್ರಿಕ ಶಾಸ್ತ್ರದಿಂದಿರಬಹುದೆಂದು ಭಾವಿಸಿಕೊಂಡು) ಅಯ್ಯಾ! ನನ್ನ ರೂಪದಲ್ಲಿ ಏನು ವಿಶೇಷವಿದೆ?

ಫಾಂಡೀ—ನೀನು ಗಡ್ಡ ಮೀಸೆಗಳನ್ನು ಕತ್ತರಿಸಿ ಕೊಂಡುದರಿಂದಲೇ ನಿನ್ನ ಹೆಂಡತಿ ಸತ್ತಿರುವಳೆಂದು ತಿಳಿದುಕೊಂಡೆನು. ನಿನಗೆ ಮೂಗು ಇರುವುದರಿಂದ ನಿನ್ನ ಹೆಂಡತಿ ನಿನ್ನ ಬಾಲ್ಯದಲ್ಲಿಯೇ ಮೃತಪಟ್ಟಳೆಂದು ಗ್ರಹಿಸಿದೆನು. ಇದಕ್ಕಿಂತಲೂ ನಿನ್ನ ರೂಪದಲ್ಲಿ ವಿಶೇಷವೇನು ಬೇಕು ?.

ಮೊತ್ತಮೊದಲು ನನಗೀ ಮಾತುಗಳಿಗೆ ಅರ್ಥವಾಗದೆ ಹೋದರೂ ಆ ತರುವಾಯ ನನ್ನ ಯಜಮಾನನೊಡನೆ ದೀರ್ಘ ಸಂಭಾಷಣೆಮಾಡಿ ಅವರ ದೇಶದ ಸ್ಥಿತಿಗತಿಗಳನ್ನೂ ಜನರ ಆಚಾರವ್ಯವಹಾರಗಳನ್ನೂ ಕೊಂಚ ತಿಳಿದುಕೊಂಡ ಮೇಲೆ ನನಗಾ ಮಾತುಗಳ ಅರ್ಥವು ತಿಳುವಳಿಕೆಗೆ ಬಂದು ಅವರ ದೇಶದಮೇಲೆ ನನಗೆಷ್ಟೋ ಕೋಪಬಂತು. ಆದರೆ ಅಸಮರ್ಥನು ತನ್ನ ಕೋಪವನ್ನು ಹೊರಗೆ ಬಿಡುವುದರಿಂದ ಪರರಿಗೆ ಹಾನಿ ಮಾಡುವುದಕ್ಕೆ ಬದಲಾಗಿ ತಾನೇ ಹಾನಿ ಹೊಂದುವನೆಂದು ತಿಳಿದು ನನ್ನ ಸಿಟ್ಟನ್ನು ನನ್ನ ಮನಸ್ಸಿನಲ್ಲಿಯೆ ಅಡಗಿಸಿಕೊಂಡವನಾದೆನು. ನನಗೆ ಆಗ ಆ ದೇಶ ಬಿಟ್ಟು ಓಡಿ ಹೋಗಬೇಕೆಂಬ ಬುದ್ಧಿ ಕೂಡ ಹುಟ್ಟಿತಾದರೂ ಪರರಿಗೆ ದಾಸನಾಗಿರುತ್ತಿದ್ದುದರಿಂದ ಅದೂ ಸಾಧ್ಯವಾಗಿ ಕಂಡು ಬರಲಿಲ್ಲ. ದೈವವು ಯಾವಕಾಲಕ್ಕೆ ಯಾರಿಂದ ಏನುಮಾಡಲೆಣಿಸುವುದೋ ತಿಳಿಯುವುದು ಯಾರಿಗೆ ತಾನೇ ಸಾಧ್ಯವು ?

ನಾನು ಮಾಡಿದ ದೀರ್ಘ ಸಂಭಾಷಣೆಯಿಂದ ನನ್ನ ಯಜಮಾನನು ಆಕಸ್ಮಿಕವಾಗಿ ಯಜಮಾನಗಿತಿಯಾದಳು. ನಾನು ನೋಡಿದ ರಾಜಭಟರೇ ಮೊದಲಾದ ಪುರುಷರೆಲ್ಲರೂ ಸ್ತ್ರೀಯರಾಗಿ ಹೋದರು. ಇದೆಲ್ಲವೂ ಇದಕ್ಕೆ ಮೊದಲು ನಾನು ಊಹಿಸಿದ ಹಾಗೆಯೆ ಆಯಿತಾದರೂ, ಈ ದೇಶದಲ್ಲಿ ಪುರುಷರು ಇಲ್ಲದಿರುವುದೂ, ಗಾಳಿಗೆ ಮಕ್ಕಳು ಹುಟ್ಟುವುದೂ ಮಾತ್ರವಬದ್ಧವಾಯಿತು. ಆ ದೇಶದಲ್ಲಿಯೂ ಪುರುಷರಿರುವರು ; ಆದರೆ ಅವರು ಇದ್ದರೂ ಇಲ್ಲದ ಹಾಗೆಯೇ ಭಾವಿಸ ಬೇಕಾಗಿದೆ. ಅಲ್ಲಿ ಯಾಜಮಾನ್ಯವೆಲ್ಲವೂ ಸ್ತ್ರೀಯರದು ; ರಾಜ್ಯಪರಿಪಾಲನೆ ಮಾಡುವವರು ಸ್ತ್ರೀಯರು, ರಾಜಕೀಯೋದ್ಯೋಗದವರು ಸ್ತ್ರೀಯರು; ಮಂತ್ರಿಗಳು ಸ್ತ್ರೀಯರು ; ವಿದ್ವಾಂಸರು ಸ್ತ್ರೀಯರು; ಸೈನಿಕರು ಸ್ತ್ರೀಯರು ; ಸಾವಿರವೇಕೆ ? ಆ ದೇಶವೆಲ್ಲವೂ ಸ್ತ್ರೀಮಯವು. ಸ್ತ್ರೀಯರೇ ಸರ್ವಸ್ವತಂತ್ರೆಯರು ; ಪುರುಷರು ಅವರ ದಾಸರು. ಆಹಾ ! ಲೋಕದಲ್ಲಿ ಇದಕ್ಕಿಂತಲೂ ಹೆಚ್ಚಾದ ದುರ್ದಶೆ ಮತ್ತೊಂದುಂಟೇ? ಈ ಸಂಗತಿ ಕೇಳಲಾಗಿ, ಪುರುಷಾಭಿಮಾನಿಯಾದವನ ದೇಹವು ಭಗ್ಗೆಂದು ಉರಿಯದೇ ? ಪುರುಷರಲ್ಲಿ ಅಭಿಮಾನವುಳ್ಳವರಾಗಿ, ಪುರುಷರ ಆಧಿಕ್ಯವನ್ನು ಸ್ಥಿರಪಡಿಸುವುದರಲ್ಲಿ ಪ್ರತಿಷ್ಠೆವಹಿಸಿ, ಪೌರುಷಭೂಷಣರಾದ ಓ ಭರತಖಂಡವಾಸಿಗಳಿರಾ ! ನಮ್ಮ ದೇಶದಲ್ಲಿ ಪುರುಷಜನ್ಮವೆತ್ತಿದವರೆಲ್ಲರೂ ಆಯುಧಹಸ್ತರಾಗಿ ಹೊರಟು, ನಾನು ಹೇಳಿದ ಗುಹಾಮಾರ್ಗದಿಂದ ಈ ದೇಶಕೆ ಬಂದು ಅನ್ಯಾಯವಾಗಿ ಪುರುಷರಮೇಲೆ

ಅಧಿಕಾರಸಲ್ಲಿಸುತ್ತಿರುವ ಸ್ತ್ರೀಯರೆಲ್ಲರನ್ನು ಘೋರಯುದ್ಧದಲ್ಲಿ ಜಯಿಸಿ, ಈ ಹಾಳು ದೇಶದಲ್ಲಿಯೂ ಪುರುಷಸ್ವಾತಂತ್ರ್ಯವನ್ನು ನೆಲೆಗೊಳಿಸಿರಿ. ಮರ್ಮಜ್ಞನಾದ ನಾನೇ ನಿಮಗೆ ಸಹಾಯಕನಾಗಿರಲು, ನಿಮಗೆ ಅಪಜಯವೆಂದೂ ಉಂಟಾಗದು. ನೀವು ಭಯಪಡಬೇಡಿರಿ.

'ಇಲ್ಲಿ ಸ್ತ್ರೀಯರ ಯಜಮಾನ್ಯವೆಂಬುದು ಮಾತ್ರವೇ ಅಲ್ಲದೆ ಅವರಲ್ಲಿ ಐಕಮತ್ಯವಿಲ್ಲ. ಅವರಲ್ಲಿ ಕೆಲವರು ಪುರುಷರಿಗೆ ವಿದ್ಯೆ ಕೊಟ್ಟು ಅವರಿಗೆ ಕೊಂಚ ಮಟ್ಟಿಗೆ ಸ್ವಾತಂತ್ರ್ಯಗಳನ್ನು ಕೊಡಬೇಕೆಂಬರು. ಬಹು ಸಂಖ್ಯಾಕರಾದ ಎರಡನೆಯ ಪಕ್ಷದವರು ಪುರುಷರಿಗೆ ಎಂದೂ ವಿದ್ಯೆ ಕೊಡಬಾರದೆಂದೂ, ವಿದ್ಯೆ ಕೊಡುವುದರಿಂದ ಸ್ವೇಚ್ಛಾ ವಿಹಾರಿಗಳಾಗಿ ಕೆಟ್ಟು ಹೋಗುವರೆಂದೂ, ಭಾವಿಸಿ, ಪೂರ್ವಾಚಾರವನ್ನು ನೆಲೆಗೊಳಿಸುವುದಕ್ಕೆ ಯತ್ನಪಡುವರು. ಇದು ಸ್ವತಂತ್ರರಾಷ್ಟ್ರವೂ ಅಲ್ಲ ; ದೊರೆತನದವರಿಗೂ ಪ್ರಜೆಗಳಿಗೂ ಐಕಮತ್ಯವಿಲ್ಲ. ಪರಿಪಾಲನೆ ಮಾಡುವವರು ಸ್ವದೇಶೀಯರಿಗಿಂತಲೂ ಹೆಚ್ಚಾದ ನಾಗರಿಕತೆಯುಳ್ಳವರಾಗಿ, ಆ ದೇಶಕ್ಕೆ ದಕ್ಷಿಣದಲ್ಲಿರುವ ಪರ್ವತಗಳನ್ನು ದಾಟಿ ಬಂದು ದೇಶವನ್ನು ಜಯಿಸಿದರು. ಇವರು ತಮ್ಮ ಪುರುಷರಿಗೆ ವಿದ್ಯೆಕೊಡಿಸಿ ಕೆಲವು ಸ್ವಾತಂತ್ರ್ಯಗಳನ್ನು ಕೊಟ್ಟು ಅವರನ್ನು ಗೌರವದಿಂದ ಕಾಣುವರು. ಅವರು ಆ ದೇಶದಲ್ಲಿ ಪುರುಷರಿಗಾಗಿ ಪಾಠಶಾಲೆಗಳನಿಟ್ಟು ಪುರುಷವಿದ್ಯೆ ವ್ಯಾಪಿಸುವಂತೆ ಮಾಡಬೇಕೆಂದು ಪ್ರಯತ್ನಿಸುತ್ತಿರುವರಾದರೂ, ಗೌರವವುಳ್ಳ ಕುಟುಂಬಗಳಿಂದ ಗಂಡುಮಕ್ಕಳು ಯಾರೂ ಸಾಲೆಗೆ ಸೇರದುದರಿಂದ ಅವರ ಮನೋರಥವಷ್ಟೊಂದು ನೆರವೇರಲಿಲ್ಲ. ಪ್ರಭುತ್ವದವರು ಪುರುಷರನ್ನು ಉಪಾಧ್ಯಾಯರನ್ನಾಗಿ ತಿದ್ದುವುದಕ್ಕಾಗಿ ರಾಜಧಾನಿಯಲ್ಲಿ ಒಂದು ಪಾಠಶಾಲೆಯನ್ನು ಈಗ ಹೊಸಲಾಗಿ ಇಟ್ಟಿರುವರು. ದೇಶಾಚಾರಕ್ಕೆ ವಿರುದ್ಧವಾದ ಇಂತಹ ಕಾರ್ಯಗಳನ್ನು ಮಾಡುತ್ತಿರುವುದರಿಂದ ದೊರೆತನದವರಲ್ಲಿ ಜನಸಾಮಾನ್ಯಕ್ಕೆ ಅನುರಾಗ ಕಡಿಮೆಯಾಗಿದೆ. ಓ ಹಿಂದೂಮಹಾಜನಗಳಿರಾ ! ಇವೆಲ್ಲವೂ ನಿಮ್ಮ ವಿಜಯಕ್ಕೆ ಅನುಕೂಲ ಸೂಚಕಗಳೇಯಲ್ಲವೇ ? ನನ್ನ ಯಜಮಾನಗಿತಿಯಾದ ಘಾಂಢೀಭಾಂಗಿ ಪುರುಷರಿಗೆ ವಿದ್ಯೆಕೊಡಿಸಿ ದೇಶದಲ್ಲಿ ಹೊಸ ಬದಲಾವಣೆಗಳನ್ನು ತರಿಸ ಕೋರುವ ಪಕ್ಷದವಳು. ತನ್ನ ದೇಶದಲ್ಲಿ ಪುರುಷರು ಓದುವುದಕ್ಕಾಗಲೀ ಬರೆಯುವುದಕ್ಕಾಗಲೀ ಕಲಿತವರಿಲ್ಲದುದರಿಂದ ತನ್ನ ಭಾಷೆಯ ಪದಗಳನ್ನು ನಾನು ನಮ್ಮ ಭಾಷೆಯಲ್ಲಿ ಬರೆದುಕೊಳ್ಳುವುದನ್ನು ನೋಡಿ, ಇತರ ದೇಶಗಳಲ್ಲಿ ಪುರುಷರು ಬರೆಯ ಕಲಿತಿರುವರೇ

ಎಂದು ನನ್ನ ಯಜಮಾನಗಿತ್ತಿಗೆ ಆಗ ಆಶ್ಚರ್ಯವುಂಟಾಯಿತು. ಆಗಲಾಕೆ ನನ್ನ ಮುಖದಕಡೆಗೆ ನೋಡಿ 'ನೀನು ನಿಮ್ಮದೇಶದ ಭೋಗಪುರುಷನೇ ?' ಎಂದು ಕೇಳಿದಳು. ಅಲ್ಲ, ಕುಲಪುರುಷನೆಂದು ನಾನು ಬದಲು ಹೇಳಿದೆನು. ದೊರೆತನದವರು ನೂತನವಾಗಿ ಇಡಿಸಿದ ಪಾಠಶಾಲೆಗೆ ಕಳುಹಲು ಪ್ರಾಯಕ್ಕೆ ಬಂದ ಪುರುಷರಾರನ್ನಾದರೂ ಸಂಪಾದಿಸಬೇಕೆಂದು, ಆಕೆ ಬಹುದಿನಗಳಿಂದ ಪ್ರಯತ್ನಮಾಡುತ್ತ, ವಿಫಲಪ್ರಯತ್ನೆಯಾಗಿದ್ದು, ವಿದ್ಯಾಭ್ಯಾಸ ಮಾಡುವುದಕ್ಕೆ ಆಸಕ್ತಿಯುಳ್ಳವನಾಗಿರುವ ನನ್ನನ್ನು ನೋಡಿ ಸಂತೋಷಿಸಿ, ನನ್ನನ್ನು ಪಾಠಶಾಲೆಗೆ ಕಳುಹಬೇಕೆಂದು ಉದ್ದೇಶಿಸಿಕೊಂಡಳು. ಕೊಂಚಮಟ್ಟಿಗಾದರೂ ಭಾಷಾಭಿವೃದ್ಧಿ ಮಾಡಿದವರನಲ್ಲದೆ ಆ ಪಾಠಶಾಲೆಯಲ್ಲಿ ಸೇರಿಸಿಕೊಳ್ಳರಾದುದರಿಂದ ನನಗೆ ಮನೆಯ ಹತ್ತಿರ ನಿತ್ಯವೂ ಎರಡು ಗಂಟೆಯ ಹೊತ್ತು ವಿದ್ಯೆ ಹೇಳುವುದಕ್ಕಾಗಿ ಭಾಂಗೀಫಿಂಡೀ ಎಂಬ ಹೆಸರಿನ ಒಬ್ಬ ವಿದ್ಯಾವತಿಯನ್ನು ತಿಂಗಳ ಸಂಬಳಕ್ಕೆ ಇಟ್ಟಳು. ಫಿಂಡೀ ಎಂಬ ಪದವು ನಮ್ಮ ದೇಶದಲ್ಲಿಯ 'ಶಾಸ್ತ್ರೀ' ಪದಕ್ಕೆ ಸಮಾನವಾದುದು. ಕುಲಪುರುಷನಿಗೆ ವಿದ್ಯೆ ಹೇಳುವುದರಿಂದ ಕುಲದವರು ತನ್ನನ್ನು ಬಹಿಷ್ಕಾರವಿಡುವರೋ ಏನೋ ಎಂದು ಆಕೆಯ ಮನಸ್ಸಿನಲ್ಲಿ ಭಯವುಂಟಾದರೂ ಬಡವಳಾದುದರಿಂದ ಸಂಬಳಕ್ಕೆ ಆಸೆಪಟ್ಟು, ನನ್ನ ಯಜಮಾನಗಿತ್ತಿ ದೊಡ್ಡ ರಾಜಕೀಯೋದ್ಯೋಗಿನಿಯಾದುದರಿಂದ, ಆಕೆಯ ಅನುಗ್ರಹವನ್ನು ಬಯಸಿಯೂ, ನನಗೆ ಪತ್ನೀವ್ರತಧರ್ಮಗಳನ್ನುಪದೇಶಿಸಿ ತನ್ನ ದೇಶದ ಆಧಿಕ್ಯವನ್ನು ನನಗೆ ಬೋಧಿಸಬೇಕೆಂದೆಣಿಸಿಯೂ, ಆ ಪಂಡಿತೆ ನನಗೆ ವಿದ್ಯೆ ಹೇಳುವುದಕ್ಕೆ ಒಪ್ಪಿಕೊಂಡಳು. ಪತ್ನೀವ್ರತವೆಂಬ ಶಬ್ದಕೇಳಿದೊಡನೆಯೇ ನಿಮ್ಮ ಮನಸ್ಸಿಗೆ ಅದ್ಭುತವಾಗಿ ತೋರಬಹುದು. ಆ ಭಾಷೆಯಲ್ಲಿ ಭಾರ್ಯೆಗೆ 'ಪಂಥೀ' ಎಂದು ಹೆಸರು. 'ಪಂಥೀ' ಶಬ್ದಕ್ಕೆ ಯಜಮಾನಗಿತಿ ಎಂದು ಅರ್ಥವು. ಭರ್ತಾರನನ್ನು 'ಭೂಥಾ' ಎಂಬರು. 'ಭೂಥಾ' ಎಂದರೆ ದಾಸನೆಂದರ್ಥವು. ಈ ಎರಡು ಹೆಸರುಗಳಿಂದಲೇ ಅಲ್ಲಿ ಭಾರ್ಯಾ ಭರ್ತರಿಗಿರುವ ಸಂಬಂಧವನ್ನು ನೀವು ಊಹಿಸಿ ತಿಳಿದುಕೊಳ್ಳಬಹುದು. ನಮ್ಮ ದೇಶದಲ್ಲಿ ಸ್ತ್ರೀಯರಿಗೆ ಪತಿವ್ರತಾಧರ್ಮವನ್ನುಪದೇಶಿಸುವ ಹಾಗೆಯೇ ಆ ದೇಶದಲ್ಲಿ ಪುರುಷರಿಗೆ ಪತ್ನೀವ್ರತಧರ್ಮಗಳನ್ನು ಕಲಿಸುವರು. ನನ್ನ ಉಪಾಧ್ಯಾಯಿನಿ "ಪಂಥೀ ವೇಥೀ ಭೂಥೀ" ಎಂಬ ಗ್ರಂಥದೊಳಗಣ ನೂರು ಪದ್ಯಗಳನ್ನು ನನಗೆ ಕಲಿಸಿದಳು. ಆ ಪುಸ್ತಕವನ್ನು "ಪತ್ನೀವ್ರತಧರ್ಮಬೋಧಿನಿ" ಎಂಬುದಾಗಿ ಭಾಷಾಂತರಿಸಬಹುದು. ಅವರ

ಭಾಷೆಯಲ್ಲಿ ಒತ್ತಕ್ಷರಗಳು ಅಧಿಕವು ; ಎರಡಕ್ಷರಗಳಿಂದ ಉಂಟಾದ ಪದಗಳು ಹೆಚ್ಚು ; ಪದಗಳು ವಿಶೇಷವಾಗಿ ಆಕಾರಾಂತಗಳಾಗಿಯೂ ಈಕಾರಾಂತಗಳಾಗಿಯೂ ಇರುವುವು. ಏಕಾರವು ಪ್ರಶ್ನಾರ್ಥಕವು. ಭಾಷಾವಿಷಯವು ಹಾಗೆ ಇರಲಿ. ಘಂಡಿಯವರು ನನಗೆ ಉಪದೇಶಿಸಿದ ಪದ್ಯಗಳನ್ನು ಮೊದಲು ನಾನು ಪ್ರೀತಿಯಿಂದನೆನಪಿಟ್ಟುಕೊಂಡೆನಾದರೂ, ನನಗಾಕೆ ಅವುಗಳ ಅರ್ಥ ಹೇಳದೊಡನೆಯೇ ಎಲ್ಲಿಯೂ ಇಲ್ಲದಕೋಪಬಂದು,ಆಕೆ ನನ್ನನ್ನು ಬಿಟ್ಟುಮನೆಗೆ ಹೋದೊಡನೆಯೇ ಹಿತ್ತಲಿಗೆ ಹೋಗಿಯಾದರೂ ನೋಡದಂತೆ ಬೆಂಕಿ ಹತ್ತಿಸಿ ಆ ಪುಸ್ತಕವನ್ನು ಸುಟ್ಟುಬಿಟ್ಟೆನು. ಆದರೂ ನನ್ನ ಕೋಪವಿಂದಿಗೂ ತೀರಲಿಲ್ಲ. ಆ ಪದ್ಯಗಳ ಅರ್ಥಕೇಳದ ಪಕ್ಷದಲ್ಲಿ ನನಗಿಂತಲೂ ಹೆಚ್ಚಾಗಿ ನಿಮಗೆ ಸಿಟ್ಟುಬರಬಹುದು. ಆ ಕೋಪದಿಂದಾದರೂ ಸೀಪೀ ದೇಶಕ್ಕೆ ಬಂದು ಇಲ್ಲಿಯ ಪುರುಷರನ್ನು ದಾಸ್ಯದಿಂದ ಉದ್ಧರಿಸುವಿರೆಂಬ ನಂಬಿಕೆಯಿಂದ ಅವುಗಳಲ್ಲಿ ಕೆಲವನ್ನು ಈಗ ಪರಿವರ್ತಿಸುವೆನು. ಇವು ರತ್ನಗಳೆಂದು ಹೇಳಲ್ಪಡುವುದಕ್ಕೆ ಅರ್ಹವಲ್ಲದೆ ಹೋದರೂ ನಮ್ಮ ದೇಶದ ಸಂಪ್ರದಾಯಾನುಸಾರವಾಗಿ ಇವುಗಳಿಗೆ ನವರತ್ನಗಳೆಂದು ಹೆಸರು ಕೊಡುವೆನು.

## * ಶ್ರೀ ಸತ್ಯರಾಜಾಚಾರ್ಯಕೃತ ನವರತ್ನಮಂಜರಿ.

ಕಂ|| ಪುರುಷಂಗೀಮಹಿಯೊಳ್ತ್ತ |
ನ್ನರಸಿಯೆ ತಾಂ ಪರಮದ್ದೈವವೆಂದಾಕೆಯನಾರ್ |
ನಿರುತಂ ಸೇವಿಪರವರೇ |
ಪರದೊಳಿಹದೊಳಮಖಂಡ ಸುಖಮಂ ಪಡೆಗುಂ ||೧||

ಮ|| ಬಿಡದಾಕಾಂತೆಯಿನುಂ ಮೊದಲ್ ನಿರುತಮುಂ ತಾನೇಳ್ದು ಪತ್ನೀವ್ರತಂ |
ಮಡುವೊಳ್ಮೀಯುತೆ ಭಕ್ತಿಯಿಂ ಕಲಶದೊಳ್ ಪಾನೀಯಮಂತುಂಬಿಕೊಂ|
ಡೊಡನೈತಂದು ಸತೀಪದದ್ವಯಮನೊಪ್ಪಲ್ಕರ್ಚುತಾವಾರಿಯಂ |
ಕುಡಿಯಲ್ವೇಳ್ಪುದಿದತ್ತೆ ಧಾರುಣಿಯೊಳೆಂದುಂ ಧರ್ಮಮಾರ್ಗಂವಲಂ||೨||

---

* ೧. ಈ ಭೂಮಿಯಲ್ಲಿ ಪುರುಷನಿಗೆ ಪತ್ನಿಯೇ ಪರಮದೈವವು : ಪತ್ನೀ ಸೇವೆಯನ್ನು ಯಾವಾಗಲೂ ಮಾಡುವ ಪುರುಷನೇ ಇಹದಲ್ಲಿಯೂ ಪರದಲ್ಲಿಯೂ ಸುಖಿಸುವನು.

೨. ಪ್ರತಿದಿನವೂ ಪುರುಷನು ತನ್ನ ಪತ್ನಿಗಿಂತಲೂ ಮುಂದಾಗಿ ಎದ್ದು, ನದಿಯಲ್ಲಿ ಮಿಂದು, ಕಲಶದಲ್ಲಿ ನೀರನ್ನು ತಂದು ತನ್ನ ಪತ್ನಿಯ ಕಾಲು ತೊಳೆದು ತಾನು ಆ ಪರಿಶುದ್ಧವಾದ ಪಾದತೀರ್ಥವನ್ನು ಕುಡಿಯಬೇಕು.

*ಕಂ॥ ಸತಿಯೆಂಘ್ರಿತೀರ್ಥಸೇವಾ ।
ವ್ರತಮಂ ಮೆರೆದೆನಿತು ವತ್ಸರಂಬರಮಿಳೆಯೊಳ್ ।
ಹಿತದಿಂ ಗೈವಾ ಮನುಜನ ।
ನಿತುಂ ಯುಗಂ ನಾಕಭೋಗದೊಳ್ಸುಖಿಯಕ್ಕುಂ ॥ ३ ॥

ಕಂ॥ ಸತಿ ಕುಷ್ಠರೋಗಪೀಡಿತೆ ।
ಯತಿವಿಕಳೆ ಹೃಕಾಕ್ಷಿ ವೃದ್ಧೆಯಾಗಿರ್ದೊಡೆಯುಂ ।
ವ್ರತದಿಂದವಳುಚ್ಛಿಷ್ಟಮು ।
ಣುತಿರಲ್ವೇಳ್ಕುಂ ಪರೇಷ್ಟೆಯಿರ್ದೊಡೆ ಪುರುಷಂ ॥ ೪ ॥

ಕಂ॥ ಪ್ರೀಯೆಸಿಯುಚ್ಛಿಷ್ಟಮನುರೆ ।
ಹೇಯೆಂಬಗೆದಾವದೂರ್ತನುಣಲಂಜೆದಪಂ ।
ಸಾಯ್ಕವಂಗೆ ನರಕದ ।
ಪಾಯಂ ತಾನಕ್ಕುಮತ್ತೆ ಕೋಟಿಯುಗಂಗಳ್ ॥ ೫ ॥

ಕಂ॥ ದೂರದಿನೀಕ್ಷಿಸಿ ಸತಿಯಂ ।
ಗೌರವದಿಂದೇಳ್ದುಪೊಂದೆಕಾಲೊಳ್ಪುರುಷಂ ।
ಪಿರಾರದೆ ಪ್ಯ್ಕವಾಗಿರೆ ನಿಂ ।
ತಾರಯೆ ಮನ್ನಿಪುದಿದತ್ತೆ ಧರ್ಮದಮಾರ್ಗಂ ॥ ೬ ॥

---

*3. ಸ್ತ್ರೀಪಾದತೀರ್ಥ ಸೇವನೆಯನ್ನು ಯಾವ ಪುರುಷನು ಎಷ್ಟು ವರ್ಷಗಳ ವರೆಗೆ ಈಭೂಮಂಡಲದಲ್ಲಿ ಮಾಡುವನೋ, ಆ ಪುರುಷನು ಅಷ್ಟು ಯುಗಗಳವರೆಗೂ ಪಾಪರಹಿತನಾಗಿ ಮೋಕ್ಷಪದವಿಯಲ್ಲಿ ಸುಖಿಸುವನು.

೪. ಕುಷ್ಠರೋಗಿಣಿಯಾದರೂ, ಕುರುಡಿಯಾದರೂ ಅತ್ಯಂತವಿಕಲವಾದ ಶರೀರೆಯಾದರೂ, ಮುದುಕಿಯಾದರೂ, ಪುಣ್ಯಲೋಕವನ್ನು ಬಯಸುವ ಪುರುಷನು ತನ್ನ ಪತ್ನಿಯ ಎಂಜಲನ್ನು ತಿನ್ನಬೇಕು.

೫. ಯಾವ ಪಾಪಮತಿಯಾದ ಪುರುಷನು, ಅಸಹ್ಯಪಟ್ಟು ಪತ್ನಿಯ ಎಂಜಲು ತಿನ್ನುವುದಿಲ್ಲವೋ, ಆ ಪಾಪಿ ನಾರಕಕೂಪದಲ್ಲಿ ಕೋಟಿಯುಗಗಳ ವರೆಗೂ ಕೊಳೆಯುವನು.

೬. ದೂರದಿಂದಲೆ ಪತ್ನಿಯನ್ನು ನೋಡಿ, ಗೌರವದಿಂದೆದ್ದು, ಪುರುಷನು ಒಂದೇಕಾಲಿನಿಂದ ಪ್ಯ್ಕಬೊಗ್ಗಿಸಿ ಪಕ್ಕದಲ್ಲಿ ನಿಲ್ಲಬೇಕು, ಸಲುಗೆಯಿಂದ ನಿಲ್ಲಲೂ ಕೊಡುಕೊಳ್ಳಲೂ ಕೂಡದು.

*ಕಂ|| ಪುರುಷನುಮಂ ಕಳ್ತೆಯುಮಂ ।
ಸ್ಥಿರದಂಡನವಿಸ್ಪಾಯೆಬಿದ್ದೊಡಕ್ಕುಂ ಕೇಡ ।
ಳ್ತರುದೋರದೆ ಸತ್ತಿಪತಿಯುಂ ।
ತೆರದಿಂದಂ ಪಾಸಕೊರ್ಪೆ ಶಿಕ್ಷಿಸವೇಳ್ಕುಂ || ೭ ||

ಕಂ|| ಜಡಿದುಂ ಬಡಿದಂಡಲೆದುಂ ।
ಬಿಡದಾಸತಿ ಭೋಗಪೂರುಷರನೊಂದಿದೊಡಂ ।
ಪಡೆಯದೆ ಪಿಸುಣಂ ಮನುಜಂ ।
ಮಡದಿಯೆ ಪರದೈವವೆಂದು ಸೇವಿಸವೇಳ್ಕುಂ || ೮ ||

ಕಂ|| ಎಂತು ಸ್ತ್ರೀಗೆ ಪತಿಯ ।
ರ್ಗಂತೆಯೆ ಪುರುಷರ್ಗೆ ಲಜ್ಜೆ ಭೂಷಣಮೆನಿಕುಂ ।
ತಾಂ ತಳೆವನತ್ತೆ ಸದ್ಗತಿ ।
ಯುಂ ತಪನೇಂದುಗಳನರಿಯದಬಲಾದಾಸಂ || ೯ ||

ಘಂಡೀ ನನಗೆ ಬಹುವಿಷಯಗಳನ್ನು ಕುರಿತು ನೀತಿಗಳನ್ನು ಬೋಧಿಸುತ್ತ ಬಂದರೂ ಓದಿಕೆಟ್ಟು ಹೋಗುವೆನೋ ಏನೋ ಎಂಬ ಭೀತಿಯಿಂದ ನನಗೆ ಮುಖ್ಯವಾಗಿ ಪ್ರತಿದಿನವೂ ತಪ್ಪದೆ ಎಷ್ಟೋ ಶ್ರದ್ಧೆಯಿಂದ ಪತ್ನೀವ್ರತ ಧರ್ಮಗಳನ್ನು ಉಪದೇಶಿಸುತ್ತಿದ್ದಳು. ಒಂದುದಿನ ಆ ವಿದ್ಯಾವತಿ ನಾನು ಭಾಷಾಂತರ ಮಾಡಿದ ನವರತ್ನಗಳಲ್ಲಿ ಏಳನೆಯ ರತ್ನವಾದ "ಪುರುಷನುಮಂ ಕಳ್ತೆಯುಮಂ......" ಎಂಬ ಮೂಲಶ್ಲೋಕವನ್ನು ನನಗೆ ಉತ್ಸಾಹಪೂರ್ವಕವಾಗಿ

*೭. ಪುರುಷನೂ ಕತ್ತೆಯೂ ಸ್ಥಿರದಂಡನವಿಲ್ಲದಿದ್ದರೆ ಕೆಟ್ಟು ಹೋಗುವುವು, ಕರುಣೆಯನ್ನಿಡದೆ ಯಾವುದಾದರೊಂದು ನೆವದಿಂದ ಪತ್ನಿ ಪುರುಷನನ್ನು ತಿಂಗಳಿಗೊಂದುಬಾರಿಯಾದರೂ ಬಡಿಯಬೇಕು.

೮. ಪತ್ನಿ ಹೊಡೆದರೂ, ಗದರಿಸಿದರೂ, ಬಾಧಿಸಿದರೂ, ಭೋಗಪುರುಷರನ್ನಿಟ್ಟುಕೊಂಡರೂ, ಪುರುಷನು ಹೊಟ್ಟೆಕಿಚ್ಚುಪಡದೆ, ಪುರುಷನಿಗೆ ಪತ್ನಿಯೇ ದೈವವೆಂದು ಭಕ್ತಿಯಿಂದ ಆಕೆಯನ್ನು ಸೇವಿಸಬೇಕು.

೯. ಸ್ತ್ರೀಯರಿಗೆ ಸ್ವೇಚ್ಛೆ ಹೇಗೆ ಭೂಷಣವೋ, ಹಾಗೆಯೆ ಪುರುಷರಿಗೆ ಲಜ್ಜೆಯೇ ಮಹಾಭೂಷಣವು. ಸೂರ್ಯಚಂದ್ರರ ಮುಖವನ್ನಾದರೂ ನೋಡದಿರುವ ಪರಮಪತ್ನೀವ್ರತನೇ ಪರಮಗತಿಯನ್ನು ಹೊಂದುವನು.

ಬೋಧಿಸಿ, ಆ ದಂಡನೆ ಪುರುಷರ ಮೇಲಿಗಾಗಿಯೇ, ಎಂದು ಹೇತು ಕಲ್ಪನೆಗಳಿಂದ ವ್ಯಾಖ್ಯಾನಮಾಡಿ, ಪುರುಷದಂಡನೆಯ ಲಾಭಗಳನ್ನು ತಿಳುಹುತ್ತಿರಲು, ನನ್ನ ಮನೋಗತವನ್ನು ಆಕೆಗೆ ತಿಳಿಯಪಡಿಸ ಬಾರದೆಂದು ನಾನು ಎಷ್ಟು ಪ್ರಯತ್ನಮಾಡಿದರೂ, ನನ್ನ ಮನಸ್ಸಿನಲ್ಲಿ ಹಾಲಾಹಲದ ಹಾಗೆ ಹುಟ್ಟಿ ಹೊರಹೊಮ್ಮುತ್ತಿರುವ ಕೋಪಾಗ್ನಿ ನಿಲ್ಲದೆ ನನ್ನ ಕಣ್ಣುಗಳಿಂದ ಹೊರಡ ತೊಡಗಲು, ಅಸೂಯೆಯಿಂದ ಮುಖವನ್ನು ಇನ್ನೊಂದು ಕಡೆಗೆ ತಿರುಗಿಸಿದೆನು. ಆ ನೀತಿ ನನಗೆ ರುಚಿಸಲಿಲ್ಲವೆಂದು ಬುದ್ಧಿವತಿಯಾದ ಆಕೆ ಗ್ರಹಿಸಿ, ಪುರುಷರನ್ನು ಸ್ತ್ರೀಯರು ಹೊಡೆಯದೆ ಆದರಿಸಬೇಕೆಂದು ಬೋಧಿಸುವ ಆ ದೇಶದ ನವನಾಗರಿಕರ ಮತವೇ ನನಗೆ ಸಮ್ಮತವೆಂದೂ, ಆಗಲೇ ವಿದ್ಯಾಭ್ಯಾಸದಿಂದ ಮತಿಗೆಟ್ಟು ನಾನು ಹಾಳಾಗಿ ಹೋಗುತ್ತಿರುವೆನೆಂದೂ ನನ್ನ ನಿಮಿತ್ತವಾಗಿ ಕೊಂಚ ವ್ಯಸನಪಟ್ಟು, ಈ ವಿಷಯದಲ್ಲಿ ನಿಮ್ಮ ದೇಶದ ಆಚಾರವೇನೆಂದು ನನ್ನನ್ನು ಕೇಳಿದಳು. “ಬ್ರಾಹ್ಮಣಸ್ಯ ಕ್ಷಣಂ ಕೋಪಂ” ಎಂಬ ನೀತಿಯಂತೆ ಶಾಂತಿಜಲದಿಂದ ನಾನು ಕೋಪಾಗ್ನಿಯನ್ನು ತವಿಸಿಕೊಂಡು ನಗೆಮೊಗದಿಂದ “ನಮ್ಮ ದೇಶದಲ್ಲಿ ಸ್ತ್ರೀಯರನ್ನೇ ಪುರುಷರು ಹೊಡೆಯುವರು” ಎಂದು ಸತ್ಯವನ್ನು ಹೇಳಿದೆನು. ನಾನು ವಿನೋದಕ್ಕಾದರೂ ಅಸತ್ಯ ಹೇಳೆನೆಂದು ಅವಳು ತಿಳಿದುಕೊಳ್ಳದೆ, ಅದು ಪರಿಹಾಸೋಕ್ತಿಯೆಂದು ಭಾವಿಸಿ, ನನ್ನ ಮಾತುಗಳನ್ನು ಆಕೆ ನಂಬಲಿಲ್ಲ. ಈ ರಂಥೀ ದೇಶದಲ್ಲಿ ಸದಾಚಾರಸಂಪನ್ನೆಯರಾದ ಸ್ತ್ರೀರತ್ನಗಳು ನಿತ್ಯವೂ ತಮ್ಮ ಪುರುಷರನ್ನು ವೇಣುದಂಡದಿಂದ ದಂಡಿಸುತ್ತಿರುವರೆಂದರೆ, ಪ್ರತ್ಯಕ್ಷಾನುಭವವಿಲ್ಲದುದರಿಂದ, ನಮ್ಮ ಘಂಡಿಯ ಹಾಗೆಯೇ ನೀವೂ ನಂಬದೆ ಹೋಗಬಹುದು. ಆದರೆ ನಾನಿಲ್ಲಿ ಕಣ್ಣಾರೆ ನೋಡಿದ ಸತ್ಯಗಳನ್ನು ವೇದವಾಕ್ಯಗಳ ಹಾಗೆ ಹೇಳುತ್ತಿರುವುದರಿಂದ, ಪುರಾಣಗಾಥೆಗಳನ್ನು ನಂಬಲಭ್ಯಾಸವಾಂತ ನೀವು ಮಾತ್ರವಂತಹ ಅವಿಶ್ವಾಸಪಾಪವನ್ನು ಕಟ್ಟಿಕೊಳ್ಳಲಾರಿರೆಂದು ನಾನು ದೃಢವಾಗಿ ನಂಬುವೆನು.

ಆಕೆ ನನ್ನ ಮಾತುಗಳನ್ನು ನಂಬದೆ ಅಂತಹ ವೈಪರೀತ್ಯವು ಈಶ್ವರಸೃಷ್ಟಿಯಲ್ಲಿ ಸಂಭವಿಸಲಾರದೆಂದು ವಾದಿಸಿದುದರಿಂದ, ನನ್ನ ಸತ್ಯಸಂಧತೆಯನ್ನು ಕುರಿತು ಸಂಶಯಪಟ್ಟುದಕ್ಕಾಗಿ ಎಷ್ಟೋ ವ್ಯಸನಪಟ್ಟು ನನ್ನ ಮಾತುಗಳನ್ನಾಕೆಗೆ ಚೆನ್ನಾಗಿ ತಿಳುಹಬೇಕೆಂದು, ಇಲ್ಲಿ ಸ್ತ್ರೀಯರು ಪುರುಷರನ್ನು ಹೊಡೆವುದು ಎಷ್ಟು ಸತ್ಯವೋ, ನಮ್ಮ ದೇಶದಲ್ಲಿ ಪುರುಷರು ಸ್ತ್ರೀಯರನ್ನು ಹೊಡೆ

ವುದು ಅಷ್ಟೇ ಸತ್ಯವೆಂದೂ, ಬೇಕಾದ ಪಕ್ಷದಲ್ಲಿ ನಿಮಗೆ ನಂಬಿಕೆ ಹುಟ್ಟುವ ಹಾಗೆ ನಮ್ಮ ಶಾಸ್ತ್ರಗಳಿಂದ ಬೇಕಾದಷ್ಟು ಪ್ರಮಾಣವಚನಗಳನ್ನು ತೋರಿ ಸುವೆನೆಂದೂ, ಹೇಳಿ ಸ್ಮೃತಿಗಳೆಲ್ಲವುಗಳಲ್ಲಿ ಸರ್ವೋತ್ಕೃಷ್ಟವಾದ ಮನುಸ್ಮೃ ತಿಯ ಎಂಟನೆಯಧ್ಯಾಯದಿಂದ ಈ ಕೆಳಗಣ ಶ್ಲೋಕವನ್ನು ಹೇಳಿದೆನು.

ಶ್ಲೋ॥ ಭಾರ್ಯಾ ಪುತ್ರಶ್ಚದಾಸಶ್ಚ ಶಿಷ್ಯೋಭ್ರಾತಾಚಸೋದರಃ ।
ಪ್ರಾಪ್ತಾಪರಾಧಾಸ್ತಾಡ್ಯಾಃ ಸ್ಯುರಜ್ಜ್ವಾವೇಣುದಂಡೇನವಾ ॥

ಶ್ಲೋ॥ ಪೃಷ್ಠತಸ್ತುಶರೀರಸ್ಯ ನೋತ್ತಮಾಂಗೇಕಥಂಚನ ।
ಅತೋನ್ಯಥಾತು ಪ್ರಹರನ್ ಪ್ರಾಪ್ತಃಸ್ಯಾಚ್ಚೌರಕಿಲ್ಬಿಷಮ್ ॥

ಆಗಲಾಕೆ ಇವುಗಳ ಅರ್ಥವೇನೆಂದು ಕೇಳಿದಳು. ಭಾರ್ಯೆಯೂ, ಪುತ್ರನೂ, ಸೇವಕನೂ, ಶಿಷ್ಯನೂ, ಭ್ರಾತಾರನೂ, ಸೋದರನೂ, ತಪ್ಪು ಮಾಡಿದರೆ ಹಗ್ಗ ದಿಂದಾದರೂ ಬಿದಿರುಕೋಲುಗಳಿಂದಾದರೂ ಹೊಡೆಯಬೇಕೆಂದು ಮೊದಲ ನೆಯ ಶ್ಲೋಕಕ್ಕೆ ಅರ್ಥವೆಂದೂ, ಶರೀರದ ಹಿಂದಣಭಾಗದಲ್ಲಿಯೇ ಹೊರತು ನೆತ್ತಿಯಮೇಲೆ ಹೊಡೆಯಬಾರದು, ಬೇರೊಂದು ಸ್ಥಳದಲ್ಲಿ ಹೊಡೆದವನು ಚೋ ರಪಾಪವನ್ನು ಹೊಂದುವನೆಂದು ಎರಡನೆಯ ಶ್ಲೋಕದ ಅರ್ಥವೆಂದೂ ಹೇಳಿ,- ಆ ಬಳಿಕ 'ಪ್ರಾಪ್ತಾಪರಾಧಾ' ಎಂದು ಮೂಲದಲ್ಲಿದ್ದರೂ ಹೊಡೆವುದೇ ಪ್ರಧಾನ ವಲ್ಲದೆ ತಪ್ಪು ಮಾಡುವುದು ಪ್ರಧಾನವಲ್ಲವಾದುದರಿಂದ, ನಮ್ಮ ದೇಶದಲ್ಲಿ ಪುರು ಷರು ತಪ್ಪಿಲ್ಲದಿದ್ದರೂ ಭಾರ್ಯೆಯರನ್ನು ಹೊಡೆವುದು ಶಿಷ್ಟಾಚಾರವಾದುದೆಂದೂ, ನೆತ್ತಿಯ ಮೇಲೆ ಹೊಡೆಯಕೂಡದೆಂದು ಮೂಲದಲ್ಲಿ ಕಾಣುತ್ತಿದ್ದರೂ, ನೆತ್ತಿ ಯೂ ಶರೀರದ ಭಾಗವೇ ಆಗಿರುವುದರಿಂದ ನೆತ್ತಿಯ ಮೇಲೆ ಶಾಸ್ತ್ರಾರ್ಥವಾಗಿ ಮುಂದುಕಡೆಗೆ ಬೆರಳನಷ್ಟು ಎಡೆ ಬಿಟ್ಟು, ಹಿಂದಿನ ಹೆಡೆತಲೆಯಲ್ಲಿ ಹೊಡೆಯ ಬಹುದೆಂದೂ ವಾಕ್ಯಸಮನ್ವಯಮಾಡಿ, ಅರ್ಥವನ್ನು ವಿವರಿಸಿದೆನು. ಆ ಮೇಲೆ ಫಿಂಡೀ ನನ್ನ ಕೈಯಿಂದ ಈ ಶ್ಲೋಕಗಳನ್ನೂ ಶ್ಲೋಕಾರ್ಥಗಳನ್ನೂ ಎರ ಡುಸಾರಿ ಹೇಳಿಸಿ, ಕಣ್ಣು ಮುಚ್ಚಿಕೊಂಡು ಕೊಂಚ ಹೊತ್ತು ಆಲೋಚಿಸಿ, ನಿನ್ನ ಮೋಸವೀಗ ತಿಳಿದುದೆಂದು ಚಿಟಿಕೆಹಾಕಿ, ಮೊದಲನೆಯ ಶ್ಲೋಕದಲ್ಲಿ 'ಭಾರ್ಯಾ' ಎಂಬೆಡೆಯಲ್ಲಿ 'ಭರ್ತಾ' ಎಂದಿರಬೇಕೆಂದೂ, ಪುತ್ರ, ದಾಸ, ಶಿಷ್ಯ, ಭ್ರಾತೃ, ಸೋದರ, ಎಂದು ಶ್ಲೋಕದಲ್ಲಿ ಹೇಳಲ್ಪಟ್ಟವರೆಲ್ಲರೂ ಪುರುಷರಾಗಿ ರಲು, ಮೊದಲು ಮಾತ್ರ 'ಭಾರ್ಯೆ' ಎಂದು ಒಬ್ಬ ಸ್ತ್ರೀಯಿರುವುದು ಅಸಂಭಾ ವ್ಯವೆಂದೂ, ಆದುದರಿಂದ ಇದು ಕೂಡ 'ಭರ್ತಾ' ಎಂದಿದ್ದರೂ ನಾನು ಪರಿಹಾ

ಸ್ವಾರ್ಥವಾಗಿ 'ಭಾರ್ಯಾ' ಎಂದು ಬದಲಿಸಿ ಓದಿದೆನೆಂದೂ, ಸಿದ್ಧಾಂತವಮಾಡಿ, ಅಷ್ಟರಲ್ಲಿಯಾದರೂ ಸುಮ್ಮನಾಗದೆ, ಪುರುಷರಿಗೆ ಬರಹಬಂದ ಪಕ್ಷದಲ್ಲಿ ಇಂತಹ ಅನರ್ಥಗಳು ಸಂಭವಿಸುವುವೆಂದು ತಿಳದೇ ಬುದ್ಧಿವಂತರಾದ ತಮ್ಮ ಹಿರಿಯರು ಪುರುಷವಿದ್ಯೆ ಕೊಡದೆಂಬ ಸಿದ್ಧಾಂತವಮಾಡಿದರೆಂದೂ, ತನ್ನ ಅಭಿಪ್ರಾಯವನ್ನು ಹೊರಪಡಿಸಿದಳು. ಅಲ್ಲಿ ನನ್ನ ಪಕ್ಷವನ್ನವಲಂಬಿಸಿ ಮಾತನಾಡುವವರಾರೂ ಇಲ್ಲದೆ ಹೋದುದರಿಂದ ನನ್ನ ವಾದಬಲವನ್ನು ನಾನು ತಿಳದಿದ್ದರೂ, ವಿವಾದ ಕೊಡದೆಂದು ಸುಮ್ಮನಿರಬೇಕಾಯಿತು.

ಆದರೂ ನಾನು ಅಷ್ಟರಿಂದ ಸುಮ್ಮನಾಗದೆ, ನಮ್ಮ ದೇಶದಲ್ಲಿ ಪುರುಷರೇ ಸ್ವತಂತ್ರರೆಂದೂ ಸ್ತ್ರೀಯರು ಪುರುಷರಿಗೆ ಒಳಪಟ್ಟವರೆಂದೂ, ಮನುಸ್ಮೃತಿ ಯಿಂದ ನಾನು ಉದಾಹರಿಸಿದ ಪ್ರಮಾಣಗಳು ಸತ್ಯವಾದುವೇ ಎಂದೂ, ಆಕೆಗೆ ಹೇಗಾದರೂ ಮನಸ್ಸಿಗೆ ಹತ್ತಿಸಬೇಕೆಂದು ನಿಶ್ಚಯಿಸಿಕೊಂಡು ಪತಿವ್ರತಾ ಧರ್ಮಗಳನ್ನು ಕುರಿತು ನಮ್ಮ ಪುರಾಣಗಳಲ್ಲಿರುವ ವಿಷಯಗಳನೇಕವನ್ನು ಆಕೆಗೆ ಹೇಳಿದೆನು. ಹೇಳಿದುದನೆಲ್ಲವನ್ನೂ ಆಕೆ ಆದರದಿಂದ ಕೇಳುವುದಕ್ಕೆ ಮೊ ದಲುಮಾಡಿದುದರಿಂದ ನನಗೆ ಕೊಂಚ ಪ್ರೋತ್ಸಾಹವುಂಟಾಗಿ, ಪತಿವ್ರತಾಧ ರ್ಮಗಳನ್ನು ಆಕೆಯ ಮನಸ್ಸಿಗೆ ಚೆನ್ನಾಗಿ ಹತ್ತಿಸಲೆಣಿಸಿ, ಗಂಡನ ಎಂಜಲು ಣ್ಣುವುದು ಪತ್ನಿಗೆ ಪರಮಧರ್ಮವೆಂದು ತೋರಿಸುವುದಕ್ಕಾಗಿ ನಾಲಾಯನಿಯ ಕಥೆ ಆರಂಭಿಸಿ ಹೇಳತೊಡಗಿದೆನು.

"ಪೂರ್ವಕಾಲದಲ್ಲಿ ನಾಲಾಯನಿಯಾದ ಇಂದ್ರಸೇನೆ ಮೌದ್ಗಲ್ಯನಿಗೆ ಭಾರ್ಯೆಯಾದಳು. ಆತನು ಕುಷ್ಠರೋಗ ಪೀಡಿತನು. ಆ ಮಹಾಪತಿವ್ರತೆ ಆತನ ಉಚ್ಛಿಷ್ಟವನ್ನು ಪ್ರತಿದಿನವೂ ಅಮೃತತುಲ್ಯವಾಗಿ ಭಕ್ಷಿಸುವಳು. ಭೋಜನ ಮಾಡುತ್ತಿರುವ ಕಾಲದಲ್ಲಿ ಒಂದು ದಿನ ಆತನ ಅಂಗುಷ್ಠವು ತುಂಡಾಗಿ ಅನ್ನದಲ್ಲಿ ಬಿತ್ತು. ಆದರೂ ಪತಿವ್ರತಾಶಿರೋಮಣಿಯಾದ ಆಕೆ ಅಸಹ್ಯಪಡದೆ ಆ ಅಂಗುಷ್ಠ ವನ್ನು ತೆಗೆದು ಭಕ್ತಿಯಿಂದ ದೂರವಾಗಿಟ್ಟು, ಎಂಜಲನ್ನವನ್ನು ಪರಮಾನ್ನದ ಹಾಗೆ ಉಂಡಳು. ಅದನ್ನು ನೋಡಿ—."

ಇಷ್ಟು ಹೇಳುವುದರೊಳಗೆ ಆಕೆ ತನ್ನ ಕಿವಿಗಳನ್ನು ಮುಚ್ಚಿಕೊಂಡು ನನ್ನ ಮಾತಿಗೆ ಅಡ್ಡಬಂದು, ಪುರುಷನಾದ ನಾನೀಕಥೆಯನ್ನು ಒಂದೇ ನಿಮಿಷದಲ್ಲಿ ಕಲ್ಪಿಸುವುದು ಅಸಂಭಾವ್ಯವೆಂದೆಣಿಸಿ, ನಮಗೆ ಶಾಸ್ತ್ರಗಳವೆ ಎಂದೂ ಅವುಗಳಲ್ಲಿ

ಭರ್ತೃಶುಶ್ರೂಷಾದಿಗಳು ಹೇಳಲ್ಪಟ್ಟಿವೆಯೆಂದೂ ಕೊಂಚಮಟ್ಟಿಗೆ ನಂಬಿದರೂ, ನನ್ನ ಕಥೆಯನ್ನು ಶಾಂತವಾಗಿ ಹೇಳಬಿಡದೆ, ದುರಾಗ್ರಹ ಗ್ರಸ್ತೆಯಾಗಿ, ನಮ್ಮ ಶಾಸ್ತ್ರಗಳು ರಾಕ್ಷಸರು ಮಾಡಿದ ಕೆಟ್ಟ ಕಥೆಗಳೆಂದು ದೂಷಿಸಿದಳು. ಆಗ ನಾನೂ, ಕೋಪವನ್ನು ಸಹಿಸಲಾರದೆ, ಗುರುಧಿಕ್ಕಾರಪಾಪಬಂದರೂ ಚಿಂತೆಯಿಲ್ಲವೆಂದು ಮಾತಿಗೆ ಇದಿರಾಡಿ ಸ್ವಲ್ಪ ಹೊತ್ತು ವಾಕ್ಕಲಹಕ್ಕೆ ಮುಂದಾದೆನು. ನನ್ನನ್ನು ದೂಷಿಸಿದರೂ ನಾನು ಸುಮ್ಮನಿರುವೆನು; ಆದರೆ ನಮ್ಮ ಶಾಸ್ತ್ರಗಳನ್ನು ದೂಷಿಸಿದ ಮೇಲೆ ಶಾಸ್ತ್ರಬದ್ಧನಾದ ನಾನು ಹೇಗೆ ಸುಮ್ಮನಿರಲಾಪೆನು? ನಮ್ಮ ವಾಕ್ಕಲಹದ ದೆಸೆಯಿಂದ ಆ ದಿನದ ಸಂಭಾಷಣೆ ಅಲ್ಲಿಗೆ ಮುಗಿಯಿತು. ಆ ಕಾರಣದಿಂದ ನಾನಾಕೆಗೆ ಹೇಳಬೇಕೆಂದೆಣಿಸಿದ ಸ್ತ್ರೀಧರ್ಮಗಳನ್ನಾಕೆಗೆ ಹೇಳಲಾರದೆ ಹೋದೆನಲ್ಲಾ! ಎಂದು ನನಗೆ ವ್ಯಸನವುಂಟಾದುದಾದರೂ, ಮೀರಿಹೋದವಿಷಯಕ್ಕೆ ದುಃಖಿಸಿ ಪ್ರಯೋಜನವಿಲ್ಲ. ಇದರಿಂದ ನನ್ನ ವಿದ್ಯೆಗೆ ವಿಘ್ನ ಬರುವ ಹಾಗೆ ಕಂಡು ಬಂದುದು; ಆದರೂ ಆಕೆ ದೀರ್ಘಕ್ರೋಧೆಯಲ್ಲದುದರಿಂದಲೂ, ನಾನು ಹೋಗಿ ಆಕೆಯ ಕ್ಷಮಾಪಣೆ ಕೇಳಿ ಪ್ರಾರ್ಥಿಸಿದುದರಿಂದಲೂ, ನಾಲ್ಕುದಿನಗಳನಂತರ ಯಥಾಪ್ರಕಾರವಾಗಿ ಬಂದು ನನಗೆ ಮರಳಿ ಬರಹಕಲಿಸುವುದಕ್ಕೆ ಆರಂಭಿಸಿದಳು. ಆ ದಿನ ಮೊದಲ್ಗೊಂಡು ನಾನು ಆಕೆಯೊಡನೆ ನಮ್ಮ ದೇಶವನ್ನು ಕುರಿತು ಮಾತನಾಡೆನೆಂದು ಆಣೆ ಇಟ್ಟುಕೊಂಡೆನು. ಆ ವೇಳೆ ನಡದ ವೃತ್ತಾಂತವನ್ನು ನಿಮಗೆ ಮುಂದಿನ ಪ್ರಕರಣಗಳಲ್ಲಿ ಹೇಳುವೆನು.

## ಅಯಿದನೆಯ ಪ್ರಕರಣವು.

ಹಿಂದೆ ಹೇಳಿದಂತೆ ನಮ್ಮ ಕಲಹಮುಗಿದು ನಾವಿಬ್ಬರೂ ಸಮಾಧಾನ ಹೊಂದಿದ ತರುವಾಯ ನಮ್ಮ ಥಿಂಥೀಗೆ ನನ್ನ ಮೇಲೆ ಅಪರಿಮಿತಾನುಗ್ರಹವುಂಟಾದುದು. ಆ ಅನುಗ್ರಹವುಂಟಾಗುವುದಕ್ಕೆ ನಾನಾಕೆಗೆ ಪರಮಭಕ್ತನಾಗಿ ನಮ್ಮ ದೇಶದಲ್ಲಿ ಶಿಷ್ಯರು ಗುರುಗಳಿಗೆ ಶುಶ್ರೂಷೆಮಾಡುವ ಹಾಗೆ ಸಮಸ್ತೋಪಚಾರಗಳನ್ನು ಮಾಡುತ್ತ, ಹೊಂದಿಕೆಯಾಗಿದ್ದುದೇ ಕಾರಣವಲ್ಲದೆ ಬೇರೊಂದಲ್ಲ. ಸ್ತ್ರೀಯರಾಗಲಿ ಪುರುಷರಾಗಲಿ - ವಿದ್ಯೆ ಹೇಳಿದವರು ದೈವಸಮಾನರಾದುದರಿಂದ ನಾನು ಸ್ತ್ರೀದಾಸ್ಯ ಮಾಡುತ್ತಿದ್ದೆನೆಂದು ನೀವು ನನ್ನನ್ನು ನಿಂದಿಸದೆ ನನ್ನ ಗುರುಭಕ್ತಿಗೆ ಮೆಚ್ಚಬೇಕು. ಅದಿರಲಿ; ಆ ತರುವಾಯ ಶಿಷ್ಯ ವತ್ಸಲೆ

ಯಾದ ಆಕೆ ಆ ಜನರ ಆಚಾರವ್ಯವಹಾರ ಮೊದಲಾದುದೆಲ್ಲವನ್ನೂ ನನಗೆ ಮರ್ಮ ಬಿಟ್ಟು ಹೇಳುವುದಕ್ಕೆ ಮೊದಲು ಮಾಡಿದಳು. ಒಂದು ದಿನ ಆಕೆ ಊಟಮಾಡಿ ಉತ್ಸಾಹದಿಂದ ತಾಂಬೂಲಚರ್ವಣೆಮಾಡುತ್ತ ಕುಳಿತುಕೊಂಡಿದ್ದಾಗ ನಾನು ಹೋಗಿ ಗುರುವಂದನೆಮಾಡಿ ಕೈಗಳನ್ನು ಜೋಡಿಸಿ ಇದಿರಲ್ಲಿ ನಿಂತುಕೊಂಡು ಭಕ್ತಿಪೂರ್ವಕವಾಗಿ ಹೀಗೆ ಕೇಳಿದೆನು.

“ಅಮ್ಮಾ! ನೀವು ಸರ್ವವನ್ನೂ ತಿಳಿದವರು. ಸ್ವಭಾವದಿಂದ ಪುರುಷರೇ ಹೆಚ್ಚು ಬಲವುಳ್ಳವರೋ ಸ್ತ್ರೀಯರು ಹೆಚ್ಚು ಬಲವುಳ್ಳವರೋ ಈ ವಿಷಯವು ನಿಮ್ಮ ಶಿಷ್ಯನಿಗೆ ಅಪ್ಪಣೆಯಾಗಬೇಕು.”

ಪುರುಷರೇ ಅಧಿಕಬಲವುಳ್ಳವರೆಂದು ಆಕೆ ಅಪ್ಪಣೆಕೊಟ್ಟಳು. ಆಗ ನಮಗಿಬ್ಬರಿಗೂ ಹೀಗೆ ಸಂಭಾಷಣೆ ನಡೆದುದು.

“ಅಮ್ಮಾ! ಸ್ತ್ರೀ ಪುರುಷರೊಳಗೆ ಪುರುಷರೇ ಅಧಿಕ ಬಲವಂತರೆಂದು ನೀವು ಅಪ್ಪಣೆಕೊಡುವಿರಷ್ಟೆ? ಹಾಗಾದ ಪಕ್ಷದಲ್ಲಿ ಈ ದೇಶದಲ್ಲಿ ಬಲಾಧಿಕರಾದ ಪುರುಷರು ಬಲಹೀನೆಯರಾದ ಸ್ತ್ರೀಯರಿಗೆ ಹೇಗೆ ಒಳಗಾದರು? ಈ ನನ್ನ ಸಂಶಯವನ್ನು ತೀರಿಸಬೇಕು.”

“ಎಲಾ ಹುಚ್ಚಾ! ನೀನು ಏನೊಂದೂ ತಿಳಿಯದ ಮೂಢನಾಗಿರುವೆಯಲ್ಲ! ಪುರುಷರು ಸ್ತ್ರೀಯರಿಗೆ ಒಳಪಡಬೇಕೆಂಬುದು ಈಶ್ವರೋದ್ದೇಶವು. (ಈಶ್ವರನೆಂದು ಪುಲ್ಲಿಂಗ ಪ್ರಯೋಗಮಾಡಿದುದಕ್ಕೆ ವಾಚಕರು ನನ್ನನ್ನು ಮನ್ನಿಸಬೇಕು. ಆ ದೇಶದಲ್ಲಿ ದೇವರು ಸ್ತ್ರೀಯೆಂದೇ ಪ್ರಸಿದ್ಧವು. ಈಶ್ವರಿ ಎಂಬರ್ಥಕೊಡುವ ಹಾಗೆ ಆಕೆ ಸ್ತ್ರೀಲಿಂಗವನ್ನೇ ಉಪಯೋಗಿಸಿದರೂ, ನಿಮಗೆ ತಿಳಿಯುವುದಕ್ಕಾಗಿ ನಾನು ‘ಈಶ್ವರ’ ನೆನ್ನುವೆನು) - ಬಲವಂತರಾದುದರಿಂದ ಪುರುಷರು ಶ್ರಮಪಟ್ಟು ಕೆಲಸಮಾಡುವುದಕ್ಕೂ, ಪತ್ನೀಸೇವೆ ಮಾಡುವುದಕ್ಕೂ ತಕ್ಕವರು. ಅಷ್ಟೆಯಲ್ಲದೆ ಅವರು ಸ್ತ್ರೀಯರಹಾಗೆ ಆಲೋಚನೆಯ ಕೆಲಸಗಳನ್ನು ಮಾಡುವುದಕ್ಕಾಗಲಿ ಗ್ರಂಥರಚನೆ ಮಾಡುವುದಕ್ಕಾಗಲಿ ಸ್ವಾಭಾವಿಕವಾಗಿ ತಕ್ಕವರಲ್ಲ. ಪುರುಷರು ಬಲಾಧಿಕರಾಗದ ಪಕ್ಷದಲ್ಲಿ...”

“ನಮ್ಮ ದೇಶದಲ್ಲಿ ಪುರುಷರು ಆಲೋಚನೆ ಬೇಕಾಗುವ ಕೆಲಸಗಳನ್ನು ಮಾಡುತ್ತ ಕವಿತ್ವವನ್ನು ಹೇಳುವರಲ್ಲ......”

“ಮಧ್ಯದಲ್ಲಿ ನನ್ನ ಮಾತುಗಳಿಗೆ ಅಡ್ಡಬಾರದೆ ನಾನು ಹೇಳುವುದನ್ನು ಶಾಂತವಾಗಿ ಕೇಳಿ ನಿನ್ನ ಸಂಶಯಗಳನ್ನು ಹೋಗಗೊಳಿಸಿ ಕೊಳ್ಳುವನಾಗು.

ನಿಮ್ಮದು ಕೇವಲ ರಾಕ್ಷಸಸೃಷ್ಟಿ. (ನಿನ್ನ ಮಾತುಗಳನ್ನು ನಂಬುವಪಕ್ಷದಲ್ಲಿ) ಆದುದರಿಂದಲೇ ನಿಮ್ಮ ದೇಶದಲ್ಲಿ ಸರ್ವವೂ, ದೇವತಾಸೃಷ್ಟಿಯಾದ ನಮ್ಮದೇ ಶಕ್ತೆ ವಿಪರೀತವಾಗಿದೆ. ಆ ಸಂಗತಿ ಇರಲಿ. ಪುರುಷರು ಬಲಾಧಿಕರಾಗದ ಪಕ್ಷದಲ್ಲಿ ಅವರು, ಪತ್ನಿಯರಿಗೆ ಅಡಿಗೆಮಾಡಿ ಹಾಕುವುದಕ್ಕೂ, ಉಪಚಾರಗಳನ್ನು ಮಾಡುವುದಕ್ಕೂ, ಹೊರೆಗಳನ್ನು ಹೊರುವುದಕ್ಕೂ ಹೇಗೆ ಸಮರ್ಥರಾಗುವರು?"

"ನಮ್ಮ ದೇಶದಲ್ಲಿ ಕೂಡ ಪೂರ್ವಕಾಲದಲ್ಲಿ ನಳ, ಭೀಮ, ಮೊದಲಾದವರು ಪಾಕಮಾಡುವುದರಲ್ಲಿ ಮಹಾಸಮರ್ಥರಾಗಿದ್ದರು."

"ಹಾಗಾದ ಪಕ್ಷದಲ್ಲಿ ನಮ್ಮ ದೇಶದ ಹಾಗೆಯೇ ನಿಮ್ಮ ದೇಶವೂ ಪೂರ್ವಕಾಲದಲ್ಲಿ ಒಳ್ಳೆಯದಾಗಿದ್ದು ಈಗ ಕೆಟ್ಟು ಹೋಗಿರುವುದು. ಸ್ತ್ರೀಯರು ಬಲಹೀನೆಯರಾದುದೇ, ದೇವರು ಅವರು......"

"ಅದಕ್ಕೆ ಸಂದೇಹವಿಲ್ಲ. ಪೂರ್ವಕಾಲದಲ್ಲಿದ್ದ ಹಾಗಿರದೆ ನಮ್ಮ ದೇಶವೀಗ ನಿಜವಾಗಿ ಕೆಟ್ಟುಹೋಗಿಯೇ ಇದೆ."

"ಸ್ತ್ರೀಯರು ಬಲಹೀನೆಯರಾದುದೇ, ದೇವರು, ಅವರು ಕೆಲಸಕಷ್ಟಗಳನ್ನು ಮಾಡದೆ ಸುಖವಾಗಿ ಕುಳಿತಿದ್ದು ಆಲೋಚನೆಮಾಡುತ್ತ ಪ್ರಭುತ್ವ ಮಾಡಬೇಕೆಂದುದ್ದೇಶಿಸಿ-ಎಂಬುದಕ್ಕೆ ನಿನಗೆ ನಿದರ್ಶನವಾಗಿ ತೋರುವುದಿಲ್ಲವೇ? ಇಷ್ಟು ಮಾತ್ರವನ್ನಾದರೂ ತಿಳಿದುಕೊಳ್ಳದೆ ಹೋದ ಪಕ್ಷದಲ್ಲಿ ನೀನು ಕಲಿತ ವಿದ್ಯೆಯಿಂದ ಏನು ಪ್ರಯೋಜನವು? ಹೀಗಿರುವುದರಿಂದಲೇ, ಪುರುಷರು ಒಂದು ವೇಳೆಗೆ ಓದಿದರೂ ಬುದ್ಧಿ ಸಂಪದದಲ್ಲಿ ಸ್ತ್ರೀಯರಿಗೆ ಸಮಾನರಾಗಲೊಲ್ಲರೆಂದು ನಮ್ಮ ಹಿರಿಯರು ಅಪ್ಪಣೆ ಕೊಟ್ಟಿರುವರು. ಇಂತಹ ಮಂದಬುದ್ಧಿಯ ದೆಸೆಯಿಂದಲೇ, ಬಲವಂತರಾದ ಪುರುಷರು ಬಲಹೀನೆಯರಾದ ಸ್ತ್ರೀಯರಿಗೆ ಏಕೆ ವಿಧೇಯರಾಗಿರುವರೆಂಬ ಸಂಶಯವು ನಿನಗೆ ಉಂಟಾಯಿತು."

"ಅಹುದು. ಆ ಸಂಶಯವನ್ನು ನೀವು ಮುಂದಾಗಿ ತೀರಿಸಿ ನನ್ನನ್ನು ಧನ್ಯನನ್ನಾಗಿ ಮಾಡಬೇಕು.

"ಸ್ತ್ರೀಯರು ಬುದ್ಧಿಬಲವುಳ್ಳವರು. ದೇಹಬಲವಿಷ್ಟಿದ್ದರೂ ಬುದ್ಧಿಬಲಕ್ಕೆ ಸರಿಬಾರದು. ಆದುದರಿಂದಲೇ ಪುರುಷರು ಸ್ತ್ರೀಯರಿಗೆ ಒಳಪಡಬೇಕಾಯಿತು. ಕೇವಲ ಶರೀರಬಲವುಳ್ಳವರಾದ ಪುರುಷರು ಬುದ್ಧಿಬಲವುಳ್ಳವರಾದ ಸ್ತ್ರೀಯರಿಗೆ ಒಳಗಾಗುವುದು ಸ್ವಭಾವವಲ್ಲವೇ! ಇಷ್ಟು ಮಾತ್ರವಾದರೂ ನಿನಗೆ

ತಿಳಿಯಲಿಲ್ಲ. ಇದುವೇ ಸ್ತ್ರೀಬುದ್ಧಿಗೂ ಪುರುಷಬುದ್ಧಿಗೂ ಇರುವ ತಾರತಮ್ಯವು. ಪುರುಷರು ಸ್ತ್ರೀಯರಿಗೆ ಒಳಪಟ್ಟಿರುವುದಕ್ಕೆ ಇನ್ನೊಂದು ರಹಸ್ಯವೂ ಉಂಟು."

"ಆ ರಹಸ್ಯವನ್ನೂ ನನಗೆ ಅಪ್ಪಣೆಕೊಟ್ಟು ಮೂಢನಾದ ನನ್ನನ್ನು ಕೃತಾರ್ಥನನ್ನಾಗಿ ಮಾಡಬೇಕು. ನಿಮ್ಮ ಶಿಷ್ಯನಾದಮೇಲೆ ನನಗೆ ತಿಳಿಯದ ವಿಷಯವೊಂದೂ ಇರಬಾರದು."

"ಅದು ಪರಮರಹಸ್ಯವಾದರೂ ನೀನು ಭಕ್ತಿಶ್ರದ್ಧೆಗಳುಳ್ಳವನಾದುದರಿಂದ ನಿನಗೆ ಮರ್ಮಬಿಟ್ಟು ಹೇಳುವೆನು. ಸ್ತ್ರೀಯರು ಪುರುಷರ ಮೇಲೆ ಅಧಿಕಾರ ನಡೆಯಿಸಿಕೊಳ್ಳುವುದಕ್ಕೆ ಮಂತ್ರಬಲವೇ ಪ್ರಥಮಕಾರಣವು. ಎಂತಹ ಬಲವಂತನನ್ನಾದರೂ ಒಳಪಡಿಸಿಕೊಂಡು ದಾಸನನ್ನಾಗಿಮಾಡಿ ನಾಯಿಯಂತೆ ಕುಣಿಸುವ ಶಕ್ತಿ ನಮ್ಮಲ್ಲಿದೆ."

"ಅದು ನಿಜ. ಆ ಶಕ್ತಿ ಸ್ತ್ರೀಯರಲ್ಲಿ ತಪ್ಪದೆ ಇದೆ. ಸರ್ವಸ್ವತಂತ್ರರೆಂದು ಹೇಳಿಕೊಳ್ಳುತ್ತಿರುವ ನಮ್ಮದೇಶದಲ್ಲಿಯೂ ಪುರುಷರು ಸ್ತ್ರೀಯರಿಗೆ ದಾಸರಾಗಿ ಅವರು ಹೇಳಿದಹಾಗೆಯೇ ನಡೆದುಕೊಳ್ಳುವರು. ಸಂಸಾರ ಕರ್ತರೆಂದು ಹೆಸರುಹಾಕಿಕೊಂಡು ಸಭೆಗಳಲ್ಲಿ ಹುಲಿಗಳಹಾಗೆ ಅರಚುವ ನಮ್ಮ ದೇಶದ ನವನಾಗರಿಕರಾದ ಪುರುಷರು ಕೂಡ ಪೌರುಷಹೀನರಾಗಿ, ಮನೆಯ ಹತ್ತಿರ ಭಾರ್ಯೆಯರ ಮುಂದೆ ಬಾಯೆತ್ತದೆ ಇಕ್ಕುಗಳ ಹಾಗೆ ಮೂಲೆಗಳಲ್ಲಿ ಅಡಗಿದ್ದು ತಾವು ಹೇಳುವ ಹಾಗೆ ಭಾರ್ಯೆಯರನ್ನು ನಡೆಯಿಸಲಾರದೆ, ಭಾರ್ಯೆಯರು ಹೇಳಿದಹಾಗೆ ತಾವು ನಡೆದುಕೊಳ್ಳುವರು."

"ಹಾಗೆಯೇ ? ಈ ಮಾತನ್ನು ಇದಕ್ಕೆ ಮೊದಲೇ ಏಕೆ ಹೇಳಲಿಲ್ಲ ? ನಿಮ್ಮ ದೇಶದಲ್ಲಿ ಪುರುಷರು ಸ್ವತಂತ್ರರೆನ್ನಲಾಗಿ ನಾನು ಏನೋ ಎಂದು ತಿಳಿದೆನು. ಈಗ ನಿಜ ತಿಳಿದುಹೋಯಿತು. ಮೊದಲಿಂದಲೂ ನಿನ್ನ ಮಾತುಗಳಲ್ಲಿ ನನಗೆ ಎಷ್ಟು ಮಾತ್ರವೂ ನಂಬಿಕೆಯಿರಲಿಲ್ಲ. ಹಾಗಾದ ಪಕ್ಷದಲ್ಲಿ ನಿಮ್ಮ ದೇಶದಲ್ಲಿಯೂ ಪುರುಷರೇ ಸ್ತ್ರೀಯರಿಗೆ ಒಳಗಾಗಿರುವರು. ನಾವೇ ಸ್ವತಂತ್ರರೆಂದು ಹೊರಗೆ ಯಾರು ಎಷ್ಟು ವೇಷಗಳನ್ನು ಹಾಕಿದರೂ ಈಶ್ವರಸಂಕಲ್ಪಕ್ಕೆ ಎಂದಾದರೂ ವಿಕಲ್ಪವುಂಟಾಗುವುದೇ ? ಈ ನವನಾಗರಿಕರ ದೆಸೆಯಿಂದ ನಮ್ಮ ದೇಶವೂ ಈಗ ಸ್ವಲ್ಪಸ್ವಲ್ಪ ಕೆಟ್ಟುಹೋಗುತ್ತಿದೆ. ಈಗಿನ ಪುರುಷರಿಗೆ ಪೂರ್ವದ ಪತ್ನೀಭಕ್ತಿ ತಗ್ಗುತ್ತಿದೆ. ಸ್ತ್ರೀಯರು ಈಗ ಪುರುಷರ ಮಾತುಗಳನ್ನೇ ಕೇಳುವುದಕ್ಕೆ ಮೊದಲುಮಾಡಿರುವರು."

ಈ ಕೊನೆಗೆ ಹೇಳಿದ ಮಾತುಗಳಿಂದ ನನಗೆ ಸ್ವಲ್ಪ ಸಂತೋಷವುಂಟಾಯಿತು. ಇಲ್ಲಿ ಕೂಡ ಸ್ತ್ರೀಯರು ಪುರುಷರ ಮಾತುಗಳನ್ನೇ ಕೇಳ ತೊಡಗಿದರಲ್ಲವೇ ? ಕೇಳುವುದೇ ಸ್ವಭಾವಸಿದ್ಧವು; ಕೇಳದಿರುವುದೇ ಸ್ವಭಾವವಿರುದ್ಧವು. ಈ ಆಲೋಚನೆಗಳೆಲ್ಲವೂ ನನ್ನ ಮನಸ್ಸಿನಲ್ಲಿ ಹುಟ್ಟಿದರೂ ಆಕೆಯ ಮನಸ್ಸು ನೋಯಬಹುದೆಂದು ನಾನು ಬಾಯಿಂದ ಹೇಳಲಿಲ್ಲ. ಈ ಪ್ರಸಂಗವಾದ ತರುವಾಯ ನಾನಾಕೆಯನ್ನು ಭಕ್ತಿಯಿಂದ ನಮಸ್ಕರಿಸಿ, ನನಗಾ ಮಂತ್ರಗಳನ್ನುಪದೇಶಿಸದೆ ಕೂಡದೆಂದು ಕಾಲುಗಳ ಮೇಲೆ ಬಿದ್ದು ಏಳಲಿಲ್ಲ. ಆಗ ಉಪದೇಶಿಸುವುದಕ್ಕೆ ಸಮಯವಾಗದುದರಿಂದ ಮತ್ತೊಂದು ಹೊತ್ತಿನಲ್ಲಿ ಉಪದೇಶಿಸುವೆನೆಂದು ಹೇಳಿ, ಕೆಲವು ದಿನಗಳಾದ ಮೇಲೆ, ನಾನು ಮೂರು ಉಪವಾಸಗಳನ್ನು ಮಾಡಿಮಿಂದು ಶುಚಿಯಾಗಿ ಅಮಾವಾಸ್ಯೆಯ ದಿನ ಪ್ರಾತಃಕಾಲದಲ್ಲಿ ಹೋಗಿ ಸಂದರ್ಶನ ಮಾಡಿಕೊಂಡು ಪಾದಪ್ರಣಾಮ ಮಾಡಲಾಗಿ, ನನಗಾಕೆ ವಶೀಕರಣವೇ ಮೊದಲಾದ ಮಹಾಮಂತ್ರಗಳನೇಕವನ್ನು ಉಪದೇಶಿಸಿದಳು. ಆಕೆ ನನಗಾಗಿ ಹೇಳದೆ ಹೋದರೂ, ನಾನೀ ಮಂತ್ರಗಳನ್ನು ನಮ್ಮದೇಶದ ಸ್ತ್ರೀಯರಿಗೆ ಹೇಳ ಬೇಕೆಂಬ ದುಷ್ಟ ಆಶೆಯಿಂದ ನನಗೆ ಮತ್ತಷ್ಟು ಪ್ರೀತಿಪೂರ್ವಕವಾಗಿ ಉಪದೇಶಿಸಿದ ಹಾಗೆ ನಾನು ಕಂಡುಹಿಡಿದೆನು. ಆದರೆ ನಾನು ಅಂತಹ ಕೆಲಸವನ್ನು ಎಂದಾದರೂ ಮಾಡುವನೇ ? ಈ ಮಂತ್ರಗಳನ್ನು ಈಗ ಪ್ರಕಟಿಸಿ ನಿಮಗೆ ಉಪದೇಶಿಸುತ್ತಿದ್ದೆನು. ಆದರೆ ಪ್ರಚುರಗೊಳಿಸಿದ ಪಕ್ಷದಲ್ಲಿ ಸ್ತ್ರೀಯರು ಕೂಡ ಗ್ರಹಿಸಿ, ಈ ದೇಶದ ಹಾಗೆಯೇ ನಮ್ಮ ದೇಶದಲ್ಲಿಯೂ ಅವರು ಪುರುಷರನ್ನು ತಮ್ಮ ದಾಸರನ್ನಾಗಿ ಮಾಡಿಕೊಳ್ಳುವರೆಂಬ ಭಯದಿಂದ ನಾನಿಂದು ಪ್ರಕಟಿಸಲು ಸಾಹಸಿಸದಿರುವೆನು. ಓ ಹಿಂದೂಮಹಾಜನಗಳಿರಾ ! ಇದರಿಂದ ನನಗೆ ನಿಮ್ಮಲ್ಲಿ ಅನುರಾಗವು ಕಡಿಮೆಯಾಯಿತೆಂದು ನೀವು ಎಣಿಸಬೇಡಿರಿ. ನನ್ನ ಬಳಿಗೆ ಬಂದ ಪಕ್ಷದಲ್ಲಿ ಸ್ತ್ರೀಯರಿಗೆ ಹೇಳಲಾರೆವೆಂದು ನಿಮ್ಮಿಂದ ಪ್ರಮಾಣಗಳನ್ನುಮಾಡಿಸಿಕೊಂಡು, ಮಂತ್ರಸಿದ್ಧಿಗಾಗಿ ನಿಮ್ಮಿಂದ ಗುರುದಕ್ಷಿಣೆಗಳನ್ನು ಸ್ವೀಕರಿಸಿ, ನಿಮಗೊಬ್ಬರಿಗೆಯೇ ಸರ್ವಮಂತ್ರಗಳನ್ನೂ ಪ್ರಯೋಗೋಪಸಂಹಾರಗಳೊಡನೆಯೂ ಅಂಗನ್ಯಾಸ ಕರನ್ಯಾಸಗಳೊಡನೆಯೂ, ರಹಸ್ಯವಾಗಿ ಉಪದೇಶಿಸುವೆನು.

ಆ ತರುವಾಯ ಒಳ್ಳೆಯ ಪಾಂಡಿತ್ಯ ಸಂಪಾದಿಸಿ ನನ್ನ ಯಜಮಾನಿಗಿತಿಯ ಕೋರಿಕೆಯಂತೆ ನಾನು ಪಾಠಶಾಲೆಯಲ್ಲಿ ಪ್ರವೇಶಿಸಿದೆನು. ಮತ್ತೊಬ್ಬ ಪುರುಷನು ಕೂಡ ಪಾಠಶಾಲೆಯನ್ನು ಸೇರಿ ನನಗೆ ಸಹಪಾಠಿಯಾಗಿ ಮಿತ್ರನಾದನು.

ನಾವಿಬ್ಬರೂ ರಹಸ್ಯವಾಗಿ ಆಲೋಚಿಸಿಕೊಂಡು ಆ ದೇಶದ ಪುರುಷರಿಗೆ ಹೇಗಾದರೂ ಸ್ವಾತಂತ್ರ್ಯವುಂಟಾಗುವಂತೆ ಮಾಡುವುದಕ್ಕೆ ಸರ್ವವಿಧವಾಗಿ ಪ್ರಯತ್ನವಮಾಡಬೇಕೆಂದು, ಯಾರಿಗೂ ತಿಳಿಸದೆ, ನಮ್ಮಲ್ಲಿ ನಾವೇ ಪ್ರಮಾಣಮಾಡಿಕೊಂಡೆವು. ಸ್ತ್ರೀಯರನ್ನು ಒಳಪಡಿಸಿಕೊಳ್ಳುವ ಸುಖೋಪಾಯವು ನನಗೆ ತಿಳಿದುದರಿಂದ, ನಮ್ಮ ಕೊಕ್ಕೋಕಶಾಸ್ತ್ರದಲ್ಲಿ ಹೇಳಿರುವ “ಓಂ - ಕೃಷ್ಣಾಂಗಿ-ಕೃಷ್ಣಮುಖಿ - ಪುಷ್ಪಂದಾಸ್ಯಾಮಿ - ವಶ್ಯಮಾನಯದಿ - ನಭವತಿ - ಬ್ರಹ್ಮರುದ್ರಾಭವತಿ - ಸ್ವಾಹಾ” ಎಂಬ ವಶೀಕರಣ ಮಂತ್ರವನ್ನು ನಾನಾತನಿಗೆ ಗುರುದಕ್ಷಿಣೆಯಿಲ್ಲದೆ ಉಪದೇಶಿಸಿ, ಇವುಗಳನ್ನು ಹತ್ತು ಲಕ್ಷ ಜಪಿಸಿ, ಬಿಳಿಯ ಹೂವುಗಳನ್ನು ಮಂತ್ರಿಸಿ, ಸ್ತ್ರೀಯರ ಮೇಲೆ ಚೆಲ್ಲಬೇಕೆಂದು ಹೇಳಿದೆನು. ಗುರುದಕ್ಷಿಣೆ ಇಲ್ಲದುದರಿಂದಲೋ ಏನೋ, ಈ ಮಂತ್ರವಷ್ಟೇನೂ ಕೆಲಸಮಾಡಲಿಲ್ಲ. ಹೇಗೆ ಮಾಡಿದರೂ ನಮ್ಮ ಮಂತ್ರಗಳು ಆ ದೇಶದ ಮಂತ್ರಗಳ ಮೇಲೆ ನಡೆಯವು. ಆದುದರಿಂದಲೇ ನಮ್ಮವರು ಮಲೆಯಾಳಮಂತ್ರಗಳೆಂದು ದೊಡ್ಡದಾಗಿ ಹೇಳುವರು. ನಾನು ಪಾಠಶಾಲೆಯಲ್ಲಿ ಪ್ರವೇಶಿಸಿದುದು ಮೊದಲ್ಗೊಂಡು ನಡೆದ ವಿಷಯಗಳನ್ನು ತಿಳುಹುವುದಕ್ಕೆ ಮುಂದಾಗಿ ದೇಶಸ್ಥರ ಆಚಾರವ್ಯವಹಾರಗಳನ್ನು ಕುರಿತು ಕೊಂಚ ಹೇಳುವುದು ಯುಕ್ತವೆಂದು ತಿಳಿಯುವೆನು.

ಆ ದೇಶದಲ್ಲಿ ಸ್ತ್ರೀಯರೇ ಸರ್ವಸ್ವತಂತ್ರೆಯರೆಂದೂ, ಪುರುಷರು ಅವರ ಆಜ್ಞಾನುವರ್ತಿಗಳಾಗಿ ನಡೆಯಬೇಕೆಂದೂ, ನಾನು ಈ ಮೊದಲೇ ಹೇಳಿರುವೆನು. ನಮ್ಮ ದೇಶದ ಸ್ತ್ರೀಯರ ಹಾಗೆಯೇ ಆ ದೇಶದಲ್ಲಿ ಗಂಡಸರಿಗೆ ಬರಹ ಕಲಿಸರು. ನಮ್ಮ ದೇಶದ ಭೋಗಸ್ತ್ರೀಯರ ಹಾಗೆಯೇ ಆ ದೇಶದಲ್ಲಿ ಭೋಗ ಪುರುಷರು ಮಾತ್ರವಲ್ಪಸ್ವಲ್ಪ ವಿದ್ಯೆಯನ್ನು ಅಭ್ಯಸಿಸುವರು. ಆದರೂ ಅದು ಅವರ ವೃತ್ತಿಗೆ ಅನುಕೂಲವಾಗಿಯೇ ಇರುವುದು. ಗಂಡಸರನ್ನು ಓದಿಕೊಳ್ಳೆಂದು ಹೇಳಿದರೆ ದೊಡ್ಡ ತಪ್ಪಿತವಾಗಿಯೆಣಿಸಿ, ಅವರು ಕೋಪಿಸಿ, ಘೋರಪಾಪ ಮಾಡುತ್ತಿರುವವರನ್ನು ಗದರಿಸುವ ಹಾಗೆ ಗದರಿಸುವರು. ವಿದ್ಯೆಯಿಲ್ಲದೆ ಹೋದುದರಿಂದಲೋ, ಅಥವಾ ಬೇರೆಯಾವ ಹೇತುವಿನಿಂದಲೋ, ಆ ದೇಶದಲ್ಲಿ ಗಂಡಸರಿಗೆ ಆಭರಣಗಳಲ್ಲಿ ಆಸಕ್ತಿ ನಮ್ಮ ಸ್ತ್ರೀಯರಿಗಿಂತಲೂ ವಿಶೇಷವಾಗಿರುವುದು. ಅಲ್ಲಿ ಸ್ತ್ರೀಯರಿಗೆ ಆಭರಣಗಳಷ್ಟೊಂದು ಇರವು. ಆಭರಣಗಳನ್ನಿಟ್ಟುಕೊಳ್ಳುವುದಕ್ಕಾಗಿಯೇ ಅಲ್ಲದಿದ್ದರೆ ಪುರುಷರಿಗೆ ಗಡ್ಡ ಮೀಸೆಗಳನ್ನು ಭಗವಂತನು ಏಕೆ ಉಂಟು ಮಾಡಿದನೆಂದು ಅಲ್ಲಿಯವರು ಕೇಳುವರು. ಇದರಿಂದ ಅಲ್ಲಿ

ಪುರುಷರು ತಲೆಗೆ ಮಾತ್ರವೇ ಅಲ್ಲದೆ ಹಲವಾಗಿ ಬಾಚಿಕೊಂಡು ಮೀಸೆಗಳಿಗೂ ಗಡ್ಡಗಳಿಗೂ ಆಭರಣಗಳನ್ನು ಇಡುವರೆಂದು ನಾನು ಹೇಳುವ ಅವಶ್ಯವಿಲ್ಲದೆ ನೀವೇ ಗ್ರಹಿಸಿ ಇರುವಿರಿ. ಪತ್ನೀವಿಯೋಗವು ಸಂಭವಿಸಿದ ಪುರುಷರಿಗೆ ಅಲ್ಲಿಯವರು ಗಡ್ಡ ಮೀಸೆಗಳನ್ನು ಮಾತ್ರ ಬೋಳಿಸುವರು. ಅಷ್ಟೇ ಅಲ್ಲದೆ ನಾವು ವಿತಂತುಗಳ ವಿಷಯದಲ್ಲಿ ನಡೆಯುವ ಹಾಗೆ ಶಿರೋಮುಂಡನಮಾಡರು. ವಿಧುರರಿಗೆ ಗಡ್ಡಗಳನ್ನು ಬೋಳಿಸಿದರೂ ತಲೆಗಳನ್ನೇಕೆ ಬೋಳಿಸರೆಂದು ನಾನೊಂದು ದಿನ ನನ್ನ ಮಿತ್ರನನ್ನು ಕೇಳಲಾಗಿ, ಆತನು - ಪುರುಷರು ಯಾವಾಗಲೂ ಸ್ತ್ರೀಯರಿಗೆ ಒಳಗಾಗಿ; ಅವರಿಂದ ದಂಡಿಸಲ್ಪಡಬೇಕಾದವರಾದುದರಿಂದ ಜುಟ್ಟಿನ ಕಡೆಗೆ ಹಿಡಿದುಗುದ್ದುವುದಕ್ಕೆ ಅನುಕೂಲವಾಗಿರುವಂತೆ ತಲೆ ಬೋಳಿಸುವುದಿಲ್ಲವೆಂದು ಉತ್ತರಕೊಟ್ಟನು. ಆ ದೇಶದಲ್ಲಿ ಇನ್ನೊಂದು ವಿಚಿತ್ರವಾದ ಆಚಾರವುಂಟು. ಇಪ್ಪತ್ತುವರ್ಷ ದಾಟಿದ ತರುವಾಯ ಭಾರ್ಯೆಯರನ್ನು ಹೋಗಲಾಡಿಸಿಕೊಂಡ ಭರ್ತೃರೆಲ್ಲರಿಗೂ ಹನ್ನೆರಡನೆಯ ದಿನ ಮೂಗಿನ ಮುಂಭಾಗವನ್ನು ಕತ್ತರಿಸುವರು. ಈ ಆಚಾರದ ಸಲುವಾಗಿಯೇ ಹಿಂದೆ ನನ್ನ ಯಜಮಾನಗಿತ್ತಿಯಾದ ಫಾಂಡೀಭಾಂಗಿ ನನ್ನ ಬಾರ್ಯೆ ಚಿಕ್ಕಂದಿನಲ್ಲಿಯೆ ಹೋಗಿರಬಹುದೆಂದು ಗ್ರಹಿಸಿದಳು. ಪ್ರತಿಯೊಂದು ಮನೆಯಲ್ಲಿಯೂ ಒಂದೊಂದು ಮೂಗುಕತ್ತರಿ ಇರುವುದು. ನಮ್ಮ ದೇಶದಲ್ಲಿಯೂ ಈ ಸದಾಚಾರವನ್ನು ನೆಲೆಗೊಳಿಸಬೇಕೆಂದು ಒಂದು ಕತ್ತರಿ ಸಂಪಾದಿಸಿ ನನ್ನೊಡನೆ ತಂದಿರುವೆನು. ವಿರೂಪರಾದುದರಿಂದಲೋ ಏನೋ, ಆ ಮೂಗಿಲ್ಲದ ಅಲ್ಲಿನ ಪುರುಷರಲ್ಲಿ ವ್ಯಭಿಚಾರವೆಷ್ಟು ಮಾತ್ರವೂ ಕಾಣಬರುವುದಿಲ್ಲ. ಹಾಗೆ ಇಲ್ಲದೆ ಹೋಗುವುದಕ್ಕೆ ಈ ನಾಸಿಕಾಚ್ಛೇದನವೇ ಕಾರಣವೆಂಬುದಕ್ಕೆ ಸಂದೇಹವಿಲ್ಲ. ಪುರುಷರಿಗೆ ಮಾಡುವುದರಿಂದ ಇದನ್ನು ದುರಾಚಾರವೆನ್ನಬೇಕಾದರೂ, ಸ್ತ್ರೀಯರ ವಿಷಯವಾಗಿ ನಡೆಯಿಸಿದ ಪಕ್ಷದಲ್ಲಿ ಅವರಲ್ಲಿರುವ ವ್ಯಭಿಚಾರವು ಸಮೂಲವಾಗಿ ನಶಿಸುವುದರಲ್ಲಿ ಸಂದೇಹವಿಲ್ಲ. ಇಂತಹ ಸದಾಚಾರವು ನಮ್ಮ ಸ್ಮೃತಿಗಳಲ್ಲಿ ಎಲ್ಲಿಯಾದರೂ ಹೇಳಲ್ಪಡದೆ ಹೋಗದು. ಆದುದರಿಂದ ಈ ಆಚಾರವನ್ನು ನಾವು ನಮ್ಮ ದೇಶದಲ್ಲಿ ನೆಲೆಗೊಳಿಸಬೇಕು. ನಾನು ಧರ್ಮಶಾಸ್ತ್ರಗಳನ್ನು ಹುಡುಕಿ ಇದಕ್ಕೆ ಆಧಾರವಾಗಿ ಸೂತ್ರವನ್ನು ಎಲ್ಲಿಯಾದರೂ ಕಂಡು ಹಿಡಿಯುವೆನು, ಈಗ ಇರುವ ಸ್ಮೃತಿಗಳಲ್ಲಿ ಇದಕ್ಕೆ ಒಂದು ವೇಳೆ ಆಧಾರ ದೊರೆಯದೆ ಹೋದರೂ ಖಿಲಸ್ಮೃತಿಗಳಲ್ಲಿಯಾದರೂ ತಪ್ಪದೆ ಇರದೆಹೋಗದು. ಧರ್ಮಜ್ಞಸಮಯವೂ ಪ್ರಮಾ

ಉಂಟಾಗುದರಿಂದ ನಮ್ಮ ಪಂಡಿತರೆಲ್ಲರೂ ಕೂಡಲೇ ಸಭೆ ಮಾಡಿ, ಶೀಘ್ರವಾಗಿ ಇಂತಹ ನಿಬಂಧನೆಯೊಂದನ್ನು ನೆರವೇರಿಸಿಕೊಳ್ಳಬೇಕು.

ಆ ದೇಶದಲ್ಲಿಯೂ ನಮ್ಮ ದೇಶದಲ್ಲಿರುವ ಹಾಗೆ ಪತ್ನಿಯರು ವಯಸ್ಸಿನಲ್ಲಿ ಸಣ್ಣಾಕೆಯರಾಗಿಯೂ ಭರ್ತರು ದೊಡ್ಡವರಾಗಿಯೂ ಇರುವರು. ಇಷ್ಟವಿದ್ದ ಪಕ್ಷದಲ್ಲಿ ಒಬ್ಬ ಸ್ತ್ರೀಯು ಅನೇಕ ಭರ್ತರನ್ನು ಮಾಡಿಕೊಳ್ಳ ಬಹುದಾದರೂ ಸಂಸ್ಥಾನಾಧೀಶ್ವರರಲ್ಲಿ ಹೊರತು ಸರ್ವಸಾಧಾರಣವಾಗಿ ಸ್ತ್ರೀಯರು ಒಬ್ಬೊಬ್ಬ ಗಂಡನಿಂದಲೇ ತೃಪ್ತಿಹೊಂದಿ ಇರುವರು. ಭರ್ತನು ತವರುಮನೆಗೆ ಹೋದಾಗಲೂ, ರೋಗಾದಿಗಳಿಂದ ಅಶಕ್ತನಾಗಿರುವಾಗಲೂ, ಸ್ತ್ರೀಯರಲ್ಲಿ ಕಾಮಾತುರೆಯರಾದವರು ಭೋಗಪುರುಷರ ಬಳಿಗೆ ಹೋಗುವರು. ಮೇಲಣ ಕಾರಣಗಳೆರಡೂ ಇಲ್ಲದೆ ಹೋದರೂ, ಧನವತಿಯರಾದ ಸ್ತ್ರೀಯರು ಭೋಗ ಪುರುಷರನ್ನಿಟ್ಟುಕೊಳ್ಳುವರು. ಈ ಭೋಗಪುರುಷರು ಮೊಲೆಯ ಹಾಲು ಕುಡಿಯುವಂದಿನಿಂದ, ಮೋಹಿಸುವ ಹಾಗೆ ಮಾಡಿ ತಮ್ಮ ಬಲೆಗಳಲ್ಲಿ ಸಿಕ್ಕಿಸಿಹಾಕ ತಕ್ಕ ವಿದ್ಯೆಗಳನ್ನು ಅಭ್ಯಸಿಸುವರು. ಹೃದಯರಂಜಕವಾದ ಸಂಗೀತವು ಅವರ ಹತ್ತಿರವೇ ಇರುವುದರಿಂದ, ಸಂಗೀತವನ್ನು ಹಾಡಕಲಿತ ಕುಲಪುರುಷನನ್ನಾದರೂ ಸ್ತ್ರೀಯನ್ನಾದರೂ ನೀಚವಾಗಿ ಕಾಣುವರು. ಸಂಗೀತವೇ ವೃತ್ತಿಯಾಗಿ ವುಳ್ಳ ಕುಲಸ್ತ್ರೀಯರನ್ನು ಪಂಕ್ತಿಭೋಜನಕ್ಕೆ ಬರಗೊಳಿಸರು. ಕಾಮೋದ್ರೇಕವನ್ನುಂಟುಮಾಡುವ ಶ್ರಾವ್ಯವಾದ ಹಾಡುಗಳನ್ನೂ, ಸರಸೋಕ್ತಿಗಳನ್ನೂ, ವಶ್ಯೌಷಧಗಳನ್ನೂ, ವಶೀಕರಣ ಮಂತ್ರಗಳನ್ನೂ, ಹಾವಭಾವಾದಿಗಳನ್ನು ತೋರಿಸುವ ನೇತ್ರಹಸ್ತಾದ್ಯಭಿನಯಗಳನ್ನೂ ಕಲಿತುಕೊಂಡು, ಭೋಗಪುರುಷರು ಗಡ್ಡ ಮೀಸೆಗಳನ್ನೂ ತಲೆಯನ್ನೂ ಬಾಚಿಕೊಂಡು, ನಾನಾವಿಧವಾದ ಆಭರಣಗಳಿಂದಲೂ ಪುಷ್ಪಗಳಿಂದಲೂ ಶರೀರವನ್ನಲಂಕರಿಸಿಕೊಂಡು, ಚಿತ್ರವರ್ಣಗಳುಳ್ಳ ವಸ್ತ್ರಗಳನ್ನು ಧರಿಸಿ, ಮುಖಕ್ಕೆ ಥಳಥಳಿಸುವ ಯಾವುದೋ ಬಣ್ಣ ಹಚ್ಚಿಕೊಂಡು, ಅದರಮೇಲೆ ಸುವಾಸನೆಯುಳ್ಳ ಬಂಗಾರವರ್ಣದ ಯಾವುದೋ ಹುಡಿಯನ್ನು ಚೆಲ್ಲಿಕೊಂಡು, ಅತ್ತರು ಮೊದಲಾದ ಸುಗಂಧದ್ರವ್ಯಗಳನ್ನು ಪೂಸಿಕೊಂಡು, ತಮ್ಮ ದೇಹವಾಸನೆಗಳು ಬೀದಿಗಳಲ್ಲಿ ವಿಸ್ತರಿಸುವ ಹಾಗೆ, ದೀಪಗಳು ಹಚ್ಚಿದ ತರುವಾಯ ರೂಪುಧರಿಸಿದ ಗೃಹದೇವತೆಗಳೋ ಎಂಬ ಹಾಗೆ ಬೆಳಕಿನಲ್ಲಿ ಥಳಥಳನೆ ಮಿಂಚಿಯುತ್ತ, ದಾರಿಯಿಂದ ಹೋಗುವ ಯುವತಿಯರ ಹೃದಯಗಳು ಸಂಚಲಿಸುವ ಹಾಗೆ ಪ್ರತಿದಿನವೂ ತಮ್ಮ ಬಾಗಿಲುಗಳಲ್ಲಿ ನಿಂತಿದ್ದು, ಸ್ತ್ರೀಯರು ಸಮೀಪ

ಸಿದ ಹಾಗೆಲ್ಲ ನಾಚಿಕೆಪಟ್ಟು ಒಳಕ್ಕೆ ಹೋಗಿ, ಬಾಗಿಲ ಮರೆಯಿಂದ ಮುಖವನ್ನು ಹೊರಗೆ ಹಾಕಿ ಬಾಗಿಬಾಗಿ ನೋಡುವರು. ಅಂತಹ ಸೌಂದರ್ಯವುಳ್ಳ ಪುರುಷರು ನಮ್ಮ ದೇಶದಲ್ಲಿ ಇಲ್ಲ. ರತ್ನಗಳಿಂದ ಕೆತ್ತಲ್ಪಟ್ಟ ಬಂಗಾರದ ಗೊಂಬೆಗಳ ಹಾಗೆ ನಿಂತು, ಭೂಮಿಗಿಳಿದ ಮಿಂಚುಬಳ್ಳಿಯೋ ಎಂಬಂತೆ, ಅವರು ದೀಪಗಳ ಬೆಳಕಿನಲ್ಲಿ ಮೆರೆಯುತ್ತಿರಲು, ನನ್ನಂತಹ ಪುರುಷನಿಗಾದರೂ ಹೋಗಿ ಮೇಲೆ ಬಿದ್ದು ಆಲಿಂಗಿಸಬೇಕೆಂಬ ಬುದ್ಧಿ ಹುಟ್ಟುತ್ತಿರಲು, ಯುವತಿಯರು ಅವರನ್ನು ಮೋಹಿಸಿ ಅವರ ಬಲೆಗಳಲ್ಲಿ ಬೀಳುವುದರಲ್ಲಿ ಆಶ್ಚರ್ಯವೇನು? ಅಯಿವತ್ತು ವರ್ಷ ದಾಟಿದವರಾದರೂ ನೆರೆತ ಕೂದಲಿಗೆ ಕಪ್ಪುಬಣ್ಣ ಹಚ್ಚಿ ಅಲಂಕರಿಸಿಕೊಂಡು, ಹದಿನಾರು ವರ್ಷದ ಬಾಲಕುಮಾರರ ಹಾಗೆ ಕಾಣಬರುವರು. ಆದರೂ ನಮ್ಮ ದೇಶದಲ್ಲಿ ವಿವಾಹವೇ ಮೊದಲಾದ ಶುಭಕಾರ್ಯಗಳಿಗೆ ವೇಶ್ಯೆಯರನ್ನು ಹಾಡುವುದಕ್ಕೆ ಕರೆಯುವ ಹಾಗೆ ಇವರನ್ನು ಶುಭಕಾರ್ಯಗಳಿಗೆ ಕರೆಯರು; ನಮ್ಮ ದೇವದಾಸಿಯರ ಹಾಗೆ ಇವರು ದೇವಾಲಯಗಳಲ್ಲಿಯೂ ಕಾಣಬಾರರು. ಗೃಹದೇವತೆಗಳ ಹಾಗಿರುವ ಇವರಿಗೆ ಮನೆಗಳೇ ದೇವಾಲಯಗಳು; ಇವರೇ ಅವುಗಳಲ್ಲಿರುವ ದೇವತೆಗಳು; ಈ ದೇವತಾಸಂದರ್ಶನ ನಿಮಿತ್ತವಾಗಿಯೆ ಧನವತಿಯರಾದ ಸ್ತ್ರೀಯರು ಹೋಗಿ, ತಮ್ಮ ದೇಹಗಳನ್ನೂ ಧನಗಳನ್ನೂ ಅವರಿಗೆ ಸಮರ್ಪಿಸಿ, ಅವರ ಪ್ರಸಾದವನ್ನು ಬೇಡುತ್ತಿರುವರು. ದೇವತಾಭಕ್ತಿಯುಳ್ಳವರು ಧನಾದಿಗಳಲ್ಲಿ ವೈರಾಗ್ಯವುಳ್ಳವರಾಗುವ ಹಾಗೆಯೇ ಈ ದೇವತೆಗಳನ್ನು ಸದಾ ಸೇವಿಸುವವರೂ ನಿಸ್ಪೃಹತ್ವದಿಂದ ಧನವನ್ನು ಕೊಳ್ಳೆಯಾಗಿ ಕೊಟ್ಟು ತಾವು ಜೋಗಿಗಳಾಗುವರು. ನಮ್ಮ ದೇವತೆಗಳ ಹಾಗೆಯೇ ಈ ಭೋಗ ದೇವತೆಗಳಿಗೂ ಪರಭಾರ್ಯೆಯರಲ್ಲಿಯೇ ಸಂತಾನಪ್ರಾಪ್ತಿ. ಆದರೂ ನಮ್ಮ ದೇವತೆಗಳ ಹಾಗೆ ಅಮೃತತ್ವವಿಲ್ಲದ ಇವರಿಗೆ ವಂಶಾಭಿವೃದ್ಧಿ ಹೇಗೋ ನನಗೆ ತಿಳಿಯಲಿಲ್ಲ. ವಿಶೇಷಧನಕೊಟ್ಟು ಬಡವರ ಚೆಲುವಾದ ಮಕ್ಕಳನ್ನು ಕೊಂಡು ಕೊಂಡು ಇವರು ಅವರನ್ನು ಚಿಕ್ಕಂದಿನಿಂದಲೂ ಭ್ರಮರಕೀಟನ್ಯಾಯದಂತೆ ಮರ್ತ್ಯತ್ವದಿಂದ ದೇವತಾತ್ವಕ್ಕೆ ಏರಿಸುವರಂತೆ.

ಅಲ್ಲಿಯೂ ವಿವಾಹಗಳಿಗೆ ಕನ್ಯಾವರರ ಇಷ್ಟವವಶ್ಯವಿಲ್ಲ. ತಾಯಿತಂದೆಯರೇ, ಮುಖ್ಯವಾಗಿ ತಾಯಿಯರೇ ಕನ್ಯಾವರಣ ಮಾಡುವರು. ಯುಕ್ತವಯಸ್ಸು ಬಂದ ತರುವಾಯ ವಿವಾಹವಾಗುವ ಪಕ್ಷದಲ್ಲಿ ಕುರೂಪಿಣಿಯರಾದ ಪತ್ನಿಯರನ್ನು ಮಾಡಿಕೊಳ್ಳುವುದಕ್ಕೆ ಅಂಗೀಕರಿಸದೆ, ಹೆತ್ತವರ ಮಾತು

ಕೇಳದೆ ತಿರಸ್ಕರಿಸುವರಾದುದರಿಂದ, ಪುರುಷರಿಗೆ ಗುರುಧಿಕ್ಕಾರ ದೋಷವುಂಟಾಗದಂತೆ ಮಾಡುವುದಕ್ಕಾಗಿ, ಚಿಕ್ಕಂದಿನಲ್ಲಿಯೆ ವಿವಾಹಗಳನ್ನು ಮಾಡುವ ಸದಾಚಾರವನ್ನು ಅವರ ಧರ್ಮಶಾಸ್ತ್ರಗಳು ವಿಧಿಸುತ್ತಿವೆಯೆಂದು ಅವರು ಹೇಳುವರು. ಅವರ ಧರ್ಮಶಾಸ್ತ್ರ ಪ್ರಕಾರವಾಗಿ ಸ್ತ್ರೀಗೆ ಹದಿನಾರು ವರ್ಷದೊಳಗೆ ಗರ್ಭಾಧಾನಮಾಡಲಾಗದು ಹದಿನೆಂಟನೆಯ ವರ್ಷದಲ್ಲಿ ಮಾಡುವುದು ಉತ್ತಮವು. ಗರ್ಭಾಧಾನದ ದಿನಕ್ಕೆ ಪುರುಷನಿಗೆ ಇಪ್ಪತ್ತು ವರ್ಷ ವಯಸ್ಸಿರಬೇಕು. ಹದಿನಾರು ವರ್ಷ ಪ್ರಾಯದಲ್ಲಿಯೆ ಸ್ತ್ರೀಗೆ ಗರ್ಭಾಧಾನವಮಾಡಿದರೂ ಪುರುಷನಿಗಾಗ ಇಪ್ಪತ್ತುವರ್ಷವಿರಬೇಕಾದುದರಿಂದ, ಸಾಧಾರಣವಾಗಿ ಪತ್ನಿಗಿಂತಲೂ ಭರ್ತನು ನಾಲ್ಕು ವರ್ಷಕ್ಕೆ ದೊಡ್ಡವನಾಗಿರಬೇಕು. ಎರಡನೆಯ ಮದುವೆಯ ಹೆಂಗಸಿಗೆ ಈ ನಿಯಮವಿಲ್ಲ. ಆಗ ಭರ್ತನೆಷ್ಟು ಚಿಕ್ಕವನಾದರೂ ಇರಬಹುದು. ಆದರೆ ಪುರುಷನಿಗೆ ಇಪ್ಪತ್ತು ವರ್ಷ ಬರುವವರೆಗೂ ಮಾತ್ರ ಪುನಸ್ಸಂಧಾನ ಮಾಡಲಾಗದು. ಅದರಿಂದ ಪುರುಷರು ಪ್ರಾಯಸ್ಥರಾಗಿ ಸಂಸಾರಕ್ಕೆ ಬರುವವರೆಗೂ ಸ್ತ್ರೀಯರು ಇಷ್ಟವಿದ್ದರೆ ಭೋಗಪುರುಷರನ್ನಿಟ್ಟುಕೊಳ್ಳಬಹುದು. ಪುರುಷರಿಗೆ ಹನ್ನೆರಡು ವರ್ಷ ಹೋದ ಮೇಲೊಂದು ಹದಿನಾರು ವರ್ಷವಾಗುವುದರೊಳಗೆ ವಿವಾಹ ಮಾಡುವರು. ಭಾರ್ಯೆಯರಿಗಿಂತಲೂ ಭರ್ತರು ದೊಡ್ಡವರಾಗಿರ ಬೇಕಾದುದಕ್ಕೆ ಅವರು ಅನೇಕ ಕಾರಣಗಳನ್ನು ಹೇಳುವರು. ಅದರಲ್ಲಿ ಒಂದು ಕಾರಣವು ಪುರುಷನಿಗಿಂತಲೂ ಮುಂದಾಗಿ ಸ್ತ್ರೀಗೆವಯಸ್ಸು ಬರುವುದು. ಸ್ತ್ರೀಯರಿಗೆ ಯುಕ್ತವಯಸ್ಸು ಬೇಗನೆ ಬರುವುದೇ ಪುರುಷರಿಗಿಂತಲೂ ಸ್ತ್ರೀಯರು ಶ್ರೇಷ್ಠೆಯರನ್ನುವುದಕ್ಕೆ ದೊಡ್ಡ ನಿದರ್ಶನವೆಂದು ಅವರು ಹೇಳುವರು. ಭರ್ತರು ಭಾರ್ಯೆಯರಿಗಿಂತಲೂ ದೊಡ್ಡವರಾಗಿರ ಬೇಕೆಂಬುದಕ್ಕೆ ಇನ್ನೊಂದುಕಾರಣವು-ಪತ್ನಿಯರಿಗೆ ಋತು ಪ್ರಾಪ್ತಿಯಾದ ಬಳಿಕ ಕಾದುಕೊಂಡಿರುವುದಕ್ಕೂ ಪುರುಷರು ಪತ್ನೀಸೇವೆ ಮಾಡಲು ಸಮರ್ಥರಾಗಿರುವುದಕ್ಕೂ ಎಂದು ಹೇಳುವರು. ಅಲ್ಲಿ ಅಡಿಗೆ ಮಾಡುವವರು ಪುರುಷರೆಂದು ಈ ಮೊದಲೇ ಹೇಳಲ್ಪಟ್ಟಿದೆ. ನಮ್ಮ ದೇಶದಲ್ಲಿರುವಹಾಗೆ ಸ್ತ್ರೀಯರು ಅಡಿಗೆಮಾಡುವ ಪಕ್ಷದಲ್ಲಿ, ಅವರು ಗರ್ಭಿಣಿಯರಾಗಿ ಪ್ರಸವವೇ ಮೊದಲಾದ ಸಮಯಗಳಲ್ಲಿ ವಿಘ್ನವುಂಟಾಗಿ, ತೊಂದರೆಯಾಗೆ ಬಹುದಾದುದರಿಂದ ಅಂತಹ ಆತಂಕಗಳು ಉಂಟಾಗದಂತೆ ಭಗವಂತನೇ ಪುರುಷರನ್ನು ಪಾಕಮಾಡುವವರನ್ನಾಗಿ ನಿರ್ಮಿಸಿದನೆಂದು ಅವರು ವಾದಿಸುವರು.

ನಮ್ಮ ದೇಶದಲ್ಲಿ ಸ್ತ್ರೀಯರಿಗೆ ರಾಣಿವಾಸವಿರುವಂತೆ ಈ ದೇಶದಲ್ಲಿ ಪುರುಷರಿಗೂ ಇದೆ. ನಮ್ಮ ದೇಶದಲ್ಲಿ ಇಂತಹ ಆಚಾರವಿಲ್ಲದುದರಿಂದ ಇದ ಕ್ಕೇನು ಹೆಸರಿಡಬೇಕೋ ನನಗೆ ತಿಳಿಯದು. ರಂಥೀ ಭಾಷೆಯಲ್ಲಿ ಅದಕ್ಕೆ 'ಘೋಢಾ' ಎಂದು ಹೆಸರು. ಅದು ನಮ್ಮ ದೇಶದಲ್ಲಿಯ 'ಘೋಷಾ' ಪದಕ್ಕೆ ಸಮಾನವಾದುದು. ಒಂದು ವೇಳೆ ಅದು 'ಘೋಷಾ' ಶಬ್ದಭವವಾಗಿರಬಹು ದು. ವರ್ಣವ್ಯತ್ಯಯ ವಿಧಿಯಿಂದ ತದ್ಭವದಲ್ಲಿ 'ಷಾ' ಎಂಬುದಕ್ಕೆ 'ಢಾ' ಬರ ಬಹುದು. ಅದನ್ನು ನಾನು ರಾಣಿವಾಸಕ್ಕೆ ಪ್ರತಿಯಾಗಿ ರಾಜವಾಸವೆಂದು ಕರೆ ಯುವೆನು. ನಮ್ಮ ದೇಶದ ಸ್ತ್ರೀಯರ ಹಾಗೆ ರಾಣಿವಾಸವು ೧೨ನೆಯ ವರ್ಷದಲ್ಲಿ ಆರಂಭವಾಗದೆ ಆ ದೇಶದಲ್ಲಿ ಪುರುಷರಿಗೆ ರಾಜವಾಸವು ೧೬ನೆಯ ವರ್ಷದಲ್ಲಿ ಆರಂ ಭವಾಗುವುದು. ಅಲ್ಲಿಯ ರಾಜವಾಸವು ನಮ್ಮ ರಾಣಿವಾಸದ ಹಾಗಾಗದೆ ಅತ್ಯಂತ ವಿಚಿತ್ರವಾಗಿರುವುದು. ಸಂಸ್ಥಾನಾಧೀಶ್ವರಿಯರೂ ಧನವತಿಯರೂ ನಾವಿಲ್ಲಿ ಧನ ನಿಮಿತ್ತವಾಗಿ ಮಾಡಿಸುವಹಾಗೆ ದೊಡ್ಡ ಕಬ್ಬಿಣದ ಪೆಟ್ಟಿಗೆಗಳನ್ನು ಮಾಡಿಸುವರು. ಒಂದೊಂದು ಪೆಟ್ಟಿಗೆ ಏಳಡಿ ಆರಂಗುಲದೆತ್ತರ; ಏಳಡಿ ಮೂರಂಗುಲದುದ್ದ; ನಾಲ್ಕಡಿ ಎರಡಂಗುಲದಗಲ; ಸುತ್ತಲೂ ಹಾಕಿದ ಕಬ್ಬಿಣದ ಹಲಿಗೆ ೨। ಅಂಗುಲದಪ್ಪ; ಅದರ ಬಾಗಲು ಎರಡಂಗುಲದಗಲ ನಾಲ್ಕಡಿಯೆತ್ತರವಿರುವುದು. ಅದರ ಬೀಗ ಮತ್ತೊಂದು ಕೈಗೆ ಬಾರದೆ ಬ್ರಹ್ಮಾಭೇದ್ಯವಾಗಿರುವುದು. ಈ ಪೆಟ್ಟಿಗೆ ಗಾಳಿ ಬರುವುದಕ್ಕೂ ಬೆಳಕು ಬರುವುದಕ್ಕೂ ಎರಡು ಕಡೆಯೂ ಗೋಡೆಗಳಿಗೆ ಒಂದಡಿ ಚಚ್ಚೌಕದ ಎರಡು ಗವಾಕ್ಷಗಳಿದ್ದು, ಅವುಗಳಿಗೆ ಅಡ್ಡವಾಗಿ ಕಬ್ಬಿಣದ ಕಂಬಿಗ ಳನ್ನು ಹಾಕುವರು. ಈ ರಾಜವಾಸದಲ್ಲಿ ಹದಿನಾರು ವರ್ಷಗಳಾದ ಮೊದ ಲ್ಗೊಂಡು ಭಾಗ್ಯವತಿಯರ ಪುರುಷರು ಹಗಲೆಲ್ಲ ನಿರ್ಬಂಧಿಸಲ್ಪಡುವರು. ಪ್ರಾ ತಃಕಾಲದಲ್ಲಿ ಸ್ತ್ರೀಯರ ಭೋಜನವಾಗುವಾಗ ಒಂಭತ್ತು ಗಂಟೆಯಾಗುವುದು; ಆ ತರುವಾಯ ಹತ್ತು ಗಂಟೆಯೊಳಗೆ ಭರ್ತರ ಭೋಜನಗಳಾಗುವುವು. ಭರ್ತರ ಭೋಜನಗಳಾದೊಡನೆಯೇ ಪತ್ನಿಯರು ತಮ್ಮ ಪುರುಷರನ್ನು ಮೇಲೆ ವರ್ಣಿ ಸಲ್ಪಟ್ಟ ರಾಜಗೃಹಗಳಲ್ಲಿ ಹಾಕಿ ಬೀಗಹಾಕಿ ಬೀಗದಕೈಯನ್ನು ತಮ್ಮ ಬಳಿ ಯಲ್ಲಿಟ್ಟುಕೊಂಡು ರಾಜಕೀಯ ಕಾರ್ಯಸ್ಥಾನಗಳೇ ಮೊದಲಾದವುಗಳಿಗೆ ಹೋ ಗುವರು. ಅವರು ಮರಳಿ ಸಾಯಂಕಾಲದಯಿದು ಗಂಟೆಗೆ ಮನೆಗೆ ಬಂದು ಬೀಗ ತೆಗೆದ ಮೇಲೆ, ಪುರುಷರು ಈಚೆಗೆ ಬಂದು ಅಡಿಗೆ ಮೊದಲಾದ ಕೆಲಸಗ ಳನ್ನು ಮಾಡುವರು. ಇದರಿಂದ ಕಬ್ಬಿಣದ ಕೋಣೆಗಳಲ್ಲಿ ಪುರುಷರು ಹಗಲೆಲ್ಲ

ಸೋಮಾರಿಗಳಾಗಿ ಸೊಂಪಾಗಿ ಮಹಾರಾಜರಂತೆ ನಿದ್ರೆ ಹೋಗುವರೆಂದು ನೀವು ತಿಳಿದರೆ ನಿಮ್ಮ ಊಹೆ ಸರಿಯಲ್ಲ. ಮಲಗುವುದಕ್ಕೆ ಆ ಕೋಣೆಯಲ್ಲಿ ಎರಡಡಿ ಅಗಲವೂ ಅಯಿದಡಿ ಎತ್ತರವೂ ಉಳ್ಳ ಮಂಚವೊಂದಿದ್ದರೂ ಅದರಲ್ಲಿಯೆ ಹಿಟ್ಟು ಮೊದಲಾದುವನ್ನು ಬೀಸುವುದಕ್ಕೆ ಬೀಸುಕಲ್ಲುಗಳೂ, ಪಲ್ಯಕಾಯಿಗಳನ್ನು ಹೆಚ್ಚಲು ಮೆಟ್ಟುಕತ್ತಿಗಳೂ, ಮತ್ತು ಇತರ ಕೆಲಸಗಳನ್ನು ಮಾಡುವುದಕ್ಕೆ ತಕ್ಕ ಸಾಧನ ಸಾಮಗ್ರಿಗಳೂ, ಇರುವುದರಿಂದ ಅವರು ಅದರಲ್ಲಿಯೆ ಕೆಲಸ ಕಷ್ಟಗಳನ್ನು ಮಾಡಿ ಬೇಕಾದಾಗ ಮಂಚದ ಮೇಲೆ ಒರಗುವರು. ಈ ಆಚಾರದ ದೆಸೆಯಿಂದ ರಂಥೀ ದೇಶದ ಕುಲಪುರುಷರಲ್ಲಿ ವ್ಯಭಿಚಾರವೆಂಬ ಮಾತೇಯಿಲ್ಲ. ಸ್ತ್ರೀಯರಿಗೆ ಪುರುಷರಮೇಲೆ ಯಾವಾಗಲೂ ಅನುಮಾನ ಹೆಚ್ಚಾದುದರಿಂದ, ಈ ಪುರುಷರ ಮೇಲೆ ಕೂಡ ದೋಷಾರೋಪಣೆಗಳನ್ನಿಡುವರಲ್ಲದೆ ನಾನು ನೋಡಿದಮಟ್ಟಿಗೆ ಪುರುಷರೊಬ್ಬರಿಗೂ ಗರ್ಭಗಳುಂಟಾಗದೆ ಹೋಗುವುದರಿಂದ, ಅವರ ಮಾತುಗಳನ್ನು ನಾನು ನಂಬೆನು. ಈ ಪೆಟ್ಟಿಗೆಗಳನ್ನು ಮಾಡುವ ಸ್ತ್ರೀಯರು ಬದಲು ಬೀಗದ ಕೈಗಳನ್ನು ಮಾಡಿಸಿ ತಮ್ಮ ಬಳಿಯಲ್ಲಿಟ್ಟುಕೊಂಡು ವಿಶೇಷ ಧನ ಸ್ವೀಕರಿಸಿ, ಧನಿಕರಾದ ಇತರ ಸ್ತ್ರೀಯರಿಗೆ ಮಾರುವರೆಂದೂ, ಹೀಗಾದುದರಿಂದ ವ್ಯಭಿಚಾರ ನಡೆಯುವುದೆಂದೂ, ಅಸೂಯೆಯುಳ್ಳವರು ಅಪವಾದಗಳನ್ನು ಹೊರಡಿಸುವರು. ಕಬ್ಬಿಣದ ಪೆಟ್ಟಿಗೆಗಳನ್ನು ಕೊಂಡುಕೊಳ್ಳುವುದಕ್ಕೆ ಶಕ್ತಿಯಿಲ್ಲದವರು ಇದೇ ರೀತಿಯ ಮರದ ಪೆಟ್ಟಿಗೆಗಳನ್ನು ಮಾಡಿಸುವರು. ಅದಕ್ಕೂ ಸಮರ್ಥರಾಗದವರು ತಮ್ಮ ಪತಿಗಳನ್ನು ಕೋಣೆಗಳಲ್ಲಿಯೇ ಹಾಕಿ ಬೀಗಹಾಕಿ ಅಷ್ಟರಿಂದಲೇ ತೃಪ್ತಿ ಹೊಂದುವರು. ಈ ಆಚಾರಗಳನ್ನು ನಾವು ತಪ್ಪದೆ ನಮ್ಮ ದೇಶದಲ್ಲಿಯೂ ಸ್ಥಾಪಿಸಬೇಕು. ಅನುಭವಜ್ಞನಾದ ನನ್ನ ಮಾತನ್ನು ಕೇಳಿ ನೀವೀ ಪೆಟ್ಟಿಗೆಗಳ ಪದ್ಧತಿಯನ್ನು ನಮ್ಮ ದೇಶದಲ್ಲಿ ವ್ಯಾಪಿಸುವಂತೆ ಮಾಡಿ, ಸ್ತ್ರೀಯರನ್ನು ಅವುಗಳಲ್ಲಿಟ್ಟು ಬೀಗಹಾಕುತ್ತ ಬಂದ ಪಕ್ಷದಲ್ಲಿ ಅತ್ಯಲ್ಪ ಕಾಲದೊಳಗೆ ನಮ್ಮ ಭರತಖಂಡದಲ್ಲಿ ಜಾರತ್ವವೆಂಬುದು ರೂಪಳಿದು ನಮ್ಮ ದೇಶವು ಮಹಾಪವಿತ್ರವಾಗುವುದು. ಉತ್ತರ ಪ್ರತ್ಯುತ್ತರಗಳನ್ನು ನಡೆಯಿಸುವುದಕ್ಕೆ ಅವಕಾಶವುಂಟಾಗುವುದರಿಂದ ನಮ್ಮ ಪೆಟ್ಟಿಗೆಗಳಿಗೆ ಮಾತ್ರ ಗವಾಕ್ಷಗಳಿರಕೂಡದು. ನಮ್ಮ ದೇಶದಲ್ಲಿ ಪೆಟ್ಟಿಗೆಗಳನ್ನು ಮಾಡುವವರು ಪುರುಷರಾದುದರಿಂದ ಬೀಗ ಬೀಗದಕೈಗಳ ವಿಷಯವಾಗಿ ಈ ದೇಶದಲ್ಲಿ ಸ್ತ್ರೀಯರು ನಡೆಯಿಸುವರೆನ್ನುವ ಮೋಸದ ಕೆಲಸಗಳು, ನಮ್ಮ ದೇಶದಲ್ಲಿ ನಡೆಯಲಾರವು. ಅಷ್ಟೆಯಲ್ಲದೆ ಈ ಪೇಟಿಕಾ ನಿರ್ಮಾಣದಿಂದ ಸ್ತ್ರೀಯರಿಗೆ ಮಾನರಕ್ಷಣೆಯಾಗುವುದು

ಮಾತ್ರವಿಯಲ್ಲದೆ ಕಮ್ಮಾರರಿಗೂ ಬಡಿಗೆರಿಯವರಿಗೂ ಹೊಸ ಜೀವನಾಧಾರ ವುಂಟಾಗಿ ದೇಶವು ಭಾಗ್ಯಸಂಪನ್ನವಾಗುವುದು. ಆದುದರಿಂದ ನನ್ನ ಉಪದೇಶವನ್ನು ನೀವು ಅಶ್ರದ್ಧೆ ಮಾಡಬೇಡಿರಿ. ನನ್ನ ದೇಶಾಟನೆಯಿಂದಲ್ಲವೇ ಭರತ ಖಂಡಕ್ಕೆ ಈ ಮಹೋಪಕಾರವುಂಟಾಗುತ್ತಿದೆ? ದೇಶಾಟನವು ಬಹುಲಾಭಪ್ರದ ವೆಂದು ಹಿರಿಯರು ಹೇಳಿದ ಮಾತು ವ್ಯರ್ಥವಾಗುವುದೇ?

ಪುರುಷರಿಗೆ ನಾಲ್ವತ್ತು ವರ್ಷಗಳಾದೊಡನೆಯೇ ರಾಜವಾಸ ಬಂಧವಿಮೋಚನೆಯಾಗುವುದು. ಈ ನಿರ್ಬಂಧವು ವಿತಂತುಪುರುಷರಿಗೆ ಇಲ್ಲವೇ ಇಲ್ಲ. ಆದುದರಿಂದ ಪುರುಷರು ಸ್ವೇಚ್ಛೆಯಾಗಿರುವುದಕ್ಕೆ ಪತ್ನಿಯರಿಗೆ ವಿಷಪ್ರಯೋಗ ಮಾಡಬಹುದೆಂದೆಣಿಸಿದರೂ, ವಿತಂತುಗಳಾದೊಡನೆಯೇ ಮೂಗುಕೊಯ್ಯುವರೆಂಬ ಭಯದಿಂದ ಅಂತಹ ಕೆಲಸಕ್ಕೆ ಸಾಹಸಿಸದೆ ಅವರು ಪತ್ನೀಭಕ್ತಿಯುಳ್ಳವರಾಗಿ ನಡೆಯುವರು.

---

## ಆರನೆಯ ಪ್ರಕರಣವು.

---

ನನ್ನ ಯಜಮಾನಗಿತಿಯಾದ ಘಾಂಡೀಭಂಗಿ ವಿದ್ಯಾವತಿಯಾದ ಭಾಂಗೀಫಿಂಡಿಯನ್ನು ನಿಯಮಿಸಿ ನನಗೆ ಮನೆಯಲ್ಲಿ ಪಾಠ ಹೇಳಸುತ್ತಿದ್ದುದೂ, ರಂಧೀಭಾಷೆಯಲ್ಲಿ ನಾನು ತಕ್ಕಷ್ಟು ಪಾಂಡಿತ್ಯ ಸಂಪಾದಿಸಿದ ತರುವಾಯ ದೊರೆತನದವರು ಹೊಸತಾಗಿ ಸ್ಥಾಪಿಸಿದ ಪುರುಷಪಾಠಶಾಲೆಗೆ ನನ್ನನ್ನು ಕಳುಹುತ್ತಿದ್ದುದೂ, ಅಲ್ಲಿ ಸಹಪಾಠಿಯಾದ ಮತ್ತೊಬ್ಬ ಪುರುಷನೊಡನೆ ನನಗೆ ಸ್ನೇಹವುಂಟಾದುದೂ ನಿಮಗೆ ಇದಕ್ಕೆ ಮೊದಲೇ ತಿಳಿಸಿರುವೆನಲ್ಲವೇ? ನಾವಿಬ್ಬರೇ ಅಲ್ಲದೆ ಬೇರೆ ಯಾರೂ ಪುರುಷರು ಆ ಪಾಠಶಾಲೆಯಲ್ಲಿ ಸೇರಲಿಲ್ಲ. ನಮಗೆ ಉಪಾಧ್ಯಾಯನಾಗಿ ನಿಯಮಿಸಲ್ಪಟ್ಟ ಜಾತಿಪುರುಷನ ಹೆಸರು ಚಾಮಜ್ಜೀ. ಆತನು ರಂಧೀ ಭಾಷೆಯಲ್ಲಿ ವಿಶೇಷಪಾಂಡಿತ್ಯವುಳ್ಳವನಾಗದೆ ಹೋದರೂ, ಸ್ವಭಾಷೆಯಲ್ಲಿ ಮಹಾವಿದ್ವಾಂಸನಾಗಿ ಸಂಗೀತದಲ್ಲಿಯೂ ಚಿತ್ರಲೇಖನದಲ್ಲಿಯೂ ಶಿಲ್ಪಗಳಲ್ಲಿಯೂ ಪ್ರಕೃತಿಶಾಸ್ತ್ರಗಳಲ್ಲಿಯೂ ನಿರುಪಮವಾದ ಸಾಮರ್ಥ್ಯವುಳ್ಳ ನಾಗರಿಕಾಗ್ರಗಣ್ಯನು. ಅವನು ನಮಗಿಬ್ಬರಿಗೂ ಪಾಠಕಲಿಸುವುದೇ ಅಲ್ಲದೆ ಪುರುಷರು ಹೊಂದ ತಕ್ಕ ಸ್ವಾತಂತ್ರ್ಯಗಳನ್ನು ಕುರಿತು ಕೂಡ ಎಷ್ಟೋ

ಬಾರಿ ಬೋಧಿಸುತ್ತಿದ್ದನು. ಪುರುಷವಿದ್ಯಾಸ್ವಾತಂತ್ರ್ಯಗಳು ನನಗೆ ಹೊಸತಾಗಿ ಕಾಣದೆ ಹೋದರೂ, ದೇಶಾಚಾರದಿಂದ ಸ್ತ್ರೀಯರಿಗೆ ದಾಸ್ಯಮಾಡುವ ಅಭ್ಯಾಸವಾದ ನನ್ನ ಸಹಾಧ್ಯಾಯಿಗೆ ಮಾತ್ರ ವಿಚಿತ್ರವಾಗಿ ಕಂಡು ಬಂದು, ಅತ್ಯುತ್ಸಾಹವನ್ನುಂಟು ಮಾಡುತ್ತಿದ್ದುವು. ನಮ್ಮ ಉಪಾಧ್ಯಾಯನು ಉಪದೇಶಿಸಿದ ಬೋಧನೆಯಿಂದಲೂ, ಮಾಡಿದ ಉಪನ್ಯಾಸಗಳಿಂದಲೂ ಅಲ್ಲದೆ ಹೋದರೂ, ಸ್ತ್ರೀಯರ ಅಧಿಕಾರವನ್ನು ಕೆಡಿಸಿ, ಆ ದೇಶದಲ್ಲಿ ಪುರುಷಸ್ವಾತಂತ್ರ್ಯವನ್ನು ನೆಲೆಗೊಳಿಸಬೇಕೆಂಬ ಅಭಿಲಾಷೆಯಿಂದ ಸಹಜವಾಗಿಯೆ ಅವರಿಬ್ಬರಿಗಿಂತಲೂ ನನಗೆ ಹೆಚ್ಚು ಉತ್ಸಾಹವಿತ್ತು. ನನ್ನ ಸಹಾಧ್ಯಾಯಿ ಹೆಚ್ಚುಕಡಿಮೆ ಇಪ್ಪತ್ತು ವರ್ಷ ಪ್ರಾಯದವನು ; ಅಪತ್ನೀಕನು ; ನವನಾಗರಿಕೆಯಾದ ಅಕ್ಕನ ಪ್ರೋದ್ಬಲದಿಂದ ಚಿಕ್ಕಂದಿನಿಂದಲೂ ಸ್ವಲ್ಪವಿದ್ಯೆ ಕಲಿತವನು. ಹಿಂದೆ ಲಕ್ಷ್ಮಣಸ್ವಾಮಿ ಶೂರ್ಪನಖಿಯ ಮೂಗು ಕುಯ್ದು ಹಾಗೆ, ಗುರುಗಳು ಅಪತ್ನೀಕನಾದ ಆತನ ಮೂಗನ್ನು ಇದಕ್ಕೆ ಮೊದಲೇ ಪೂರ್ಣವಾಗಿ ಕಡಿದು ಬಿಡುತ್ತಿದ್ದರು. ಆದರೆ ಜಾತಿಭಾಷೆ ಓದಿ, ನವನಾಗರಿಕೆಯಾಗಿ ರಾಜಕೀಯೋದ್ಯೋಗದಲ್ಲಿರುವ ಆತನ ಅಕ್ಕ ಆ ಕೆಲಸ ಮಾಡಬಿಡಲಿಲ್ಲ. ಬಂಧು ಜನರಿಗೆ ವಿರೋಧವಾಗಿ ಈಗ ಆತನನ್ನು ರಾಜಕೀಯ ಪಾಠಶಾಲೆಗೆ ಕಳುಹಿದವಳೂ ಅಕ್ಕನೇ. ಸಹಪಾಠಿಯಾದ ನನ್ನ ಮಿತ್ರನ ಹೆಸರು ಭಾಥೀಫೋಡ್. ನಾನು ಕ್ರಮವಾಗಿ ಪ್ರತಿದಿನವೂ ಪಾಠಶಾಲೆಗೆ ಹೋಗಿ ಪಾಠಗಳನ್ನೋದುತ್ತಿದ್ದರೂ, ನನ್ನ ಮಿತ್ರನು ಮಾತ್ರ ನೋಂಪುಗಳೇ ಮೊದಲಾದುದರ ನಿಮಿತ್ತವಾಗಿ, ವಾರಕ್ಕೆ ಮೂರು ನಾಲ್ಕುದಿನಗಳ ಶಾಲೆಗೆ ಬರುತ್ತಬಂದನು. ನಮ್ಮ ದೇಶದಲ್ಲಿ ಸ್ತ್ರೀಯರಿಗೆ ಎಷ್ಟು ನೋಂಪುಗಳವೆಯೋ ಆ ದೇಶದಲ್ಲಿ ಪುರುಷರಿಗೆ ಅದರ ಎರಡರಷ್ಟಿವೆ. ಅವರು ಆದಿತ್ಯವಾರ ಪ್ರಾತಃಕಾಲದಲ್ಲಿ ಪೂರಣಗಡ್ಡೆಯನ್ನು ಪೂಜಿಸುವರು ; ಸಾಯಂಕಾಲದಲ್ಲಿ ಮುಡಿಗೆಣಸಿನ ಗಡ್ಡೆಗೆ ಪೂಜೆ ಮಾಡುವರು ; ಸೋಮವಾರ ಮಧ್ಯಾಹ್ನ ಅರೆಯುವ ಕಲ್ಲನ್ನು ಪೂಜಿಸುವರು ; ಸಾಯಂಕಾಲದಲ್ಲಿ ಒರಲಿಗೆ ಪೂಜೆಮಾಡುವರು. ನಡುನಡುವೆ ಬರುವ ವಿಶೇಷವ್ರತಗಳ ಹೊರತು, ಈ ಪ್ರಕಾರವಾಗಿ ದಿನಕ್ಕೆ ಎರಡೆರಡರಂತೆ ಪುರುಷರು ಸಂವತ್ಸರಕ್ಕೆ ೭೩೦ ನೋಂಪುಗಳನ್ನಾಚರಿಸುವರು. ಸಾಮಾನ್ಯ ಪುರುಷರು ಅಷ್ಟು ನೋಂಪುಗಳನ್ನಾಚರಿಸರಾದರೂ ಅಪತ್ನೀಕರೂ ವಿತ್ತವಂತರೂ ವಿಶೇಷವಾಗಿ ವ್ರತಗಳನ್ನಾಚರಿಸಿ ಅವುಗಳಿಂದ ಕಾಲಕ್ಷೇಪಮಾಡುತ್ತ, ತಮ್ಮ ವಿತ್ತವನ್ನು ಗುರುತಸ್ಕರಾಚಾರ್ಯರಿಗೆ ಸಮರ್ಪಿಸುತ್ತಿರುವರು. ನಮ್ಮ ಸಹಾ

ಧ್ಯಾಯಿ ಇಷ್ಟು ವ್ರತಗಳನ್ನಾಚರಿಸುವುದು ಅಕ್ಕನಿಗೆ ಇಷ್ಟವಿಲ್ಲದೆ ಹೋದರೂ, ಅಕ್ಕನಿಗೆ ತಿಳಿಯದಂತೆ, ಆತನು ಶಾಲೆಬಿಟ್ಟು ಆಕೆ ಉದ್ಯೋಗಕ್ಕೆ ಹೋದ ತರು ವಾಯ ರಹಸ್ಯವಾಗಿ ಮುದುಕನಾದ ತಂದೆಯ ಮತ್ತು ಮನೆಯಲ್ಲಿರುವ ಇತರ ಪುರುಷರ ಪ್ರೋತ್ಸಾಹದಿಂದ ನೋಂಪುಗಳನ್ನಾಚರಿಸುತ್ತಿದ್ದನು. ಈ ನೋಂಪು ಗಳು ನಿಷ್ಫಲವೆಂದು ನಾನೂ, ನಮ್ಮ ಉಪಾಧ್ಯಾಯನಾದ ಚಾಮರ್ಜಿಯೂ ಕೂಡ, ಎಷ್ಟೋಸಾರಿ ನನ್ನ ಮಿತ್ರನಾದ ಭಾಥೀಫೋಡಿಗೆ ಬೋಧಿಸುತ್ತ ಬಂದೆ ವಾದರೂ ಆತನು ನಮ್ಮ ಹತ್ತಿರ ಹಾಗೆಯೇ ಎಂದು ತಲೆಯಾಡಿಸಿ, ನೋಂಪುಗ ಳನ್ನು ಬಿಟ್ಟುಬಿಡುವೆನೆಂದು ಆಣೆಹಾಕಿಕೊಂಡು, ನಮ್ಮನ್ನು ಬಿಟ್ಟು ಮನೆಗೆ ಹೋದೊಡನೆಯೇ ಆ ಮಾತುಗಳನ್ನು ಮರೆತು ಯಥಾಪ್ರಕಾರವಾಗಿ ಪ್ರವರ್ತಿ ಸುತ್ತಿದ್ದನು. ಎಷ್ಟು ಓದಿಕೊಂಡರೂ ಚಿರಕಾಲದಿಂದ ಬರುತ್ತಿರುವ ಆಚಾರವನ್ನು ಒಂದೇ ಸಾರಿಗೆ ಬಿಡುವುದು ಎಂತಹರಿಗೂ ಕಷ್ಟಸಾಧ್ಯವಾಗಿರುವುದು. ಆದುದ ರಿಂದ ನಾನಾತನನ್ನು ಪ್ರತಿದಿನವೂ ಪಾಠಶಾಲೆಗೆ ನನ್ನ ಸಂಗಡಲೇ ಕರೆದು ತರು ವುದಕ್ಕಾಗಿ ಆತನ ಮನೆಯ ಮಾರ್ಗವಾಗಿಯೇ ಹೋಗಿ ಆತನನ್ನು ನನ್ನೊಡನೆ ಕರೆದುಕೊಂಡು ಹೋಗುತ್ತಿದ್ದೆನು.

ಹೀಗೆ ಕೆಲವು ಕಾಲ ನಡೆದಮೇಲೆ ನಾವಿಬ್ಬರೂ ಕೂಡಿ ಒಂದುದಿನ ಪಾಠಶಾ ಲೆಗೆ ಹೋಗುತ್ತಿರಲು, ಮಾರ್ಗದಲ್ಲಿ ನಿನಗೊಂದು ವಿಚಿತ್ರ ತೋರಿಸುವೆನು ಬಾ ರೆಂದು ನನ್ನ ಮಿತ್ರನು ನನ್ನನ್ನು ಊರ ಹೊರಗೆ ತೆಗೆದುಕೊಂಡು ಹೋದನು. ಇದಕ್ಕೆ ಮೊದಲೇ ಈ ವಿನೋದವನ್ನು ನೋಡುವುದಕ್ಕಾಗಿ ಅಲ್ಲಿಗೆ ತೀರ್ಥಪ್ರಜೆಗಳ ಹಾಗೆ ಸ್ತ್ರೀಯರು ಬಂದಿದ್ದರು. ಆ ಗುಂಪಿನಲ್ಲಿ ನಡುನಡುವೆ ಪತ್ನೀವಿಯೋಗ ಹೊಂದದ ಪುಣ್ಯಪುರುಷರೂ ಕೆಲವರಿದ್ದರು. ಆ ಪಟ್ಟಣದಲ್ಲಿ ಕಳೆದ ರಾತ್ರಿ ಧನವತಿ ಯಾದೊಬ್ಬ ವೃದ್ಧವಣಿಜಸ್ತ್ರೀ ಮೃತಿ ಹೊಂದಿದ್ದಳು. ಆ ಮುದುಕಿಯ ಭರ್ತನು ಮೃತಳಾದ ತನ್ನ ಪತ್ನಿಯೊಡನೆ ಸಹಗಮನ ಮಾಡುವುದಕ್ಕೆ ನಿಶ್ಚಯಿಸಿ ಸ್ಮಶಾನ ನಾಟಕೆಗೆ ಹೋದುದರಿಂದ, ವಿನೋದನೋಡುವುದಕ್ಕೂ ಪುಣ್ಯಸಂಪಾದಿಸಿ ಕೊ ಳ್ಳುವುದಕ್ಕೂ ಅಲ್ಲಿ ಸಾವಿರದ ವರೆಗೂ ಜನರು ನೆರೆದಿದ್ದರು. ನಾವು ಹೋಗುವುದಕ್ಕೆ ಮೊದಲೇ ಮಾಡಬೇಕಾದ ಕರ್ಮಗಳೆಲ್ಲವೂ ನಡೆದಿದ್ದುವು. ನಾವು ಹೋದಮೇಲೆ ಮುದುಕಿಯ ಶವವನ್ನು ನಾಲ್ವರು ಎತ್ತಿಕೊಂಡು ಹೋಗಿ ಅದಕ್ಕೆ ಮೊದಲೇ ಅಗಿ ದು ಇಟ್ಟಿರುತ್ತಿದ್ದ ಹೊಂಡದಲ್ಲಿ ಉದ್ದಕ್ಕೆ ಅಧೋಮುಖವಾಗಿ ಮಲಗಿಸಿದರು. ಆಗ ಪುರೋಹಿತಸ್ತ್ರೀಯರು ಮಂತ್ರಗಳನ್ನೋದುತ್ತ ಭರ್ತನ ಕೈ ಹಿಡಿದುಕೊಂಡು

ಆ ಹೊಂಡದ ಬಳಿಗೆ ಕೊಂಡುಹೋಗಲು, ಅರವತ್ತು ವರ್ಷಪ್ರಾಯದ ಆ ಮುದುಕನು ತನ್ನ ಕೈಯ್ಯ ಮೇಲಣ ಎರಡು ಮೂರು ಆಭರಣಗಳನ್ನು ತೆಗೆದು ಬಳಿಯಲ್ಲಿರುವ ಪುರುಷರಿಗೆ ದಾನಮಾಡಿ, ಸಂತೋಷಪೂರ್ವಕವಾಗಿ ಸಮಾಧಿಗಿಳಿದು, ಪತ್ನಿಯ ಬಲಕಡೆಗೆ ತಾನು ಭೂಮಿಗೆ ಮುಖವಾಗಿ ಮಲಗಿದನು. ಆಗ ಪುರೋಹಿತರು ನಮ್ಮ ದೇಶದಲ್ಲಿ, ವೇದಘೋಷಮಾಡುವ ಹಾಗೆ, ಗಳಗೆಯ ಹೊತ್ತು ಏನೇನೋ ಮಂತ್ರಗಳನ್ನು ಹೇಳುತ್ತ ಯಾವಾವುವೋ ಕರ್ಮಗಳನ್ನು ಮಾಡುತ್ತಿದ್ದರು. ಇಷ್ಟರೊಳಗೆ ಹನ್ನೆರಡು ಜನ ಸ್ತ್ರೀಯರು ದೊಡ್ಡ ಬುಟ್ಟಿ ತುಂಬಾ ಮಣ್ಣು ಹಿಡಿದುಕೊಂಡು ಹೊಂಡದ ಸುತ್ತಲೂ ನಿಂತಿದ್ದರು. ಆಗ ಮಹಾಧ್ವನಿಯೊಡನೆ ವಾದ್ಯಗಳು ಮೊಳಗುತ್ತಿದ್ದುವು. ಆ ಸಂದಣಿಯಲ್ಲಿ ಮುಖ್ಯರಾದ ಯಾಜಕಸ್ತ್ರೀ ಏನೋ ಮಂತ್ರಹೇಳಿ ಕೈಬೀಸಲು, ಒಂದೇ ಸಾರಿಗೆ ಆ ಹನ್ನೆರಡು ಸ್ತ್ರೀಯರೂ ತಮ್ಮ ಬುಟ್ಟಿಯೊಳಗಣ ಮಣ್ಣನ್ನು ಮೇಲೆ ಹಾಕಿದರು. ಆ ತರುವಾಯ ಪುಣ್ಯಪುರುಷರೊಬ್ಬರೊಬ್ಬರೇ ಬಂದು ಒಂದೊಂದರಿವಾಣದಷ್ಟು ಮಣ್ಣನ್ನು ಮೇಲೆ ಸುರಿದು ನಮಸ್ಕರಿಸಿ ಹೋಗ ತೊಡಗಿದರು. ಪಾಠಶಾಲೆಗೆ ಹೋಗುವ ವೇಳೆ ಮೀರುವುದೆಂದು ಆ ಸ್ಥಳವನ್ನು ಬಿಟ್ಟು ನನ್ನ ಮಿತ್ರನೂ ನಾನೂ ದಾರಿಯುದ್ದಕ್ಕೂ ಸಹಗಮನ ವಿಷಯವಾಗಿಯೆ ಮಾತನಾಡಿಕೊಳ್ಳುತ್ತ, ಬೇಗನೆ ಹಾಗೆಯೇ ಪಾಠಶಾಲೆಗೆ ಹೋದೆವು. ಆ ದೇಶದಲ್ಲಿ ಅಯಿವತ್ತು ವರ್ಷ ದಾಟದ ಮೇಲಲ್ಲದೆ ಪುರುಷನು ಸಹಗಮನಮಾಡಬಾರದಂತೆ, ಅಯಿವತ್ತು ವರ್ಷ ಪ್ರಾಯದವರೆಗೂ ಪತ್ನಿಯೊಡನೆ ಸಂಸಾರಮಾಡಿದ ಪುರುಷನು ಆ ದೇಶದಲ್ಲಿ ಪುಣ್ಯಪುರುಷನೆನ್ನಿಸುವನು. ಅಂತಹ ಪುಣ್ಯಪುರುಷನು ಪತ್ನಿಯ ಮರಣ ಸಮಯದಲ್ಲಿ ಸಹಗಮನ ಮಾಡಿದರೆ, ಮೂವತ್ತು ಮೂರು ತಲೆಗಳವರೆಗೂ ತನ್ನ ತಾಯಿಯ ಕಡೆಯವರನ್ನೂ ತಂದೆಯ ಕಡೆಯವರನ್ನೂ, ಮಾತ್ರವಲ್ಲದೆ ತನ್ನ ಪತ್ನಿಯ ಹೆತ್ತವರ ಕಡೆಯವರನ್ನೂ ಉದ್ಧಾರಮಾಡಿ, ಮಹಾಪಾಪಿಗಳನ್ನು ಕೂಡ ಪುಣ್ಯಲೋಕಗಳಿಗೆ ಕಳುಹುವನಂತೆ. ಆ ದೇಶದಲ್ಲಿ ಶವಗಳನ್ನು ಹೂಳುವುದೇ ಅಲ್ಲದೆ, ದಹನ ಮಾಡುವುದೆಂಬಿಲ್ಲ. ಸಮಾಧಿಯಲ್ಲಿ ದಂಪತಿಗಳನ್ನು ಅಧೋಮುಖವಾಗಿ ಮಲಗಿಸುವುದಕ್ಕೆ ಕಾರಣವೇನಾದರೂ ಇದೆಯೋ ಎಂದು ನನ್ನ ಮಿತ್ರನನ್ನು ಕೇಳಿದೆನು. ಪುಣ್ಯಲೋಕಗಳು ಕೆಳಗಿನ ಕಡೆಯಲ್ಲಿರುವವಾದುದರಿಂದ ಅವರ ಆತ್ಮಗಳು ಸರಿಯಾಗಿ ಅಲ್ಲಿಗೆ ಹೋಗುವುದಕ್ಕಾಗಿ ಹಾಗೆ ಮಾಡುವರೆಂದು ಆತನು ಉತ್ತರಕೊಟ್ಟನು. ಪುಣ್ಯಲೋಕಗಳು ಮೇಲೆ ಇರುವುದರಿಂದಲೇ ಊರ್ಧ್ವಲೋ

ಕಗಳನ್ನು ಸುವುವೆಂದೂ, ಪಾಪಲೋಕಗಳು ಕೆಳಗಿರುವುದರಿಂದಲೇ ಅಧೋಲೋಕಗಳನ್ನು ಸುವುವೆಂದೂ ನಮ್ಮ ಶಾಸ್ತ್ರಗಳು ಹೇಳುವವು. ಆ ದೇಶದವರು ಶಾಸ್ತ್ರವಿರುದ್ಧವಾಗಿ ಪುಣ್ಯಲೋಕಗಳೇ ಕೆಳಗಿರುವವೆಂಬರು. ಪುಣ್ಯಪಾಪ ಶಬ್ದಗಳ ಪ್ರಯೋಗ ಹೇಗಿದ್ದರೂ, ಅವರು ಈ ಪ್ರಕಾರವಾಗಿ ಸಮಸ್ತ ವಿಷಯಗಳಲ್ಲಿಯೂ ಪುರುಷರಿಗೆ ಅನ್ಯಾಯ ಮಾಡುವುದರಿಂದ ಅವರು ಅಧೋಲೋಕಗಳಿಗೆ ಇಳಿದು ಹೋಗುವುದೇ ನಿಶ್ಚಯವೆಂದು ನಾನು ಹೇಳುವೆನು. ಈ ಸಹಗಮನವನ್ನು ಅವರ ಭಾಷೆಯಲ್ಲಿ "ಭೋಶೀ ಝೂಟೀ" ಎನ್ನುವರು; ಸ್ವರ್ಗಯಾತ್ರೆ ಎಂದು ಅದರ ಅರ್ಥವು. ಈ ಸಂಭಾಷಣೆ ಮುಗಿಯುವಷ್ಟರಲ್ಲಿ ನಾವು ಪಾಠಶಾಲೆಯನ್ನು ಸೇರಿದೆವು. ನಮ್ಮ ಉಪಾಧ್ಯಾಯನು ತುಂಬಾ ಹೊತ್ತಿನಿಂದ ನಮಗಾಗಿ ಕಾದಿದ್ದು, ನಾವು ಹೋದೊಡನೆಯಿಷ್ಟು ತಡವೇಕೆ ಮಾಡಿದಿರೆಂದು ಕೇಳಿದನು. ತಡವಿನ ಕಾರಣವು. ನಾವು ಸ್ವರ್ಗಯಾತ್ರೆ ನೋಡ ಹೋದುದೆಂದು ಹೇಳಿದೆವು. ಆ ಮೇಲೆ ಆತನು ಆ ದಿನದ ಪಾಠಗಳನ್ನು ಕಟ್ಟಿಟ್ಟು, ನಿಜವಾಗಿ ಅದು ನರಕಯಾತ್ರೆಯಲ್ಲದೆ ಸ್ವರ್ಗಯಾತ್ರೆಯಲ್ಲವೆಂದೂ, ಇಂತಹ ಕ್ರೂರಕೃತ್ಯವನ್ನು ಜನರು ತಾವಾಗಿಯೇ ವಿವೇಕವುಳ್ಳವರಾಗಿ ಬಿಡದೆಹೋದರೆ, ದೊರೆತನದವರು ಒತ್ತಾಯದಿಂದಾದರೂ ಬಿಡಿಸಬೇಕೆಂದೂ, ಎಷ್ಟೋ ಮಾತನಾಡಿದನು. ಈ ಪ್ರಸಂಗದಲ್ಲಿ ನಮ್ಮ ದೇಶಾಚಾರದ ಸಂಗತಿಯೂ ಬಂತು. ಪುರುಷರ ವಿಷಯವಾಗಿ ಹೀಗೆ ಮಾಡುವುದು ದಾರುಣಕೃತ್ಯವಾದರೂ, ಭರ್ತೃಮರಣ ಸಂಭವಿಸಿದಾಗ ಅನುಗಮನ ಮಾಡುವುದು ಪತಿವ್ರತೆಯರಾದ ಭಾರ್ಯೆಯರಿಗೆ ಪರಮಧರ್ಮವೆಂದೂ, ಈ ದೇಶದ ಹಾಗೆ ಮುದುಕರು ಮಾತ್ರವೇ ಅಲ್ಲದೆ - ಏಳೆಂಟು ವರ್ಷದ ಬಾಲಕಿಯರು ಸಹ ಭರ್ತರು ಹೋದಾಗ ಪೂರ್ವಕಾಲದಲ್ಲಿ ನಮ್ಮ ದೇಶದಲ್ಲಿ ಸಹಗಮನ ಮಾಡುತ್ತಿದ್ದರೆಂದೂ, ನಮ್ಮ ದೇಶಕ್ಕೆ ಅನ್ಯದೇಶೀಯರು ಪ್ರಭುಗಳಾದುದರಿಂದ ಅವರೀ ಸದಾಚಾರವನ್ನು ಬಿಡಿಸಿ, ಪಾಪಕಟ್ಟಿ ಕೊಂಡರೆಂದೂ, ಹೇಳಿ ಸಹಗಮನ ಮಾಹಾತ್ಮ್ಯವನ್ನು ಬೋಧಿಸಿದೆನು. ಭರ್ತರು ಮೃತಿ ಹೊಂದಿದಾಗ ಭಾರ್ಯೆಯರು ಭರ್ತರ ಚಿತಿಯನ್ನೇರಿ ನಿಮಿಷದೊಳಗೆ ಅಗ್ನಿಹೋತ್ರಜ್ವಾಲೆಗಳಿಗೆ ಆಹುತಿಯಾಗುವರೆಂದು ನಾನು ಹೇಳಲಾಗಿ - ಆತನು ಅದು ಕೂಡ ಕ್ರೂರಕೃತ್ಯವೆಂದೂ, ದೊರೆತನದವರು ಅದನ್ನು ಬಿಡಿಸುವುದು ಶ್ಲಾಘ್ಯಕಾರ್ಯವೆಂದೂ, ತನ್ನ ದೇಶದಲ್ಲಿ ಪ್ರಭುತ್ವದವರಿಗೆ ಅಂತಹ ಸಾಹಸವಿಲ್ಲವೆಂದೂ, ಮಹಾವ್ಯಸನದೊಡನೆ ಮಾತನಾಡಿದನು. ಪುರುಷರನ್ನು ಪ್ರಾಣ

ದೊಡನೆ ಹೋಗಬಿಡುವ ದುರಾಚಾರವನ್ನು ಜಡಿಸುವುದು ಅವಶ್ಯ ಕರ್ತವ್ಯವೆಂದು ನಾನಾತನೊಡನೆ ಏಕೀಭವಿಸಿದರೂ, ನಮ್ಮ ದೇಶದ ಸಂಗತಿಯನ್ನು ಮಾತ್ರ ಅವನು ಚೆನ್ನಾಗಿ ಆಲೋಚಿಸಲಿಲ್ಲವೆಂದೂ, ಶಾಸ್ತ್ರಗಳಿರುವ ಸಂಗತಿ ಆತನಿಗೆ ತಿಳಿಯದೆಂದೂ ಭಾವಿಸಿ, ನಮ್ಮದು ಕೇವಲಾಚಾರವಲ್ಲವೆಂದೂ, ಪ್ರತ್ಯಕ್ಷಶಾಸ್ತ್ರ ಸಿದ್ಧವೆಂದೂ, ಈ ಕಲಿಯುಗಕ್ಕೆ ಪರಮಪ್ರಮಾಣವಾದ ಪರಾಶರಸ್ಮೃತಿಯಲ್ಲಿ

ಶ್ಲೋ॥ ತಿಸ್ರಃಕೋಟ್ಯರ್ಧಕೋಟೀಚ ಯಾನಿಲೋಮಾನಿ ಮಾನುಷೇ ।
ತಾವತ್ಕಾಲಂ ವಸೇತ್ಸ್ವರ್ಗೇ ಭರ್ತಾರಂ ಯಾನುಗಚ್ಛತಿ ॥

ಎಂದರೆ ಭರ್ತನೊಡನೆ ಸಹಗಮನ ಮಾಡಿದ ಪುಣ್ಯಸ್ತ್ರೀ ಮನುಷ್ಯ ದೇಹದಲ್ಲಿ ಎಷ್ಟು ರೋಮಗಳಿರುವವೋ ಅಷ್ಟುಕಾಲ ಎಂದರೆ ಮೂರು ಕೋಟಿ ಅಯಿವತ್ತು ಲಕ್ಷ ಸಾವಿರ ವರ್ಷದ ವರೆಗೆ ಸ್ವರ್ಗ ಸುಖಹೊಂದುವಳೆಂದು ಹೇಳಿಯದೆ ಎಂದೂ "ಯಾನಿಲೋಮಾನಿ ಮಾನುಷೇ ತಾವಂತ್ಯಬ್ದ ಸಹಸ್ರಾಣಿ" ಎಂದು ಹಾರೀತನು ಕೂಡ ಸ್ಪಷ್ಟವಾಗಿ ಹೇಳಿರುವನೆಂದೂ, ಅಂಗೀರಸ ಸ್ಮೃತಿಯಲ್ಲಿ

ಶ್ಲೋ॥ ಬ್ರಹ್ಮಘ್ನೋವಾ ಕೃತಘ್ನೋಪಿ ಮಿತ್ರಘ್ನೋವಾಪಿಮಾನವಃ ।
ತಂವೈಪುನಾತಿಸಾನಾರೀ ಇತ್ಯಾಂಗೀರಸ ಭಾಷಿತಮ್ ॥

ಎಂದರೆ ಸಹಗಮನ ಮಾಡಿದ ಸ್ತ್ರೀಯು ಭರ್ತನು ಬ್ರಹ್ಮಘ್ನನಾದರೂ ಕೃತಘ್ನನಾದರೂ ಮಿತ್ರಘ್ನನಾದರೂ ಕೂಡ ಆತನನ್ನು ಪವಿತ್ರನಾಗಿ ಮಾಡುವದೆಂದು ಹೇಳಿಯಿದೆ ಎಂದೂ, ಆದುದರಿಂದ ಶಾಸ್ತ್ರವಿಹಿತವಾದೀ ಆಚಾರವನ್ನು ನಿಷಿದ್ಧವೆನ್ನಲಾಗದೆಂದೂ, ಆಸ್ತಿಕರಾದವರೆಲ್ಲರೂ ಶಾಸ್ತ್ರಪ್ರಮಾಣವನ್ನು ಶಿರಸಾವಹಿಸಿ, ಅಲ್ಪವಾದ ಮನುಷ್ಯಬುದ್ಧಿಗೆ ಕ್ರೂರವಾಗಿ ಕಾಣಬಂದರೂ, ತಪ್ಪದೆ ಅನುಷ್ಠಿಸಬೇಕೆಂದೂ, ನಿಂದ್ಯವಾದ ಆಚಾರವನ್ನು ಶಿಷ್ಟರಾದ ನಮ್ಮವರು ಅಂಗೀಕರಿಸಲಾರದುದರಿಂದ ತಪ್ಪದೆ ಇದು ಸದಾಚಾರವೇ ಸರಿಯೆಂದೂ, ನಾನು ದೃಢೀಕರಿಸಿ ಹೇಳಿದೆನು. ಆ ಬಳಿಕ ಆತನು ಕೊಂಚ ಹೊತ್ತು ಆಲೋಚಿಸಿ, ಸ್ವಪ್ರಯೋಜನಪರರಾದ ಮನುಷ್ಯರಾರೋ ಯಾವುವೋ ಕಾರಣಗಳಿಂದ ಅಂತಹ ಶ್ಲೋಕಗಳನ್ನು ಕಲ್ಪಿಸಿರಬಹುದೆಂದು ಹೇಳಿದನು. ನಾನಾ ಮಾತಿಗೊಡಂಬಡದೆ ಅವು ಮನುಷ್ಯಕಲ್ಪಿತಗಳಾಗುವುದು ಸಾಧ್ಯವಲ್ಲವೆಂದೂ, ಮನುಷ್ಯಕಲ್ಪಿತಗಳಾದ ಪಕ್ಷದಲ್ಲಿ.

"ನಮೋದ್ಯಾಮುಕೇಮಾಸಿ ಅಮುಕೇ ಪಕ್ಷೇಽಮುಕತಿಥೌ ಅಮುಕಗೋತ್ರಾ ಶ್ರೀಮತೀ ಅಮುಕೀದೇವೀ ಅರುಂಧತೀ ಸಮಾಚಾರ ಪೂರ್ವಕ

ಸ್ವರ್ಗಲೋಕ ಮಹೀಯಮಾನತ್ವ ಮಾನವಾಧಿಕರಣಕಲೋಮ ಸಮ ಸಂಖ್ಯಾಬ್ಧಾವಚ್ಛಿನ್ನ ಸ್ವರ್ಗವಾಸ ಭರ್ತೃಸಹಿತ ಮೋದಮಾನತ್ವ ಮಾತೃ ಪಿತೃ ಶ್ವಶುರಕುಲತ್ರಯಪೂತತ್ವ ಚತುರ್ದಶೇಂದ್ರಾವಚ್ಛಿನ್ನ ಕಾಲಾಧಿಕ ರಣಕಾಪ್ಸರೋಗಣಸ್ತೂಯಮಾನತ್ವ ಪತಿಸಹಿತಕ್ರೀಡಮಾನತ್ವ ಬ್ರಹ್ಮ ಘ್ನ ಕೃತಘ್ನ ಮಿತ್ರಘ್ನ ಪತಿಪೂತತ್ವಕಾಮಾ ಭರ್ತೃಜ್ವಲಚ್ಚಿತಾರೋ ಹಣಮಹಂಕರಿಷ್ಯೇ ॥"

ಎಂಬ ಸಂಕಲ್ಪವೇಕೆ ಹುಟ್ಟಿತೆಂದೂ, ಮೊತ್ತಮೊದಲಿದಕ್ಕೊಂದಕ್ಕೆ ನನಗೆ ಸಮಾಧಾನ ಹೇಳಬೇಕೆಂದೂ, ನಾನು ಕೋರಿದೆನು. ಆ ಸಂಕಲ್ಪಕ್ಕೆ ಅರ್ಥವೇ ನೆಂದು ಅವನು ನನ್ನನ್ನು ಕೇಳಿದನು. "ನಮಸ್ಕಾರ. ಈ ಹೊತ್ತು ಈ ಮಾಸ ದಲ್ಲಿ ಈ ಪಕ್ಷದಲ್ಲಿ ಈ ತಿಥಿಯಲ್ಲಿ ಈ ಗೋತ್ರದವಳೂ, ಈ ಹೆಸರಿನವಳೂ, ಶ್ರೀಮತಿಯಾದ ನಾನು ಅರುಂಧತಿಯ ಹಾಗೆ ನಡೆದುಕೊಳ್ಳುವುದರಿಂದ ಉಂಟಾ ಗುವ ಸ್ವರ್ಗಲೋಕ ಮಹಿಮೆಯನ್ನು ಹೊಂದುವುದಕ್ಕೂ, ಮನುಷ್ಯ ಶರೀರದಲ್ಲಿ ಎಷ್ಟು ರೋಮಗಳಿರುವವೋ ಅಷ್ಟು ವರ್ಷ ಭರ್ತನೊಡನೆ ಸ್ವರ್ಗವಾಸ ಸುಖ ಅನುಭವಿಸುವುದಕ್ಕೂ, ತಾಯಿಯ ತಂದೆಯ ಮಾವನ ಈ ಮೂರು ವಂಶಗಳ ನ್ನು ಪವಿತ್ರಮಾಡುವುದಕ್ಕೂ, ಹದಿನಾಲ್ಕು ಇಂದ್ರರ ಕಾಲದವರೆಗೂ, ಅಪ್ಸರೋ ಗಣಗಳ ಸ್ತುತಿಯನ್ನು ಹೊಂದುತ್ತ, ಪತಿಸಹಿತವಾಗಿ ಕ್ರೀಡಿಸುವುದಕ್ಕೂ, ಬ್ರಹ್ಮ ಹತ್ಯೆ ಮಾಡಿದವನಾದರೂ ಕೃತಘ್ನನಾದರೂ ಮಿತ್ರದ್ರೋಹಿಯಾದರೂ ಭರ್ತ ನನ್ನು ಪವಿತ್ರನನ್ನಾಗಿ ಮಾಡುವುದಕ್ಕೂ ಬಯಸಿ, ಅಣಿಮಾಡಿದ ಭರ್ತನ ಚಿತಿಯ ನ್ನೇರುವೆನು" ಎಂದು ಮೇಲಿನ ಸಂಕಲ್ಪಕ್ಕೆ ಅರ್ಥವೆಂದು, ನಾನು ವಿವರವಾಗಿ ಬೋಧಿಸಿದೆನು. ಅರ್ಥ ಕೇಳಿದ ಮೇಲೆಯೂ ನಮ್ಮ ಉಪಾಧ್ಯಾಯನು ಸಹಗ ಮನವನ್ನು ಒಳ್ಳೆಯ ಕಾರ್ಯವೆಂದೊಪ್ಪದೆ, ಇಂತಹ ಸಂಕಲ್ಪವನ್ನು ಸ್ವಲ್ಪ ಸಂಸ್ಕೃ ತವೋದಿಕೊಂಡವರು ಯಾರೂ ಕಲ್ಪಿಸಬಹುದೆಂದು ಸಮಾಧಾನ ಹೇಳಿದನು. ಇದು ಕಲ್ಪನೆಯಲ್ಲವೆಂದೂ ಧರ್ಮಶಾಸ್ತ್ರಗಳಲ್ಲಿ,

ಶ್ಲೋ॥ ಮೃತೇಭರ್ತರಿಯಾನಾರೀ ಸಮಾರೋಹೇದ್ಧುತಾಶನಂ ।
ಸಾರುಂಧತೀಸಮಾಚಾರಾ ಸ್ವರ್ಗಲೋಕೇಮಹೀಯತೆ ॥ ಎಂದೂ

ಶ್ಲೋ॥ ಯಾಚಭರ್ತೃಪರಾನಿತ್ಯಂ ಸ್ತೂಯಮಾನಾಪ್ಸರೋಗಣೈಃ ।
ಕ್ರೀಡತೇಪತಿನಾಸಾರ್ಧಂ ಯಾವದಿಂದ್ರಾಶ್ಚತುರ್ದಶ ॥ ಎಂದೂ

ಪ್ರಮಾಣಗಳಿಲ್ಲವೆಂದೂ, ಪ್ರಮಾಣಬದ್ಧವಾದ ನಾವು ಶಾಸ್ತ್ರ ತಿರಸ್ಕಾರ ಮಾಡಕೂಡದೆಂದೂ ನಾನೆಷ್ಟು ವಾದಿಸಿದರೂ, ನನ್ನ ಮಾತುಗಳಲ್ಲಿ ಗೌರವವಿಡದೆ, ಮೂರ್ಖನಾದ ಆತನು, ಸರ್ವಕಾರುಣ್ಯನಾದ ಈಶ್ವರನು ಇಂತಹ ಕ್ರೂರಕೃತ್ಯ ವನ್ನು ವಿಧಿಸಿರನೆಂದೂ, ಇದೆಷ್ಟೂ ವಿತಂತುಗಳ ಧನವನ್ನಪಹರಿಸ ಕೋರಿ ಯೋ, ಮತ್ತೆಯಾವುದರ ದೆಸೆಯಿಂದಲೋ, ಸ್ವಪ್ರಯೋಜನಪರರಾದವರು ಮಾಡಿದ ಮೋಸವೆಂದೂ, ಯುಕ್ತಿಗೂ ನೀತಿಗೂ ವಿರೋಧವಾಗಿರುವ ಶಾಸ್ತ್ರ ಗಳನ್ನು ನಂಬಬಾರದೆಂದೂ, ಆತನು ಏನೇನೋ ಕುಯುಕ್ತಿಗಳನ್ನು ಕಲ್ಪಿಸು ವುದಕ್ಕೆ ತೊಡಗಿದನು. ಆ ಮಾತುಗಳಿಗೆ ನಾನು ಕಿವಿಗಳನ್ನು ಮುಚ್ಚಿಕೊಂಡು, ಹರಿನಾಮಸ್ಮರಣೆಮಾಡಿ, ಶಾಸ್ತ್ರ ವಿಶ್ವಾಸವಿಲ್ಲದ ನಾಸ್ತಿಕರೊಡನೆ ಸಂಭಾಷಿಸಿದರೆ ದೋಷ ಬರುವುದೆಂದೆಣಿಸಿ, ಈ ಪ್ರಸಂಗವನ್ನು ಅಷ್ಟರಲ್ಲಿಯೆ ನಿಲ್ಲಿಸಿದೆನು.

ಆತನು ಮಾತ್ರ ಸಹಗಮನದ ವಿಷಯವನ್ನು ಅಷ್ಟರಿಂದ ಬಿಡದೆ, ನನಗೆ ಇಷ್ಟವಿಲ್ಲವೆಂದು ಅದನ್ನು ದೂಷಿಸುವುದು ಮಾತ್ರ ಬಿಟ್ಟುಬಿಟ್ಟು, ಸಹಗಮನ ವನ್ನು ದೊರೆತನದವರು ನಿಲ್ಲಿಸುವುದಕ್ಕೆ ಮೊದಲು, ನಿಮ್ಮ ದೇಶದಲ್ಲಿ ಸಂವತ್ಸ ರಕ್ಕೆ ಎಷ್ಟು ಅನುಗಮನಗಳು ನಡೆಯುತ್ತಿದ್ದುವೆಂದೂ, ಈಗ ನಿಮ್ಮ ದೇಶದಲ್ಲಿ ಎಷ್ಟು ವಿತಂತುಗಳಿರುವರೆಂದೂ, ನಾನಾವಿಧದ ಪ್ರಶ್ನೆಗಳನ್ನು ಹಾಕುವುದಕ್ಕೆ ಮೊದಲುಮಾಡಿದನು. ನನಗೆ ವಿದ್ಯಾಗುರುವಾಗಿರುವ ದೊಡ್ಡ ಮನುಷ್ಯನು ಕೇಳದಮೇಲೆ ಪ್ರತ್ಯುತ್ತರ ಕೊಡದಿರುವುದು ಮೂರ್ಖತೆಯೆಂದೆಣಿಸಿ, ನನಗೆ ತಿಳಿ ದಷ್ಟರ ಮಟ್ಟಿಗೆ ಆತನು ಕೇಳಿದ ಪ್ರಶ್ನೆಗಳೆಲ್ಲವುಗಳಿಗೂ ನಾನು ಹೀಗೆ ಉತ್ತರಗಳನ್ನು ಹೇಳಿದೆನು.

“ ನಮ್ಮ ದೇಶದಲ್ಲಿ ಸಹಗಮನ ಸದಾಚಾರವನ್ನು ನಿಲ್ಲಿಸುವುದಕ್ಕಾಗಿ, ಮೊ ತ್ತಮೊದಲು ಮತಾಂತರಾದ ಕ್ರೈಸ್ತವ ಮತಾಚಾರ್ಯರು ಕ್ರಿ. ಶ. ೧೮೦೪ನೆಯ ಸಂವತ್ಸರದಲ್ಲಿ ಕಲಕತ್ತಾ ನಗರದೊಳಗೆ ಕೊಂಚ ಪ್ರಯತ್ನಮಾಡಿದರು. ಅವರು ಆ ವರ್ಷದಲ್ಲಿ ಹತ್ತು ಜನ ಮನುಷ್ಯರನ್ನು ನಿಯಮಿಸಿ,ಕಲಕತ್ತಾ ನಗರದ ಸುತ್ತಲೂ ಎರಡು ಯೋಜನದೊಳಗಣ ದೂರ ವುಳ್ಳ ಗ್ರಾಮಗಳಲ್ಲಿ ಸಹಗಮನ ಮಾಡಿದ ಪುಣ್ಯಸತಿಯರ ಲೆಕ್ಕ ಮಾಡಿಸಲಾಗಿ, ಆರು ತಿಂಗಳೊಳಗೆ ಮುನ್ನೂರು ಪತಿವ್ರತೆಯರು ಭರ್ತೃಗಳ ಚಿತಿಗಳನ್ನೇರಿ ಸ್ವರ್ಗಲೋಕ ನಿವಾಸಸುಖವನ್ನು ಸೂರೆಗೊಂಡ ಹಾಗೆ ತಿಳಿದುಬಂತು. ಆ ಸಂವತ್ಸರ ಮೊದಲ್ಗೊಂಡು, ಸಹಗಮನ ತಪ್ಪಿಸಿ ದೊರೆತನದವರು ಪಾಪಕಟ್ಟಿಕೊಳ್ಳುವ ವರೆಗಿನ ಇಪ್ಪತ್ತಯಿದು ವರ್ಷಗ

ಳಲ್ಲಿ, ಎಪ್ಪತ್ತು ಸಾವಿರ ವಿಧವೆಯರು, ನಮ್ಮ ದೇಶದಲ್ಲಿ ಭರ್ತೃಸಹಗಮನ ಮಾಡಿ ಪುಣ್ಯಲೋಕಗಳಿಗೆ ಹೋದ ಹಾಗೆ ದೊರೆತನದವರ ಲೆಕ್ಕದಿಂದಲೇ ತಿಳಿಯ ಬರುತ್ತಿದೆ. ಆ ಲೆಕ್ಕದಲ್ಲಿ ಸಿಕ್ಕದಿರುವ ಸ್ತ್ರೀಯರು ಎಷ್ಟು ಇರುವರೋ! ಇದರಿಂದ ನಮ್ಮ ದೇಶವು ದೇಶಗಳಲ್ಲೆಲ್ಲ ಪವಿತ್ರವಾದುದೆಂದೂ, ಪತಿವ್ರತಾಮಯವಾದುದೆಂದೂ, ಪುಣ್ಯಸತೀಭರಿತವಾದುದೆಂದೂ, ನಿಮಗೆ ತಿಳಿದು ಬರಬಹುದು. ಆ ಸಂಗತಿ ಹೋಗಲಿ. ಈಶ್ವರನು ನಮ್ಮಲ್ಲಿರುವುದರಿಂದ ಮತಾಂತರದವರಾದ ಕ್ರೈಸ್ತವಾಚಾರ್ಯರ ಅಲ್ಪಕೃಷಿ ಆಗ ಏನೂ ಕೊನೆಮುಟ್ಟಲಿಲ್ಲ. ಆ ತರುವಾಯ ರಾಮಮೋಹನರಾಯನೆಂಬ ಪತಿತನೊಬ್ಬನು ನಮ್ಮವರಲ್ಲಿಯೇ ಹೊರಟು, ಕ್ರಿ. ಶ. ೧೮೧೮ನೆಯ ವರ್ಷ ಮೊದಲ್ಗೊಂಡು ಸಹಗಮನವನ್ನು ನಿಲ್ಲಿಸುವುದಕ್ಕಾಗಿ ಮಹಾಕೃಷಿ ಮಾಡಲಾರಂಭಿಸಿದನು. ಒಂದು ಕಲಕತ್ತಾನಗರದಲ್ಲಿಯೆ ೧೮೧೫ನೆಯ ಸಂವತ್ಸರದಲ್ಲಿ ೨೫೩ ಜನರೂ, ೧೮೧೬ನೆಯ ವರ್ಷದಲ್ಲಿ ೨೮೯ ಜನರೂ, ೧೮೧೭ನೆಯ ವರ್ಷದಲ್ಲಿ ೪೪೨ ಜನರೂ, ೧೮೧೮ನೆಯ ವರ್ಷದಲ್ಲಿ ೫೪೪ ಜನರೂ, ೧೮೧೯ನೆಯ ವರ್ಷದಲ್ಲಿ ೪೨೧ ಜನರೂ, ೧೮೨೦ನೆಯ ವರ್ಷದಲ್ಲಿ ೩೭೦ ಜನರೂ, ೧೮೨೧ನೆಯ ವರ್ಷದಲ್ಲಿ ೩೭೨; ೧೮೨೨ನೆಯ ವರ್ಷದಲ್ಲಿ ೩೨೮; ೧೮೨೩ನೆಯ ವರ್ಷದಲ್ಲಿ ೩೪೦; ೧೮೨೪ ರಲ್ಲಿ ೩೭೩; ೧೮೨೫ ರಲ್ಲಿ ೩೯೮; ೧೮೨೬ ರಲ್ಲಿ ೩೨೪; ೧೮೨೭ ರಲ್ಲಿ ೩೩೭; ೧೮೨೮ ರಲ್ಲಿ ೩೦೯, ಮಹಾಪತಿವ್ರತೆಯರು ಚಿತಾರೋಹಣೆಮಾಡಿ, ಹದಿನಾಲ್ಕು ಇಂದ್ರರ ಕಾಲದ ವರೆಗೂ ಭರ್ತರೊಡನೆಕೂಡಿ, ಸ್ವರ್ಗಲೋಕಸುಖವನ್ನನುಭವಿಸುವುದಕ್ಕೆ ಹೋದರು. “ದೈವವು ದೋಷಕಾರಿಗಳಿಗೆಯೇ ಸಹಾಯವಾಗಿ ಬರುವುದು” ಎಂಬ ಸನ್ನುತೋಕ್ತಿ ಪ್ರಕಾರವಾಗಿ, ಮತಭ್ರಷ್ಟರ ಕೃಷಿಯನ್ನನುಸರಿಸಿ, ೧೮೨೯ನೆಯ ವರ್ಷದಲ್ಲಿ, ಆಗ ಪರಿಪಾಲಕನಾಗಿದ್ದ ಬೆಂಟಿಂಕು ಪ್ರಭುವು ಸಹಗಮನ ತಪ್ಪಿಸಿ, ಪ್ರತಿ ಸಂವತ್ಸರವೂ ಅಷ್ಟುಮಂದಿ ಪತಿವ್ರತೆಯರು ಪುಣ್ಯಲೋಕಗಳಿಗೆ ಹೋಗದಂತೆ ನಿರೋಧಿಸಿದ ಪುಣ್ಯಕಟ್ಟಿಕೊಂಡನು.

“ನಮ್ಮ ದೇಶದಲ್ಲಿ ೧೮೮೧ನೆಯ ವರ್ಷದಲ್ಲಿ ಪ್ರಭುತ್ವದವರು ಮಾಡಿಸಿದ ಜನಪರಿಗಣನೆಯ ಪ್ರಕಾರವಾಗಿ, ಸ್ವದೇಶ ಪ್ರಭುಗಳ ಸಂಸ್ಥಾನಗಳು ಹೊರತಾಗಿ ಇಂಗ್ಲೀಷು ರಾಷ್ಟ್ರದಲ್ಲಿ ೨೦೯೩೮೬೨೬ ವಿತಂತುಗಳಿರುವರು. ಈ ಸಂಖ್ಯೆಯಿಂದ ಒಟ್ಟಿನ ಮೇಲೆ ನಮ್ಮ ದೇಶದಲ್ಲಿ ಅಯಿವರು ಸ್ತ್ರೀಯರಿಗೆ ಒಬ್ಬೊಬ್ಬ

ವಿತಂತುವಿರುವಂತೆ ಕಾಣಬರುತ್ತಿದೆ. ಇನ್ನು ಬ್ರಾಹ್ಮಣರಲ್ಲಿಯೋ ಎಂದರೆ ಮೂವರು ಹೆಂಗಸರಿಗೆ ಒಬ್ಬಳಂತೆ ವಿಧವೆಯರಿರುವರು."

ಹೀಗೆ ನಾನು ಹೇಳಿದ ಈ ಸಂಗತಿ ಕೇಳಿದ ತರುವಾಯ, ೧೮೭೯ನೆಯ ಸಂವತ್ಸರದಲ್ಲಿಯೆ ಭರತಖಂಡವನ್ನು ಬಿಟ್ಟುಹೋದ ನನಗೆ ೧೮೮೧ನೆಯ ಸಂವತ್ಸರದಲ್ಲಿ ಹಿಂದೂ ದೇಶದಲ್ಲಿ ದೊರೆತನದವರು ಮಾಡಿಸಿದ ಜನಸಂಖ್ಯೆಯನ್ನು ಕುರಿತು ಹೇಗೆ ತಿಳಿದುದೆಂದು, ನನ್ನ ಸತ್ಯಚರಿತ್ರೆಯನ್ನೋದುವವರಲ್ಲಿ ಕೆಲವರಿಗೆ ಸಂದೇಹವುಂಟಾಗಬಹುದು. ಅದಕ್ಕೆ ಸರ್ವಜನ ಸಮಾದರಣೀಯವಾದ ಸಮಾಧಾನ ಹೇಳುವೆನು, ಕೇಳಿರಿ. ನಾನೀ ೧೮೮೧ನೆಯ ಸಂವತ್ಸರದಲ್ಲಿ ರಂಢೀದೇಶದಲ್ಲಿದ್ದ ಮಾತು ವಾಸ್ತವವೇ. ಆದರೂ ೧೮೮೦ನೆಯ ಸಂವತ್ಸರದಲ್ಲಿ ಭರತಖಂಡದಲ್ಲಿ ಮೊತ್ತಮೊದಲು ಬೊಂಬಾಯಿ ನಗರದಲ್ಲಿ ದಿವ್ಯಜ್ಞಾನಸಮಾಜವು ಸ್ಥಾಪಿಸಲ್ಪಟ್ಟುದೂ, ಅಂದಿನಿಂದ ಕೂಟುಹೂಮಿಯೆ ಮೊದಲಾದ ಮಹಾತ್ಮರು ದೂರದೇಶವಾರ್ತೆಗಳನ್ನು ತರುತ್ತಿರುವುದೂ, ನೀವೆಲ್ಲರೂ ತಿಳಿದೇ ಇರುವಿರಲ್ಲವೆ ! ಅಂತಹ ಸಂಗತಿಯಲ್ಲಿ ಬುದ್ಧಿವಂತರಾದ ನಿಮಗೆ ಬೇರೆಯಾಗಿ ತಿಳುಹ ಬೇಕಾದುದೇನಿದೆ? ನಿಮಗೆ ಈಗ ಹೆಸರನ್ನು ಹೇಳೆನಾದರೂ, ದಿವ್ಯಜ್ಞಾನಸಮಾಜದವರ ಮಹಾತ್ಮರೊಳಗೊಬ್ಬ ಮಹಾನುಭಾವನೇ ಈ ಹೊತ್ತಿನವರೆಗೂ ನಮ್ಮ ಭರತಖಂಡದಲ್ಲಿ ನಡೆಯುತ್ತಿರುವ ಸುವಾರ್ತೆಗಳನ್ನು ಆಗಾಗಲೇ ತಂದು ನನಗೆ ಅನುಗ್ರಹಿಸುತ್ತಿರುವನೆಂದು ಮಾತ್ರವೇ ನಿಮಗೆ ಸಂಶಯನಿವಾರಣಾರ್ಥವಾಗಿ ಹೇಳುವೆನು. ಈ ಸಂಭಾಷಣೆ ಮುಗಿದ ಬಳಿಕ ನಾವು ಪಾಠಶಾಲೆಯನ್ನು ಬಿಟ್ಟು ಮನೆಗೆ ಹೋದೆವು.

ಆ ತರುವಾಯ ರಂಢೀ ನಗರದಲ್ಲಿ ಹಿಂದೆ ಎಂದೂ ಇಲ್ಲದ ಪುರುಷವಿದ್ಯಾಭ್ಯಾಸವನ್ನು ಹೊಸತಾಗಿ ಸ್ಥಾಪಿಸುತ್ತಿರುವ ವಿಷಯವಾಗಿ ವಿದ್ಯಾವತಿಯರೆಲ್ಲರೂ ಸೇರಿ ಸಭೆಗಳನ್ನು ಮಾಡಲಾರಂಭಿಸಿದರು. ಆ ಸಭೆಗಳಲ್ಲಿ ಪೂರ್ವಾಚಾರ ವಿರುದ್ಧವಾಗಿ ಪುರುಷರಿಗೆ ವಿದ್ಯೆಕೊಡಿಸುವವರನ್ನೂ, ಅಂತಹವರಿಗೆ ಸಹಾಯಕರಾಗುವ ಎಲ್ಲರನ್ನೂ ಬಹಿಷ್ಕಾರಹಾಕಿ, ಮತಗುರುಗಳಿಗೆ ಬರೆದು ಬಹಿಷ್ಕಾರಪತ್ರಿಕೆಗಳನ್ನು ತರಿಸಬೇಕೆಂದು ನಿಶ್ಚಯಿಸಲಾದುದು. ಈ ಸಂಕ್ಷೋಭಕ್ಕೆ ಭಯಪಟ್ಟು ನನ್ನ ಮಿತ್ರನಾದ ಭಾಢೀಫೋಡನ ಅಕ್ಕನು ಆತನನ್ನು ಸಾಲೆ ಬಿಡಿಸಿದುದರಿಂದ, ನಮ್ಮ ಪಾಠಶಾಲೆಗೆ ನಾನೊಬ್ಬನೇ ವಿದ್ಯಾರ್ಥಿಯಾದೆನು. ನನ್ನ ಯಜಮಾನಗಿತಿಯಾದ ಘಾಂಡೀಭಂಗೀ ಮಾತ್ರ ಹೆದರದೆ ಧೈರ್ಯವಹಿಸಿ,

ನನ್ನನ್ನು ಪಾಠಶಾಲೆಗೆ ಕಳುಹುತ್ತಲೇ ಇದ್ದುದರಿಂದ, ಸಭಾಪತ್ನಿಯರೂ ಪಾರಮಹಾಕಾಂತೆಯರೂ ಸೇರಿ, ಸಭೆಯವರು ಆಕೆಗೆ ಬಹಿಷ್ಕಾರ ಹಾಕಿದರು. ಆ ತರುವಾಯ ನಡೆದ ಚರ್ಯೆಯನ್ನು ಮತ್ತೊಂದು ಪ್ರಕರಣದಲ್ಲಿ ವಿವರಿಸುವೆನು.

---

## ಏಳನೆಯ ಪ್ರಕರಣವು.

ಬಹಿಷ್ಕಾರಪತ್ರಿಕೆ ಬಂದ ತರುವಾಯ, ಫಾಂಡೀಭಾಂಗಿ ತನ್ನ ಪ್ರಯತ್ನಗಳನ್ನು ಬಿಡದೆ, ತನ್ನ ಮಿತ್ರೆಯರನ್ನು ರಾಜಕೀಯ ಪಾಠಶಾಲೆಯ ಮೇಲಣ ತರಗತಿಗಳಲ್ಲಿ ಓದಿಕೊಳ್ಳುವ ಬಾಲಿಕೆಯರನ್ನೂ ಸೇರುವಂತೆ ಮಾಡಿ, ಪುರುಷವಿದ್ಯಾಭ್ಯಾಸದ ಆವಶ್ಯಕತೆಯನ್ನು ಕುರಿತು ಉಪನ್ಯಾಸಗಳನ್ನು ಮಾಡತೊಡಗಿದಳು. ಆ ಉಪನ್ಯಾಸಗಳಿಂದಲೂ, ರಾಜಭಾಷಾಗ್ರಂಥಪಠನ ಮಹತ್ವದಿಂದಲೂ ಮನಸ್ಸು ಕರಗಿದವರಾಗಿ, ಕೆಲವು ಬಾಲಿಕೆಯರು, ಎಷ್ಟು ಕಷ್ಟಗಳನ್ನಾದರೂ ಸಹಿಸಿ, ಪುರುಷವಿದ್ಯಾಭಿವೃದ್ಧಿ ಮಾಡುವುದಕ್ಕೆ ನಿಶ್ಚಯಿಸಿಕೊಂಡು, ನನ್ನ ಯಜಮಾನಗಿತಿಗೆ ಸರ್ವ ವಿಧಗಳಿಂದಲೂ, ಸಹಾಯಮಾಡುತ್ತ, ಬಹಿಷ್ಕರಿಸಲ್ಪಟ್ಟ ಆಕೆಯೊಡನೆ ಕೂಡಿ ರಹಸ್ಯವಾಗಿ ಭೋಜನ ಮಾಡುವುದಕ್ಕಾರಂಭಿಸಿದರು. ಇದರಿಂದ ರಂಧೀ ನಗರದಲ್ಲಿ ಮತ್ತಷ್ಟು ಸಂಕ್ಷೋಭವುಂಟಾಯಿತು. ರಾಜಭಾಷೆಯ ದೆಸೆಯಿಂದ ಮಕ್ಕಳು ಕೆಟ್ಟುಹೋಗುತ್ತಿರುವರೆಂದು ಅವರೆಲ್ಲರನ್ನೂ ರಾಜಕೀಯ ಪಾಠಶಾಲೆಗೆ ಹೋಗಗೊಳಿಸದೆ ಬಿಡಿಸಿ, ಅವರಿಗೆ ರಂಧೀ ಮತವನ್ನು ಬೋಧಿಸಿ, ಅವರನ್ನು ಪೂರ್ವಸದಾಚಾರನಿಷ್ಠೆಯರನ್ನಾಗಿ ಮಾಡಬೇಕೆಂದೂ, ವಿದ್ಯಾವತಿಯರಿಂದ ವಾರಕ್ಕೆ ಎರಡು ಬಾರಿ ಬಾಲಿಕೆಯರಿಗೆ ಮತಬೋಧ ಮಾಡಿಸಬೇಕೆಂದೂ, ಲೌಕಿಕಾಧಿಕಾರದಲ್ಲಿರುವ ಪುರದ ಪ್ರಮುಖೆಯರು ನಿಶ್ಚಯಿಸಿ, ಸಭೆಗಳನ್ನು ಮಾಡಿಸಿದುದೇ ಅಲ್ಲದೆ, ತಮ್ಮ ಗ್ರಾಮಕ್ಕೆ ಒಂದು ಸಾರಿ ಜಿಜಯ ಮಾಡಿ ಜೀರ್ಣಮತೋದ್ಧಾರಣೆ ಮಾಡಬೇಕೆಂದು ಪೀಠಾಧಿವಾಸಿನಿಯಾದ ಮಠಾಧಿರಾಜ್ಞೆಗೆ ವಿಜ್ಞಾಪನೆ ಕಳುಹಿದರು. ನವನಾಗರಿಕೆಯರಿಗೆ ನಮ್ಮ ಯಜಮಾನಗಿತಿ ನಾಯಿಕೆಯಾದ ಹಾಗೆಯೇ ಪೂರ್ವಾಚಾರಪರಾಯಣೆಯರಾದ ಪೂರ್ವನಾಗರಿಕ ಪಕ್ಷದವರಿಗೆ ಡುಂಢೀಲಂಧೀಯೆಂಬಾಕೆ ನಾಯಿಕೆಯಾಗಿ, ತನ್ನ ಮಾವ

ಶಕ್ತಿಯನ್ನೂ ವಿನಿಯೋಗಿಸಿ, ಸಂಸ್ಕಾರಪಕ್ಷದವರನ್ನು — ಮುಖ್ಯವಾಗಿ ತತ್ವಜ್ಞಾನುಸಾರಿಣಿಯರಾದ ಬಾಲಿಕೆಯರನ್ನು — ಬಾಧಿಸಿ, ಪೂರ್ವಾಚಾರಸ್ಥಾಪನೆ ಮಾಡುವುದಕ್ಕೆ ಮೊದಲು ಮಾಡಿದಳು. ಢುಂಢೀಲಂಢಿ ಆ ಪಟ್ಟಣಕ್ಕೆ ಪ್ರಾಡ್ವಿವಾಕಿನಿಯಾದವಳು. ರಾಜಕೀಯೋದ್ಯೋಗದಲ್ಲಿರುವುದರಿಂದ, ನವನಾಗರಿಕ ಪಕ್ಷಾವಲಂಬಕರಾದ ದೊರೆತನದವರಿಗೆ ವಿರೋಧವಾಗಿ ಕೆಲಸಮಾಡುವುದಕ್ಕೆ ಇಷ್ಟವಿಲ್ಲದವಳಾಗಿ, ತಾನು ಮರೆಯಲ್ಲಿ ಕಪಟನಾಟಕಕ್ಕೆ ಸೂತ್ರಧಾರಿಣಿಯಾಗಿದ್ದು, ಆಕೆ ಆ ಗ್ರಾಮದಲ್ಲಿ ತುಂಬಾ ಕರ್ಮಠಳೆಯೆಂದು ಪ್ರಸಿದ್ಧಿ ಹೊಂದಿದ, ಗಂಭೀದಂಭಿಯನ್ನು ನಾಯಿಕೆಯಾಗಿ ಮಾಡಿದಳು. ಈ ಗಂಭೀದಂಭಿ ಲೋಕದೊಳಗಣ ಕರ್ಮಠೆಯರಲ್ಲಿ ಅಗ್ರಗಣ್ಯೆ. ಪ್ರಾತಃಕಾಲದಲ್ಲಿ ಸ್ನಾನಮಾಡಿ, ಮೂಗು ಹಿಡಿದು ಕುಳಿತುಕೊಂಡಿದ್ದು, ಪ್ರತಿದಿನವೂ ಹಗಲು ಎರಡು ಯಾಮಗಳವರೆಗೆ ಬೊಗರಿಯ ಬೀಜಗಳ ಜಪಮಾಲೆ ತಿರಿಗಿಸುತ್ತ ಜಪಮಾಡುವಳು. ನಮ್ಮ ದೇಶದಲ್ಲಿ ರುದ್ರಾಕ್ಷಿಗಳು ಹೇಗೋ ಹಾಗೆ, ಆ ದೇಶದಲ್ಲಿ ಬೊಗರಿಯ ಬೀಜಗಳು ಮಹಾಪವಿತ್ರವಾದವುಗಳು. ಇಲ್ಲಿನ ಹಾಗೆ ಅಲ್ಲಿ ವಿಭೂತಿ ಧರಿಸರು. ನಮ್ಮ ದೇಶದಲ್ಲಿನ ಹಾಗೆ, ಮೂರು ರೇಖೆಗಳಾಗಿ ಮಾಡದೆ, ಒಂದೇ ರೇಖೆಯಾಗಿ ಲಲಾಟದಲ್ಲೆಲ್ಲ ಭೂರೇಣುವನ್ನು ಬಳದುಕೊಳ್ಳುವರು. ಅದರಲ್ಲಿ ಶೋಣಮೃತ್ತಿಕೆ ಪರಮಪಾವನವಾದುದು ; ಅದು ದೊರೆಯದೆ ಹೋದರೆ ನದಿಗಳಲ್ಲಿರುವುದಾದರೂ, ಅದೂ ಸಿಕ್ಕದಿದ್ದರೆ ಕೊಳಗಳಲ್ಲಿರುವುದಾದರೂ, ಅದೂ ಸಿಕ್ಕದಿದ್ದರೆ ಬಾವಿಯೊಳಗಣದಾದರೂ, ಯಾವ ಮೃತ್ತಿಕೆಯನ್ನಾದರೂ ಧರಿಸ ಬಹುದು. ನಮ್ಮ ಗಂಭೀದಂಭಿ ಒಂದು ಲಲಾಟದಲ್ಲಿ ಮಾತ್ರವೆಯಲ್ಲದೆ ದೇಹದೊಳಗೆಲ್ಲ ಕೆಂಪುಮಣ್ಣನ್ನೇ ಬಳದುಕೊಂಡು, ಹೂತ ಮುತ್ತುಗದ ಮರದಂತೆ ಕಣ್ಣಿಗೆ ಹಬ್ಬವಾಗಿ ಕಾಣುವಳು. ಆಕೆಗಿರುವ ಭಕ್ತಿ ಅಷ್ಟಿಷ್ಟೆಂದು ಹೇಳಲಳವಲ್ಲ. ಆಕೆ ದೇವತಾರ್ಪಣವಾಗಿಯೆ ಅಲ್ಲದೆ ಯಾವ ಕೆಲಸವನ್ನೂ ಮಾಡಳು. ಆಕೆ ದೇವತಾನಿವೇದನೆ ಮಾಡದೆ ಕಳ್ಳನ್ನಾದರೂ ಕುಡಿಯಳು ; ಮಾಂಸವನ್ನಾದರೂ ತಿನ್ನಳು ; ದೇವತಾರ್ಪಣೆಮಾಡದೆ ಚೌರ್ಯವನ್ನಾದರೂ ಮಾಡಳು. ಸಾವಿರವೇಕೆ ? ಆಕೆ ತನ್ನ ದೇಹವನ್ನು ದೇವತಾಸಮರ್ಪಣೆ ಮಾಡಿಯೇ ವ್ಯಭಿಚರಿಸುವಳು ; ತನ್ನ ಜಿಹ್ವೆಯನ್ನು ದೇವತಾಸಮರ್ಪಣೆಮಾಡಿಯೇ ಸುಳ್ಳಾಡುವಳು ; ಆತ್ಮಕರ್ತೃಕತ್ವವನ್ನಿಟ್ಟುಕೊಳ್ಳದೆ ಕರ್ಮನಿಷ್ಠರು ನಮ್ಮ ದೇಶದಲ್ಲಿ “ ತತ್ಸತ್ ಬ್ರಹ್ಮಾರ್ಪಣಮಸ್ತು” ಎಂದು ಕರ್ಮಗಳೆಲ್ಲವನ್ನೂ ಬ್ರಹ್ಮಾರ್ಪಣೆ ಮಾಡುವಹಾಗೆ, ಆಕೆಯೂ ತನ್ನ ಕರ್ಮಗಳ

ಷ್ಟನ್ನೂ ಸ್ವದೇವತೆಗೆ ಧಾರೆಯೆರೆಯುವಳು. ಆದುದರಿಂದ ಆಕೆ ಈ ಕೆಲಸ ವನ್ನೂ ತನ್ನ ಇಷ್ಟದೇವತಾಪ್ರೀತಿಗಾಗಿಯೇ ಮಾಡಲು ದೀಕ್ಷೆ ವಹಿಸಿದುದ ರಿಂದ, ಅಭೀಷ್ಟಸಿದ್ಧಿಗಾಗಿ ಪ್ರತಿಪಕ್ಷದವರ ವಿಷಯದಲ್ಲಿ ಯಾವ ದಾರುಣಕೃತ್ಯ ಮಾಡುವುದಕ್ಕೂ ಆಕೆಗೆ ಪಾಪಭಯವಿಲ್ಲ. ಆದರೂ ದೊರೆತನದವರ ಭಯವಿರು ವುದರಿಂದ, ಒಳಗಿನಿಂದೊಳಗೆ ಎಷ್ಟು ಕೆಲಸಗಳನ್ನು ಮಾಡಿದರೂ, ತತ್ಪಕ್ಷದವರು ಪ್ರತ್ಯಕ್ಷವಾಗಿ ಪ್ರತಿಪಕ್ಷದವರ ತಲೆಗಳನ್ನು ಜೋರಾಗಿ ಹೊಡೆದು ದಾರ್ಢ್ಯಮಾ ಡುವುದಕ್ಕೆ ಮಾತ್ರ ಸಾಹಸಿಸಜಿದ್ದರು. ರಾಜಕೀಯೋದ್ಯೋಗಿನಿಯರಾದ ರಂಥಿ ದೇಶನಿವಾಸಿನಿಯರು ಹಲವರಿಗೆ ಇನ್ನೊಂದು ಕಷ್ಟವೂ ಬಂತು. ಅವರು ಆ ಮೇಲೆ, ಸತ್ಯಪ್ರಿಯರಾದ ನವನಾಗರಿಕಾಗ್ರಗಣ್ಯರಹಾಗೆ ನಟಿಸಿ, ತಮ್ಮ ಮೇಲಧಿಕಾರಿಣಿಯರ ಒಪ್ಪಿಗೆ ಹೊಂದಬೇಕು; ಈಬೆಗೆ ಪೂರ್ವಮತಾಭಿ ಮಾನ ಮಾನನೀಯರಾದ ಹಾಗೆ ನಟಿಸಿ, ಮೂಢ ಪ್ರಜೆಗಳನ್ನು ಸಂ ತೋಷ ಪಡಿಸಬೇಕು. ಮಧ್ಯದಲ್ಲಿ, ತಮ್ಮ ಹೃದಯಗಳೆಲ್ಲ ನವನಾಗರಿಕ ಪಕ್ಷವಾಗಿಯೆ ಇರುವುದರಿಂದ ಸಂಸ್ಕಾರಗಳನ್ನು ಮೆಲ್ಲಗೆ ಸ್ಥಾಪಿಸುವ ನಿಮಿತ್ತವೇ ಮೇಲಕ್ಕೆ ಪೂರ್ವನಾಗರಿಕ ಪಕ್ಷವನ್ನವಲಂಬಿಸಿದ ಹಾಗೆ ನಡೆಯ ಬೇಕಾಗಿ ಬಂದು ದೆಂದು, ನವನಾಗರಿಕೆಯರಿಗೆ ಸಮಾಧಾನಹೇಳಬೇಕು. ಆದುದರಿಂದ ಅವರು ನಾಟಕಗಳಲ್ಲಿ ನಟರಹಾಗೆ ಮೂರು ಕಡೆಯಲ್ಲಿ ಮೂರು ವಿಧದ ವೇಷಗಳನ್ನು ಹಾಕಿಕೊಂಡು ಪರಸ್ಪರ ವಿರುದ್ಧವಾದ ಮೂರು ಕಥೆಗಳನ್ನು ಕೇಳಸಬೇ ಕಾದ ಸಾಮರ್ಥ್ಯವನ್ನು ವಹಿಸಿದವರಾದರು. ಇವರು ಅದರಲ್ಲಿಯೂ ನಂಬಿಕೆಯಿ ಲ್ಲದವರಾಗಿ, ದುರಭಿಮಾನ ದೇವರನ್ನೂ ದುಶ್ಚಿಂತಾದೇವಿಯನ್ನೂ ಮಾತ್ರವೇ ಭಕ್ತಿಯಿಂದ ಸೇವಿಸುವವರಾದುದರಿಂದ, ತತ್ಪ್ರೀತಿಕರವಾಗಿ ಅವರು ಶ್ರದ್ಧೆಯಿಂ ದ ಮಾಡಿದುದೆಲ್ಲವೂ ಸಾಧುಸಂತಾಪ ಪ್ರಯತ್ನವಲ್ಲದೆ ಮತ್ತೊಂದಾಗಿ ಕಾಣದು.

ಮನೆಯಲ್ಲಿ ತಾಯಿ ತಂದೆಯರು ಬಾಲಿಕೆಯರನ್ನು ಬಾಧಿಸುತ್ತ, ಪುರುಷ ವಿದ್ಯಾಭ್ಯಾಸವೊಳ್ಳೆಯದೆಂದರೂ, ಒಳ್ಳೆಯದೆಂದು ಹೇಳುವರ ಪಕ್ಷದೊಡನೆ ಸೇರಿ ದರೂ, ಮನೆಗಳಿಂದ ಹೊರಗಟ್ಟುವೆವೆಂದು ಬೆದರಿಸಿದುದರಿಂದ, ಅವರಲ್ಲಿ ಕೆಲವರು ವಾದಮಾಡುವುದನ್ನೂ, ನವನಾಗರಿಕರೊಡನೆ ಮಾತನಾಡುವುದನ್ನೂ ಬಿಟ್ಟುಬಿಟ್ಟ ರು. ಕೆಲವರ ತಾಯಿಯರು ಅಷ್ಟರಿಂದಲಾದರೂ ಸುಮ್ಮನಾಗದೆ ಪಾಠಗಳನ್ನು ಬಿಡಿಸಿ, ಪಂಚಕಾಲಗಳಲ್ಲಿಯೂ 'ಮಿಥಾ' ಮಾಡಬೇಕೆಂದು ಬಾಲಿಕೆಯರನ್ನು ನಿ ರ್ಬಂಧ ಪಡಿಸಲಾರಂಭಿಸಿದರು. 'ಮಿಥಾ' ಎಂದರೆ ನಮ್ಮ ದೇಶದಲ್ಲಿಯ ಸಂಧ್ಯಾ

ವಂದನದಂತಹ ನಿತ್ಯಕರ್ಮವು; ಈ ನಿತ್ಯಕರ್ಮವನ್ನು ಪ್ರತಿಯೊಬ್ಬ ಸ್ತ್ರೀಯೂ, ಪ್ರಾತಃಕಾಲ, ಪೂರ್ವಾಹ್ಣ, ಮಧ್ಯಾಹ್ನ, ಅಪರಾಹ್ಣ, ಸಾಯಂಕಾಲಗಳೆಂಬ ಪಂಚಕಾಲಗಳಲ್ಲಿಯೂ ತಪ್ಪದೆ ಮಾಡಬೇಕು. ಅದನ್ನು ಮಾಡದವರಿಗೆ ಗತಿಗ ಳಿಲ್ಲ. ಆದರೂ ಪಟ್ಟಣಗಳಲ್ಲಿರುವವರು ಕೆಲವರು 'ಮಿಥಾ' ಮಾಡುವ ಹಾಗೆ ನಟಿ ಸುವರೇ ಹೊರತು ನಿಜವಾಗಿ ಮಾಡುವವರು ಯಾರೂ ಇಲ್ಲ. ಜನನೀಜನಕರ ನಿರ್ಬಂಧ ಹೆಚ್ಚಾಗುತ್ತ ಬರಲು, ಬಾಲಿಕೆಯರು ತಮಗೆ 'ಮಿಥಾ' ಹೇಳಬೇಕೆಂದು ಅವರನ್ನೇ ಕೇಳುವುದಕ್ಕೆ ಮೊದಲುಮಾಡಲು. ಅವರು ತಮ್ಮ ಗುಟ್ಟು ಬಯಲಾಗ ದಂತೆ, ಮೊದಲು ಕೋಪಮಾಡುತ್ತಲೂ, ತರುವಾಯ ತಮಗೆ ವಿರಾಮವಿಲ್ಲವೆಂ ದೂ ಉಪೇಕ್ಷೆಮಾಡಿ, ಕಡೆಗೆ ಮಾಡದೆ ಹೋದರೂ 'ಮಿಥಾ' ಮಾಡುತ್ತೇ ವೆಂದು ಹೇಳಿಕೊಣಮ್ಮ ತ್ತಿಕಾಧಾರಣವನ್ನು ಮಾತ್ರ ಮಾಡಿದರೆ ಸಾಕೆಂದು ಹೇಳಿದರು. ಮತ್ತು ಕೆಲವರು ತಾವು 'ಮಿಥಾ' ಕಲಿತುಕೊಳ್ಳಬೇಕೆಂದು ಪುರೋಹಿತೆಯನ್ನು ಕರೆಯಿಸಿಕೇಳಿದರು. ಪುರೋಹಿತೆಯೂ ಕೊಂಚ ಹೊತ್ತು ಆಲೋಚಿಸಿ, ತನ್ನ ನಿಮಿತ್ತವಾಗಿ ಗ್ರಾಮದಲ್ಲಿರುವ ತನ್ನ ತಂಗೆ ಮಿಥಾಮಾಡುತ್ತಿ ರುವುದರಿಂದ, ಪಟ್ಟಣಗಳಲ್ಲಿ ವಾಡಿಕೆಯಾಗಿ ಇಲ್ಲದುದನ್ನು ತಾನು ಕಲಿತುಕೊಳ್ಳ ಬೇಕಾದ ಅವಶ್ಯಕವಿಲ್ಲದೆ ಹೋದುದೆಂದೂ, ಪಟ್ಟಣಗಳಲ್ಲಿ ಉಪಯುಕ್ತನಾದ ಅರ್ಥಶಾಸ್ತ್ರವನ್ನೇ ತಾನು ಅಭ್ಯಸಿಸಿದೆನೆಂದೂ, ತಕ್ಕಷ್ಟು ಧನಕೊಡುವ ಪಕ್ಷ ದಲ್ಲಿ ಗ್ರಾಮದಿಂದ ತನ್ನ ತಂಗೆಯನ್ನು ಕರೆಯಿಸುವೆನೆಂದೂ ಹೇಳಿದಳು. ಸೂರ್ಯ ಕರತಾಪದಿಂದ ನೀರು ಆರಿಹೋಗುವ ಹಾಗೆ ಧನದ ಹೆಸರು ಹೇಳಿದೊಡನೆ ಅವರ ಮನಸ್ಸರೋವರದಲ್ಲಿ ಉದ್ಗಮವಾದ ಮಿಥಾಭ್ಯಾಸಾಭಿಲಾಷೆಯು ಪ್ರವಾಹವಾಗಿ ಹೋಯಿತು. ಅರ್ಥಶಾಸ್ತ್ರವೆಂದರೇನೋ ನಿಮ್ಮಲ್ಲಿ ಕೆಲವರಿಗೆ ತಿಳಿಯದೆ ಹೋಗಬಹುದು. ಅಪತ್ನೀಕರೇ ಮೊದಲಾದವರಿಂದ ನೋಹಿಗಳು ವ್ರತಗಳು ಮೊದಲಾದುವನ್ನು ಮಾಡಿಸಿ ಅವರಿಂದ ಧನವನ್ನು ಗ್ರಹಿಸುವ ಶಾಸ್ತ್ರವೇ ಅರ್ಥಶಾಸ್ತ್ರವು.

ಪುರುಷವಿದ್ಯಾಭ್ಯಾಸಕ್ಕೆ ಆಧಾರನಾಗಿ 'ಗಾಥಾ' ಎಂದು ಹೇಳಲ್ಪಡುವ ಅವರ ವೇದಗಳಲ್ಲಿ ಪ್ರಮಾಣವಿದೆ ಎಂದು ನವನಾಗರಿಕೆಯರು ಎಲ್ಲಿಯದೋ ಒಂದು ವಚನವನ್ನು ತೆಗೆದುಕೊಂಡು ಬಂದರು. 'ಮಿಥಾ'ಕ್ಕೆ ಹೇಗೆಯೋ ಹಾ ಗೆಯೇ 'ಗಾಥಾ'ಕ್ಕೆ ಅರ್ಥವೇನೂ ಇಲ್ಲವೆಂದೂ, ಇದ್ದರೂ ವೇದವು ದೇವಭಾಷೆ ಯಾದುದರಿಂದ ಅದರ ಅರ್ಥವು ದೇವತೆಗಳಿಗಲ್ಲದೆ ಮನುಷ್ಯರಿಗೆತಿಳಿಯದೆಂದೂ,

ಹೀಗಾದುದರಿಂದ ಪೂರ್ವದಲ್ಲಿ ಪುರುಷವಿದ್ಯೆ ಇತ್ತೆಂದು ವೇದಪ್ರಮಾಣಗಳನ್ನು ತೋರಿಸಿದವರ ಮಾತು ಅಂಗೀಕಾರ್ಯವಲ್ಲವೆಂದೂ, ಪುಣ್ಯಕ್ಕಾಗಿ ವೇದಮಂತ್ರಗಳನ್ನು ಸುಮ್ಮನೆ ಕರ್ಮಗಳು ಮೊದಲಾದುವುಗಳಲ್ಲಿ ಪಠಿಸಬೇಕೇ ಹೊರತು ಅದರ ಅರ್ಥದೊಡನೆ ಕೆಲಸವಿಲ್ಲವೆಂದೂ, ವಿದ್ಯಾವತಿಯರು ವಾದಿಸ ತೊಡಗಿದರು. ಆ ವಾದದಲ್ಲಿ ಪಂಡಿತ ಪಂಡಿತೆಯರೊಳಗೆ ವೇದಕ್ಕೆ ಅರ್ಥವಿದೆಯೇ ಇಲ್ಲವೇ ಎಂಬ ಮೀಮಾಂಸೆಯೊಂದು ಅವಾಂತರವಾಗಿ ಹುಟ್ಟಿತು. ಆಗ ಪಂಡಿತೆಯರೊಳಗೆ ಮೂರುಪಾಲು ವೇದಗಳಿಗೆ ಅರ್ಥವೇ ಇಲ್ಲವೆಂದೂ, ಅರ್ಥವಿರುವಹಾಗೆ ತಾವು ಎಂದಾದರೂ ಹಿರಿಯರಿಂದ ಕೇಳಲಿಲ್ಲವೆಂದೂ, ಅರ್ಥವಿರುವ ಪಕ್ಷದಲ್ಲಿ ಜನರು ಒಬ್ಬರಾದರೂ ಏಕೆ ಅಭ್ಯಸಿಸರೆಂದೂ, ಅರ್ಥವಿಲ್ಲದೆ ಹೋದುದರಿಂದಲೇ ಅದಕ್ಕಾ ಪೂಜ್ಯತೆ ಬಂತೆಂದೂ, ವಾದಿಸಿ, ಅರ್ಥವಿಲ್ಲವೆಂದೇ ಸಿದ್ಧಾಂತಮಾಡಿದರು. ಒಂದು ಭಾಗದವರು ಮಾತ್ರ ಆ ಕಾಲದಲ್ಲಿ ಮನುಷ್ಯರಿಗಾರಿಗೂ ತಿಳಿಯದೆ ಹೋದರೂ ವೇದಗಳಿಗೆ ಅರ್ಥವುಂಟೆಂದೂ, ವೇದಗಳಿಗರ್ಥವಿದೆಯೆಂದು ತಮ್ಮ ತಾತ ಮುತ್ತಾತಂದಿರು ತಮ್ಮೊಡನೆ ಹೇಳಿದಹಾಗೆ ತಮ್ಮ ತಾತಂದಿರಿಂದ ಚಿಕ್ಕತನದಲ್ಲಿ ಕೇಳಿದೆವೆಂದೂ, ವೇದಾರ್ಥಗಳೇ ಶಾಸ್ತ್ರಗಳೆಂದು ಶಾಸ್ತ್ರಗಳಲ್ಲಿಯೇ ಹೇಳಿರುವುದೆಂದೂ, ವಾದಿಸಿದರಾದರೂ ಅಧಿಕಸಂಖ್ಯೆಯಿದ್ದುದರಿಂದ ಅವರವಾದವು ಪೂರ್ವಪಕ್ಷವಾಗಿ ಮಾಡಲ್ಪಟ್ಟಿತು. ಆ ಸಭೆಯಲ್ಲಿ ನವನಾಗರಿಕೆಯೊಬ್ಬಳು ಎದ್ದುನಿಂತು, ದೊರೆತನದವರು ನಮ್ಮ ಪೂರ್ವಗ್ರಂಥಗಳನ್ನು ಸಂಪಾದಿಸುವುದಕ್ಕೆ ಪ್ರಯತ್ನ ಮಾಡುತ್ತಿರುವರೆಂದೂ, ಒಂದು ಪುರಾತನ ದೇವಾಲಯದಲ್ಲಿ ಮೂಲೆಗೆ ಬಿದ್ದಿದ್ದ ಜೀರ್ಣತಾಳಪತ್ರಪುಸ್ತಕಗಳ ಕಟ್ಟನ್ನು ಬಿಚ್ಚಿ ಶೋಧಿಸಲಾಗಿ, ಅದರಲ್ಲಿ ವೇದಕ್ಕೆ ವ್ಯಾಖ್ಯಾನವೊಂದು ಕಂಡುಬಂತೆಂದೂ, ಅವರದನ್ನು ಪರಿಶೀಲಿಸಿ ಮುದ್ರಿಸುತ್ತಿರುವರೆಂದೂ, ವೇದಗಳಿಗೆ ಅರ್ಥವುಂಟೆಂದೂ ಹೇಳಿದಳು. ಆಕೆಯ ಮಾತುಗಳನ್ನು ವಿದ್ಯಾವತಿಯರಾರೂ ನಂಬದೆ, ಸ್ವದೇಶಸ್ಥರಿಗೂ ದೊರೆಯದ ಪುಸ್ತಕವವರಿಗೆ ದೊರೆತಿರಲಾರದೆಂದೂ, ದೊರೆತರೂ ವಿದ್ಯಾವತಿಯರಿಂದ ಮಾಡಲಾಗದ ಅರ್ಥವವರಿಗಾಯಿತೆಂದರೆ ನಂಬಕೂಡದೆಂದೂ, ದೇವಾಲಯದ ಹಳೆಯಪುಸ್ತಕಗಳೊಳಗಣದೆಂದು ಹೇಳಿ ಏನೋ ಅರ್ಥ ಕಲ್ಪಿಸಿ, ಮುದ್ರಿಸುತ್ತಿರುವರೆಂದೂ, ಮುದ್ರಿತ ಗ್ರಂಥವನ್ನು ಮುಟ್ಟಿದರೂ, ಪಾಪ ಬರುವುದರಿಂದ ಅದನ್ನೋದಿದ ಕೆಲವರನ್ನು ಬಹಿಷ್ಕಾರಮಾಡಲಿಕ್ಕೆ ಶೀಘ್ರ ಕಾಲದೊಳಗೆ ಗ್ರಾಮಕ್ಕೆ ಬಿಜಯಮಾಡಲುಳ್ಳ ಜಗದ್ಗುರುಗಳನ್ನು ಪ್ರಾರ್ಥಿಸಬೇಕೆಂದೂ ಏಕಕಂಠವಾಗಿ ನಿಶ್ಚಯ ಮಾಡಿಕೊಂಡರು.

ಹೀಗೆ ಸಭೆಗಳು ನಡೆಯುತ್ತಿದ್ದಾಗಲೇ ಜಗದ್ಗುರುಗಳು ತಾವು ಬಿಜಯಮಾಡುವಹಾಗೆ ಸಭಾಪತ್ನಿಯರಿಗೆ ಶ್ರೀಮುಖವನ್ನು ಕಳುಹಿದರು. ಶ್ರೀಮುಖದ ಹಿಂದೆಯೇ ಶ್ರೀಯವರು ಕುದುರೆಗಳೊಡನೆಯೂ ಆನೆಗಳೊಡನೆಯೂ ವಾದ್ಯಗಳೊಡನೆಯೂ ಬಿಜಯಮಾಡಿದರು. ಆಗ ಮನೆಮನೆಗಳಲ್ಲಿ ಭಿಕ್ಷೆಗಳು ನಡೆಯಲಾರಂಭವಾಯಿತು. ಉದ್ಯೋಗದಲ್ಲಿರುವ ಪ್ರತಿಯೊಬ್ಬರು ಮೂರು ಮೂರು ತಿಂಗಳ ಸಂಬಳವನ್ನು ಪಾದಪೂಜೆಯಾಗಿ ಸಮರ್ಪಿಸ ಬೇಕಾಯಿತು. ಮನೆಮನೆಗಳಲ್ಲಿ ನಾಸಿಕಾ ಮಹೋತ್ಸವಗಳು ನಡೆಯಲಾರಂಭವಾಯಿತು. ಆ ನಾಸಿಕಾಮಹೋತ್ಸವಗಳಲ್ಲಿ ಮೊತ್ತಮೊದಲು ನನ್ನ ಸಹಾಧ್ಯಾಯಿಯಾದ ಭಾಡೀಘೋಡನ ಮೂಗು ತುಂಡಾಯಿತು. ಇತರ ಸಮಯಗಳಲ್ಲಿ ಜೋಳುತಲೆಯಿಲ್ಲದೆ ಹೋದರೂ, ಸ್ವಾಮಿಯವರು ಬಂದಾಗ ನಮ್ಮ ದೇಶದಲ್ಲಿ ಬಾಲವಿತಂತುಗಳ ಶಿರೋಜಗಳನ್ನು ಸಹ ತೆಗೆಯಿಸಿ ಹಾಕುವ ಹಾಗೆ, ಆ ದೇಶದಲ್ಲಿ ಜಗದ್ಗುರುಗಳು ಬಂದಾಗ ಅಪತ್ನೀಕರ ಮೂಗುಗಳನೆಲ್ಲ ಕಡಿದು ಬಿಡುವರು. ಜಗದ್ಗುರುಗಳು ಅಲ್ಲಿರುವ ಕಾಲದಲ್ಲಿ ಒಂದು ಸಭೆಮಾಡಿ ಆ ಸಭೆಗೆ ನನ್ನ ಯಜಮಾನಗಿತಿಯಾದ ಘಾಂಢೀಭಾಂಗಿಯನ್ನು ಕರೆಯಿಸಿದರು. ಆಗ ಪುರುಷವಿದ್ಯಾಭ್ಯಾಸ ಕೂಡದೆಂದು ಯಾವ ಶಾಸ್ತ್ರದಲ್ಲಿ ಹೇಳದೆಯೆಂದು ಘಾಂಢೀಭಾಂಗಿ ಜಗದ್ಗುರುಗಳನ್ನು ಪ್ರಶ್ನೆ ಮಾಡಿದಳು. ನಿತ್ಯವೂ ಭಿಕ್ಷೆಗಳು ಅಧಿಕವಾಗಿ ಮಾಡುತ್ತಿರುವುದರಿಂದ ಜಗದ್ಗುರುಗಳಿಗೆ ಹಿಟ್ಟು ಹೋಳಿಗೆಗಳ ನಾಮಗಳೇ ಹೊರತು ಪುಸ್ತಕಗಳ ಹೆಸರು ಬಾರದುದರಿಂದ, ಆ ಪ್ರಶ್ನೆಗೆ ಉತ್ತರ ಹೇಳಬೇಕೆಂದು ಅವರು ಆಸ್ಥಾನ ವಿದ್ಯಾವತಿಯರಾದ ಶಿಷ್ಯೆಯರಿಗೆ ಆಜ್ಞೆಮಾಡಿದರು. ಆ ಮಹಾ ವಿದ್ಯಾವತಿಯರು ಕೂಡ ಕೊಂಚ ಹೊತ್ತು ಆಲೋಚಿಸಿ, ತಾವು ಸ್ವಸ್ಥಾನಕ್ಕೆ ಹೋದ ತರುವಾಯ ಮೂಲಪೀಠದ ಬಳಿಯಲ್ಲಿರುವ ಅನಾದಿಗ್ರಂಥವನ್ನು ತೆಗದು ಪುಸ್ತಕಗಳ ಹೆಸರುಗಳನ್ನು ಹಿಂದಿನಿಂದ ಕಳುಹುವೆವೆಂದು ಹೇಳಿ ತಪ್ಪಿಸಿಕೊಂಡರು, ಹೆಂಡಕುಡಿಕರಿಗೂ ಮಾಂಸಭಕ್ಷಕರಿಗೂ ವ್ಯಭಿಚಾರಿಗಳಿಗೂ ಬಹಿಷ್ಕಾರವಿಲ್ಲದೆ ಲೋಕಾಭಿವೃದ್ಧಿಗಾಗಿ ಯತ್ನಿಸುತ್ತಿರುವ ತಮಗೆ ನಿಷ್ಕಾರಣವಾಗಿ ಬಹಿಷ್ಕಾರವಿಡುವುದು ಏನು ನ್ಯಾಯವೆಂದು ನನ್ನ ಯಜಮಾನಗಿತಿ ಭಯಪಡದೆ ಜಗದ್ಗುರುಗಳನ್ನು ಕೇಳದಳು. ಆಗ ತದಾಸ್ಥಾನ ಪಂಡಿತೆಯರಲ್ಲಿ ಒಬ್ಬ ವೃದ್ಧಾಂಗನೆ ನಿಂತುಕೊಂಡು ಶಾಸ್ತ್ರೋಕ್ತ ಪ್ರಕಾರವಾಗಿ ನಡೆದುಕೊಳ್ಳುವವರನ್ನು ಏಕೆ ಬಹಿಷ್ಕರಿಸಬೇಕೆಂದೂ,

"ಮಾಷೇ ಮಾಘೋ ಮಾಶೇ ಮಾಥೇ
ಮಾಭೇ ಮಾಪೋ ಮಿಪೋ ಮಿಪೋ"

ಎಂಬ ಶಾಸ್ತ್ರ ಪ್ರಮಾಣದಿಂದ ಮೇಲಣ ಕೆಲಸಗಳನ್ನು ಮಾಡಿದವರು ದೋಷಿಗಳಲ್ಲವೆಂದೂ ಸಮಾಧಾನ ಹೇಳಿದಳು. ಆ ಪ್ರಮಾಣವಚನಕ್ಕರ್ಥವೇನೋ ಅಪ್ಪಣೆ ಕೊಡಬೇಕೆಂದು ನಾನು ಬೇಡಿಕೊಳ್ಳಲಾಗಿ, ಆ ಮಹಾಪಂಡಿತೆ ನನ್ನಲ್ಲಿ ಅನುಗ್ರಹಿಸಿ "ಮದ್ಯ, ಮಾಂಸ, ಮತ್ಸ್ಯ, ಮುದ್ರ, ಮೈಥುನವೆಂಬೀ ಮಕಾರಗಳು ಮಹಾಪಾಪ ನಿಕಾರಗಳೆಂದು ಹೇಳಿದಳು. ಈಯೊಂದು ವಚನದಿಂದಲೇ

ಶ್ಲೋ॥ "ಮದ್ಯಂ ಮಾಂಸಂಚ ಮತ್ಸ್ಯಂಚ ಮುದ್ರಾ ಮೈಥುನಮೇವಚ ।
ಮಕಾರಪಂಚಕಂಚೈವ ಮಹಾಪಾತಕ ನಾಶನಂ ॥"

ಎಂಬ ಪ್ರಾಣತೋಷಿಣೀ ಗ್ರಂಥದೊಳಗಣ ಶ್ಲೋಕವು ನನ್ನ ಸ್ಮರಣೆಗೆ ಬಂದು, ಈ ರಂಢೀ ಶಾಸ್ತ್ರಗಳೆಲ್ಲವೂ ಹಿಂದೂ ಶಾಸ್ತ್ರಗಳಿಂದಲೇ ತೆಗೆಯಲ್ಪಟ್ಟವುಗಳೆಂದೂ, ಅವರ ವೇದವೂ ನಮ್ಮ ವೇದದ ಶಾಖೆಯೇ ಎಂದೂ, ನಾನು ನಿಶ್ಚಯ ಮಾಡಿಕೊಂಡೆನು. ಆಗ ನೀತಿಗೆ ವಿರುದ್ಧವಾದ ಶಾಸ್ತ್ರವು ಹೇಗೆ ಪ್ರಮಾಣವಾಗುವುದೆಂದು ನನ್ನ ಯಜಮಾನಗಿತಿ ಆ ವಿದ್ಯಾವತಿಯನ್ನು ನಿಶ್ಶಂಕವಾಗಿ ಕೇಳಿದಳು. ಆಗಲಾಕೆ ಅತ್ಯಾಗ್ರಹಾವೇಶಗೊಂಡವಳಾಗಿ, ಶಾಸ್ತ್ರ ತಿರಸ್ಕಾರಮಾಡಿದುದಕ್ಕಾಗಿ ಮತ್ತೊಂದು ಬಹಿಷ್ಕಾರ ಪತ್ರಿಕೆಯನ್ನು ಕಳುಹುವೆನೆಂದು ಭಯಪಡಿಸಿ, ಅಂತಹ ನಾಸ್ತಿಕರ ಮುಖ ನೋಡಿದರೂ ಪಾಪ ಬರುವುದೆಂದು ಕೋಪಗೊಂಡು; ಈ ಅನರ್ಥವೆಲ್ಲವೂ ರಾಜಕೀಯ ಪಾಠಶಾಲೆಯಲ್ಲಿ ಓದುವುದರ ದೆಸೆಯಿಂದ ಬಂದುದಾದುದರಿಂದ, ದೊರೆತನದವರ ಸಾಲೆಗೆ ಮಕ್ಕಳನ್ನು ಕಳುಹುವೆಲ್ಲರಿಗೂ ಶಿಕ್ಷೆ ವಿಧಿಸಬೇಕೆಂದು ಶ್ರೀಜಗದ್ಗುರುಗಳೊಡನೆ ಅರಿಕೆ ಮಾಡಿ, ತತ್ಕ್ಷಣವೇ ನನ್ನ ಯಜಮಾನಗಿತಿಯನ್ನು ಗುರುಸಾನ್ನಿಧ್ಯದಿಂದ ತಳ್ಳಿಸಿಬಿಟ್ಟಳು. ಜಗದ್ಗುರುಗಳವರೂ ಧನಲಕ್ಷ್ಮೀಪ್ರಿಯರಾದುದರಿಂದ, ಶಿಷ್ಯರ ಮಾತಿನಂತೆ ದೊರೆತನದವರ ಪಾಠಶಾಲೆಗೆ ಮಕ್ಕಳನ್ನು ಕಳುಹುವ ಎಲ್ಲರೂ ಹತ್ತು ಹತ್ತು ಸುವರ್ಣಗಳನ್ನು ಅಪರಾಧವಾಗಿ ಸಲ್ಲಿಸಬೇಕೆಂದೂ, ಸಲ್ಲಿಸುವವರೆಗೂ ಗ್ರಾಮದಲ್ಲಿ ಯಾರೂ ಅವರ ಮನೆಗಳಿಗೆ ಶುಭಾಶುಭ ಕಾರ್ಯಗಳಿಗೆ ಹೋಗಕೂಡದೆಂದೂ, ಕೂಡಲೇ ಸಭಾಪಾಲಿನಿಯರ ಹೆಸರಿನ ಶ್ರೀಮುಖಗಳನ್ನು ಕಳುಹಿದರು. ಆದರೆ ಸಭಾಪಾಲಿನಿಯರ ಬಾಲಿಕೆಯರಲ್ಲಿಯೂ ಕೆಲವರು ರಾದ

ಭಾಷೆಯನ್ನೋದಿಕೊಳ್ಳುತ್ತಿದ್ದುದರಿಂದ ಅವರಾ ಶ್ರೀಮುಖಗಳನ್ನು ಅಷ್ಟೊಂದು ಆದರಿಸಲಿಲ್ಲ. ಇಷ್ಟಾಗಿ ರಂಥೀ ನಗರದಲ್ಲಿ ಆ ಜಗದ್ಗುರುಗಳಿಗೆ ಒಟ್ಟಿಗೆ ಶಿಷ್ಯಕುಟುಂಬಗಳು ನೂರು ಮಾತ್ರವಿವೆ. ಆದರೂ ತನ್ಮತಾವಲಂಬಿಗಳು ಮಾತ್ರವೇ ತುಂಬಾ ಓದಿಕೊಂಡವರಾಗಿಯೂ, ಧನಿಕರಾಗಿಯೂ, ಕೈಕೊಂಡ ಕಾರ್ಯಗಳನ್ನು ತಪ್ಪದೆ ನಡೆಯಿಸಿಕೊಳ್ಳ ತಕ್ಕ ಶಕ್ತಿಯುಳ್ಳವರೂ ಆಗಿ ಇರುವರು. ಈ ಜಗದ್ಗುರು ಪೀಠ ಸ್ಥಾಪಕಿಯಾದ ಶ್ರೀ ಶ್ರೀ ಶ್ರೀ ಆದಿಜಂಘಾಮುಂಘಾರಂಘಾ ದೇವಿಯವರು ಪೂರ್ವಕಾಲದಲ್ಲೆಂದೋ ಹದಿನಾರು ಮತಗಳನ್ನುದ್ಧರಿಸಿದುದರಿಂದ ತತ್ಪೀಠಕ್ಕೆ ಬಂದ ಎಲ್ಲರಿಗೂ ಷೋಡಶಮತೋದ್ಧಾರಿಣಿ ಎಂಬ ಬಿರುದು ಪಾರಂಪರ್ಯವಾಗಿ ಬರುತ್ತಿದೆ. ಆದುದರಿಂದಲೇ ಈ ಪೀಠದವರು ಜಗದ್ಗುರುಗಳೆಂದೂ, ಉಳಿದ ಎಲ್ಲಾ ಮತದವರೂ ತಮಗೆ ಶಿಷ್ಯಪ್ರಾಯರೇ ಎಂದೂ ಹೇಳಿಕೊಳ್ಳುವರು. ಆ ಮತಗಳ ಹೆಸರುಗಳೆಲ್ಲವನ್ನೂ ತಿಳುಹುವುದರಿಂದ ನನಗೆ ವೃಥಾಯಾಸವೇ ಹೊರತು ಅದರಿಂದ ನಿಮಗೇನೂ ಲಾಭವಿಲ್ಲ. ಇಂತಹ ಬಿರುದುಗಳು ಆ ದೇವಿಗೆ ಮೂರು ಸಾವಿರದ ಮುನ್ನೂರ ಮೂವತ್ತ ಮೂರು ಉಂಟು. ಆ ದೇವಿಯವರು ಹದಿನಾರು ಮತಗಳನ್ನುದ್ಧರಿಸಿದರೂ, ಅವೆಲ್ಲವುಗಳಲ್ಲಿಯೂ ಜಂಘಾ ಮತವೇ ಸರ್ವೋತ್ತಮವಾದುದೆಂದು ಸ್ಥಾಪಿಸಿದರು. ಆ ಮತಸಿದ್ಧಾಂತಗಳು ಹೆಚ್ಚುಕಡಿಮೆ ನಮ್ಮ ದೇಶದಲ್ಲಿಯ ಶಾಕ್ತಮತ ಸಿದ್ಧಾಂತಗಳಿಗೆ ಹೋಲುವವು. ಭೇದವೆಲ್ಲವೂ ನಮ್ಮಲ್ಲಿರುವ ಸ್ತ್ರೀಯೆಂಬುದನ್ನು ತೆಗೆದುಬಿಟ್ಟು ಅವರು ಆ ಸ್ಥಳದಲ್ಲಿ ಪುರುಷರನ್ನಿಟ್ಟುಕೊಳ್ಳುವಿಕೆಯೆ. ಅದರಲ್ಲಿಯೂ ಮಧ್ಯಪಾನವಿದೆ; ಮಾಂಸಭಕ್ಷಣವಿದೆ; ಸಂಭೋಗವಿದೆ; ಮುದ್ರೆಗಳಿವೆ. ಇದೆಲ್ಲವನ್ನೂ ನೋಡಲಾಗಿ ಅವರು ತಮ್ಮ ಶಾಸ್ತ್ರವನ್ನು ನಮ್ಮ ಆಗಮತಂತ್ರಗಳಿಂದ ಕದ್ದುಕೊಂಡ ಹಾಗೆತೋರುವುದು. ನಮ್ಮ ಮುದ್ರೆಗಳೆಲ್ಲಕ್ಕೂ ಪ್ರಧಾನವಾದ 'ಹ್ಸ' ಎಂಬ ಪ್ರಾಸಾದಮುದ್ರೆಯನ್ನೂ ಶ್ರೀ ಚಕ್ರವನ್ನೂ ಅವರು ತೆಗೆದುಕೊಂಡುದರಿಂದ, ಅವರು ತಮ್ಮ ಮತವನ್ನೂ ನಮ್ಮ ಪಂಚಾಮ್ನಾಯವಾದ ತಂತ್ರದಿಂದಲೇ ತಸ್ಕರಿಸಿದರೆಂಬುದು ನಿಶ್ಚಯವು. ಆಗ ಬಂದ ಆ ಜಗದ್ಗುರುಗಳಿಗೆ ಮೂವತ್ತು ವರ್ಷವಯಸ್ಸು; ಆ ದೇವಿಯವರು ರೂಪದಿಂದಲೂ ಚೆಲುವೆಯರೆಂದೇ ಹೇಳಬಹುದು. ಆಕೆ ಪ್ರತಿದಿನವೂ ಜಂಘಾಪೂಜೆ ಮಾಡುವರು. ಈ ಉಪಾಸನೆ ಸ್ತ್ರೀಗೆ ಬದಲಾಗಿ ಪುರುಷನಿಗೆ ಹಾಕಿದ ಪಕ್ಷದಲ್ಲಿ, ಸಮಸ್ತ ವಿಷಯಗಳಲ್ಲಿಯೂ ನಮ್ಮ ದೇಶದಲ್ಲಿ ವೀರರೆನ್ನಿಸುವ ಮಹಾಭಕ್ತಾಗ್ರೇಸರರು ಮಾಡುವ ಉಪಾಸನೆಯೊಡನೆ ಸರಿಹೋಲು

ವುದರಿಂದ ನೀವು ಚೆನ್ನಾಗಿ ತಿಳಿಯುವದಕ್ಕಾಗಿ ನಮ್ಮದನ್ನು ಪ್ರಮಾಣವಚನ ಪೂರ್ವಕವಾಗಿ ಇಲ್ಲಿ ಕೊಂಚ ವಿವರಿಸುವೆನು. ಶಾಕ್ತೇಯಾಚಾರಗಳಲ್ಲಿಯುದಾದ ಇದು ವಾಮಾಚಾರವು; ಇದನ್ನಾಚರಿಸುವವರು ಕೌಲಿಕರೆನ್ನಿಸುವರು; ಕೌಲಿಕರೆಂದರೆ ಉತ್ತಮ ಕುಲೀನರೆಂದರ್ಥವು. ಈ ಪದದಿಂದಲೆ ಇವರ ಶ್ರೇಷ್ಠತ್ವ ಪ್ರಸಿದ್ಧವಾಗುವುದಾದರೂ, ಪ್ರಮಾಣವಾದಿಗಳಾದ ನಿಮ್ಮ ತೃಪ್ತಿಗಾಗಿ ಪರಮಪ್ರಮಾಣವಾದ ಶ್ಯಾಮಾ ರಹಸ್ಯ ತಂತ್ರದಿಂದ ವಾಮಾಚಾರದ ಮತ್ತು ಕೌಲಸಿದ್ಧಾಂತದ ಸರ್ವೋತ್ಕೃಷ್ಟತೆಯನ್ನು ಸ್ಥಾಪಿಸುವ ಪ್ರಮಾಣಗಳನ್ನುದಾಹರಿಸುವೆನು.

ಶ್ಲೋ|| ಸರ್ವೇಭ್ಯಶ್ಚೋತ್ತಮಾವೇದಾ ವೇದೇಭ್ಯೋವೈಷ್ಣವಂಪರಂ ।
ವೈಷ್ಣವಾದುತ್ತಮಂಶೈವಂ ಶೈವಾದ್ದಕ್ಷಿಣಮುತ್ತಮಂ ।
ದಕ್ಷಿಣಾದುತ್ತಮಂವಾಮಂ ವಾಮಾತ್ಸಿದ್ಧಾಂತಮುತ್ತಮಂ ।
ಸಿದ್ಧಾಂತಾದುತ್ತಮಂಕೌಲಂ ಕೌಲಾತ್ಪರತರಂನಹಿ ||

"ಎಲ್ಲವುಗಳಲ್ಲಿಯೂ ವೇದಗಳುತ್ತಮ; ವೇದಗಳಿಗಿಂತಲೂ ವೈಷ್ಣವವುತ್ತಮವು; ವೈಷ್ಣವಕ್ಕಿಂತಲೂ ಶೈವವುತ್ತಮವು; ಶೈವಕ್ಕಿಂತಲೂ ದಕ್ಷಿಣಾಚಾರವುತ್ತಮವು; ದಕ್ಷಿಣಾಚಾರಕ್ಕಿಂತಲೂ ವಾಮಾಚಾರವುತ್ತಮವು; ವಾಮಾಚಾರಕ್ಕಿಂತಲೂ ಸಿದ್ಧಾಂತವುತ್ತಮವು; ಸಿದ್ಧಾಂತಕಿಂತಲೂ ಕೌಲವುತ್ತಮವು; ಕೌಲಕ್ಕಿಂತಲೂ ಶ್ರೇಷ್ಠತರವಾದುದಿಲ್ಲ" ಎಂದು ಮೇಲಣ ಪ್ರಮಾಣವಚನಗಳಿಗೆ ಅರ್ಥವು. ಈಗ ಕೌಲದ ಶ್ರೇಷ್ಠತ್ವ ಸ್ಥಾಪನವಾದುದರಿಂದ, ಕೌಲಾಚಾರವನ್ನು ಸಪ್ರಮಾಣವಾಗಿ ಶಕ್ತಿಶೋಧನತಂತ್ರದಲ್ಲಿ ಹೇಳದ ರೀತಿಯಾಗಿ ಕೊಂಚ ವಿವರಿಸುವೆನು :—

ಶ್ಲೋ|| ನಟೀಕಾಪಾಲಿನೀವೇಶ್ಯಾ ರಜಕೀ ನಾಪಿತಾಂಗನಾ ।
ಬ್ರಾಹ್ಮಣೀಶೂದ್ರಕನ್ಯಾಚ ತಥಾಗೋಪಾಲಕನ್ಯಕಾ ।
ಮಾಲಾಕಾರಸ್ಯಕನ್ಯಾಪಿ ನವಕನ್ಯಾಃಪ್ರಕೀರ್ತಿತಾಃ ।
ಏತಾಸುಕಾಂಚಿದಾನೀಯ ಪೂಜಯೇಚ್ಛಕ್ತಿಕೌಲಿಕಃ ||

* * * * *

ಮಹಾನಿಶಾಯಾಮಾನೀಯ ನವಕನ್ಯಾಶ್ಚಭೈರವಾನ್ ।

* * * * *

ತದೀಯಮಂತ್ರಮಾಲಿಖ್ಯ ತಸ್ಮಿನ್ನಾಮೇವಪೂಜಯೇತ್ ।

ಶ್ರೀಚಕ್ರೇಸ್ಥಾಪಯೇದ್ವಾಮೇ ಕನ್ಯಾಂಭೈರವವಲ್ಲಭಾಮ್ ।
ಮುಕ್ತಕೇಶಾಂವೀತಲಜ್ಜಾಂ ಸರ್ವಾಭರಣಭೂಷಿತಾಮ್ ।
ಆನಂದಲೀನಹೃದಯಾಂ ಸೌಂದರ್ಯಾತಿಮನೋಹರಾಮ್ ।
ಶೋಧಯೇಚ್ಛುದ್ಧಿಮಂತ್ರೇಣ ಸುರಾನಂದಾಮೃತಾಂಬುಭಿಃ॥

* * * * *

ಆನಂದತರ್ಪಿತಾಂಕಾಂತಾಂ ವೀರಃ ಸ್ವಾನಂದವಿಗ್ರಹಃ ।
ರತೇನತರ್ಪಯೇತ್ತತ್ರ ಶ್ರೀಚಕ್ರೇವೀರಸಂಸದಿ ।

* * * * *

ಪೀತ್ವಾಪೀತ್ವಾಪುನಃಪೀತ್ವಾ ಯಾವಲ್ಲುಠತಿಭೂತಲೇ ।
ಉತ್ಥಾಯಚಪುನಃಪೀತ್ವಾ ಪುನರ್ಜನ್ಮನವಿದ್ಯತೇ ॥

ಇನ್ನೂ ಅಸಹ್ಯಕರವಾಗಿರುವುವೆಂದು ಕೆಲವು ಪ್ರಮಾಣವಚನಗಳನ್ನು ತೆಗೆದು ಬಿಟ್ಟುದಕ್ಕಾಗಿ ಓದುವವರು ನನ್ನನ್ನು ಮನ್ನಿಸಬೇಕು. "ನಟಿ, ಕಾಪಾಲಿನಿ, ವೇಶ್ಯೆ, ಅಗಸಿತಿ, ನಾಪಿತೆ, ಬ್ರಾಹ್ಮಣಿ, ಶೂದ್ರಿತಿ, ಗೊಲ್ಲತಿ, ಮಾಲೆಗಾರ್ತಿ, ಇವರು ನವಕನ್ಯೆಯರೆನ್ನಿಸುವರು ; ಇವರಲ್ಲಿ ಒಬ್ಬಾಕೆಯನ್ನು ತೆಗೆದುಕೊಂಡು ಬಂದು ಕೌಲಿಕನು ಶಕ್ತಿಪೂಜೆ ಮಾಡಬೇಕು. ಅರ್ಧರಾತ್ರಿಯಲ್ಲಿ ನವಕನ್ಯೆಯರನ್ನು ತಂದು......ತತ್ಸಂಬಂಧವಾದ ಮಂತ್ರಗಳನ್ನು ಬರೆದು ಅವಳನ್ನು ಪೂಜಿಸಬೇಕು. ಶ್ರೀಚಕ್ರದ ವಾಮಭಾಗದಲ್ಲಿ, ತಲೆಕೂದಲನ್ನು ಬಿಚ್ಚಿದವಳೂ, ದಿಗಂಬರೆಯೂ, ಸರ್ವಾಭರಣಭೂಷಿತೆಯೂ, ಆನಂದಲೀನ ಹೃದಯೆಯೂ, ಸೌಂದರ್ಯಾತಿ ಮನೋಹರೆಯೂ, ಆದ ಆ ಭೈರವೀ ಕನ್ಯೆಯನ್ನು ನಿಲ್ಲಿಸಿ, ಸುರಾನಂದಾಮೃತಜಲದಿಂದ ಶುದ್ಧಿಮಂತ್ರದೊಡನೆ ಶುದ್ಧೆಯಾಗಿ ಮಾಡಬೇಕು. ಆನಂದವಿಗ್ರಹನಾದ ವೀರನು ಆನಂದತರ್ಪಿತೆಯಾದಾ ಕಾಂತೆಯನ್ನು ಶ್ರೀ ಚಕ್ರದಲ್ಲಿ ರತಿಯಿಂದ ತೃಪ್ತಿಹೊಂದಿಸಬೇಕು. ಕುಡಿದು ಕುಡಿದು ಭೂಮಿಯಮೇಲೆ ಬೀಳುವವರೆಗೂ ಕುಡಿದು ಎದ್ದು ತಿರಿಗಿ ಕುಡಿದು ಪುನರ್ಜನ್ಮವಿಲ್ಲದವನಾಗುವನು" ಎಂದು ಮೇಲಣ ಪ್ರಮಾಣವಚನಗಳ ತಾತ್ಪರ್ಯವು. ಈ ಪ್ರಕಾರವಾಗಿಯೆ ಅಲ್ಲಿ ಜಗದ್ಗುರುಗಳವರು ನಿಶೀಥಸಮಯದಲ್ಲಿ ಶ್ರೀ ಚಕ್ರದಲ್ಲಿ ಪ್ರಾಸಾದ ಮುದ್ರೆಯನ್ನು ಇಟ್ಟು, ಈಶ್ವರಾತ್ಮಕವಾಗಿ ಒಬ್ಬ ಯೌವ್ವನ ಪುರುಷನನ್ನು ಪೂಜಿಸಿ, ಸಂಭೋಗಿಸಿ, ಸುರಾಪಾನಮಾಡಿ, ಆನಂದಪರವಶರಾಗುತ್ತಿರುವರಂತೆ ! ನಮ್ಮ ದೇಶದಲ್ಲಿಯ ಹಾಗೆಯೇ ಆ ದೇಶದಲ್ಲಿಯೂ ಶಾಸ್ತ್ರವಿ

ಶ್ವಾಸವೂ ಮತಧರ್ಮ್ಮಾಚರಣೆಯೂ ಕಡಿಮೆಯಾಗಿರುವುದರಿಂದ, ಜಗದ್ಗುರುಗಳೇ ಮತಧರ್ಮ್ಮವನ್ನು ಸ್ವಾಚರಣೆಯಿಂದ ತೋರಿಸುವ ವರೆಗೂ, ಅದನ್ನು ಜನರು ಮರೆತು ಹೋದ ಹಾಗೆಯೇ ಇರುವುದಲ್ಲದೆ, ನಾನಿದ್ದಕಾಲದಲ್ಲಿ ರಂಥೀ ನಗರದಲ್ಲಿ ಈ ಆಚಾರಕಂಡು ಬರಲೇ ಇಲ್ಲ. ಇದು ಕಲಿಮಹಿಮೆಯೆಂದು ಗುರುಗಳ ಅಭಿಪ್ರಾಯವು.

ಪ್ರಾಸಾದ ಮಂತ್ರಮಹಿಮೆ ಮಂತ್ರವಿಶ್ವಾಸವಿಲ್ಲದ ನವನಾಗರಿಕರಿಗೆ ತಿಳಿಯದೆ ಹೋಗ ಬಹುದಾದುದರಿಂದ ಅವರ ಉಪಯೋಗನಿಮಿತ್ತವಾಗಿ ಸಪ್ರಮಾಣವಾಗಿ ಕುಲಾರ್ಣವ ತಂತ್ರದಿಂದ ತಿಳುಹುವೆನು. ಇದರಿಂದಲೇ ನನ್ನದು ಅಪ್ರಾಮಾಣಿಕವಾದುವಲ್ಲವೆಂದೂ, ಸರ್ವ್ವಜನ ಸಮಾದರಣೀಯವೆಂದೂ ಬುದ್ಧಿಮಂತರು ಗ್ರಹಿಸಬಹುದು.

ಶ್ಲೋ॥ ಶ್ರೀಪ್ರಾಸಾದಪರಾಮಂತ್ರ ಮೂರ್ದ್ಧ್ವಾಮ್ನಾಯೆಪ್ರತಿಷ್ಠಿತಮ್ ।
ಆದಯೋಃಪರಮಾಕಾರಂ ಯೋವೇತ್ತಿಸಶಿವಃಸ್ವಯಂ ।
ಶಿವಾದಿಕ್ರಿಮಿಪರ್ಯ್ಯಂತಂಪ್ರಾಣಿನಾಂ ಪ್ರಾಣವರ್ತ್ತನಾಂ ।
ನಿಶ್ವಾಸೋಚ್ಛ್ವಾಸರೂಪೇಣ ಮಂತ್ರೋಯಂ ವರ್ತ್ತತೇಪ್ರಿಯೇ ॥.

ಎಂದು ಕೇವಲ ಸದಾಶಿವನೇ ಶ್ರೀ ಮಹಾದೇವಿಗೆ "ನಮ್ಮಿಬ್ಬರ ಪರಮಾಕಾರವಾದುದಾಗಿಯೂ, ಊರ್ಧ್ವಾಮ್ನಾಯ (ತಂತ್ರ) ಪ್ರತಿಷ್ಠಿತ ವಾದುದಾಗಿಯೂ ಇರುವ ಶ್ರೀ ಪ್ರಾಸಾದ ಮಂತ್ರವನ್ನು ಯಾರು ತಿಳಿಯುವನೋ ಅವನೇ ಶಿವನು. ಎಲೌಪ್ರಿಯೆ ! ಶಿವಾದಿಕ್ರಿಮಿ ಪರ್ಯ್ಯಂತವಾಗಿರುವ ಜೀವಜಂತುಗಳಲ್ಲಿ ನಿಶ್ವಾಸೋಚ್ಛ್ವಾಸರೂಪದಿಂದ ಈ ಮಂತ್ರವು ವರ್ತಿಸುವುದು" ಎಂದು ಉಪದೇಶಿಸಿರುವನು. "ಹ್ಸ" ಎಂಬ ಪ್ರಾಸಾದಮಂತ್ರದಲ್ಲಿ ಹಕಾರವೂ ನಿಶ್ವಾಸರೂಪವೆಂದೂ, ಸಕಾರವೂ ಉಚ್ಛ್ವಾಸರೂಪವೆಂದೂ ತಿಳಿಯಬೇಕು. ಶಾಸ್ತ್ರಪ್ರಮಾಣವಿರುವುದರಿಂದ ನಮ್ಮ ಪುರುಷರಲ್ಲಿ ಇದು ಸದಾಚಾರವೇ ಆದರೂ ಸ್ತ್ರೀಯರಲ್ಲಿ ಮಾತ್ರವಿದು ದುರಾಚಾರವೆಂದು ನಾನು ಭಾವಿಸುವೆನು. ಆ ದೇಶದಲ್ಲಿ ಹೇಗೋ ಸ್ತ್ರೀಯರು ಸರ್ವ್ವಸ್ವತಂತ್ರರಾಗಿ ತಮಗೆ ಅನುಕೂಲವಾಗುವಂತೆ ಶಾಸ್ತ್ರಗಳನ್ನು ಹೆಚ್ಚುಕಡಿಮೆ ಮಾಡಿದುದರಿಂದ ಈ ಅನರ್ಥವಷ್ಟೂ ಹುಟ್ಟಿತು. ಆ ಸಂಗತಿ ಬಿಟ್ಟು ಕಥಾಂಶವನ್ನು ಕೇಳಿರಿ.

ಸಭಾಪಾಲಿನಿಯರು ಶ್ರೀ ಜಗದ್ಗುರುಗಳ ಆಜ್ಞೆಯನ್ನು ಅಷ್ಟೊಂದು ಮನ್ನಿಸದೆ ಹೋದುದನ್ನೂ, ಅದರಿಂದ ಮತಧರ್ಮ್ಮಗಳು ಆಚರಣೆಯಿಲ್ಲದೆ ಕೆಟ್ಟು

ಹೋಗಬೇಕಾದ ಗತಿ ಸಂಭವಿಸುವುದನ್ನೂ, ನೋಡಿ ಖೇದಪಟ್ಟು, ಗಂಭೀ ದಂಭಿಯು ಜೀರ್ಣಮತೋದ್ಧಾರಣೆಗೂ ಗುರುಭಕ್ತಿ ನಿಲ್ಲಿಸುವುದಕ್ಕೂ ಸಭೆ ಮಾಡಿ, ಪೂರ್ವಾಚಾರ ಶಾಸ್ತ್ರ ಮಹಿಮೆಗಳನ್ನು ಭೂಷಿಸುತ್ತ, ನವನಾಗರಿಕೆಯರನ್ನು ದೂಷಿಸುತ್ತ ದೊಡ್ಡ ಉಪನ್ಯಾಸ ಮಾಡಿದಳು. ಅದು ಬಹಳ ದೊಡ್ಡದಾದುದರಿಂದ ಅದರ ಕಡೆಯ ಭಾಗವನ್ನು ಮಾತ್ರವೇ ಈ ಹೊತ್ತು ಭಾಷಾಂತರಿಸುವೆನು :—

“ ಓ ಮಹಾಕಾಂತೆಯರಿರಾ ! ನನ್ನ ಉಪನ್ಯಾಸವನ್ನು ಕೇಳಿದಿರಲ್ಲವೇ ? ಪ್ರಜೆಗಳು ಹೇಗೆ ಕೆಟ್ಟು ಹೋಗುತ್ತಿರುವರು ನೋಡಿದಿರಾ ? ನವನಾಗರಿಕೆಯರ ದೆಸೆಯಿಂದ ದೇಶಕ್ಕೆವುಂಟಾಗುತ್ತಿರುವ ಅನರ್ಥಗಳನ್ನು ಕಂಡಿರೇ ? ಅವರು ಈಗ ವಿದ್ಯೆ ಬೇಕೆಂಬರು ; ನಾಳೆ ಅಪತ್ನೀಕರ ಮೂಗುಗಳನ್ನು ಕೊಯ್ಯಕೂಡದೆಂಬರು ; ಆ ಮೇಲೆ ಪುಣ್ಯಪುರುಷರನ್ನು ಕಬ್ಬಿಣದ ಪೆಟ್ಟಿಗೆಗಳಲ್ಲಿ ಹಾಕಿ ಬೀಗ ಹಾಕಕೂಡದೆಂಬರು ; ಆ ಬಳಿಕ ವೃದ್ಧಪುರುಷರು ಪತ್ನಿಯರೊಡನೆ ಸಹಗಮನ ಮಾಡಕೂಡದೆಂಬರು ; ಕಟ್ಟಕಡೆಗೆ ಅಪತ್ನೀಕರಾದ ಪುರುಷರು ಮರಳಿ ವಿವಾಹಮಾಡಿಕೊಳ್ಳಬೇಕೆಂಬರು. ಇಷ್ಟಕ್ಕೆ ಬಂದುದು ಇನ್ನೆಷ್ಟಕ್ಕೂ ಬಾರದಿರದು. ಆ ದುಷ್ಟೆಯರ ಪ್ರಯತ್ನಾಂಕುರಗಳನ್ನು ಚಿಗುರಗೊಳಿಸದೆ ನಾವು ಕುಡಿಯಲ್ಲಿಯೆ ಖಂಡಿಸಿ ಬಿಡಬೇಕು ; ದೇಶಾಚಾರವನ್ನು ಸಂರಕ್ಷಿಸಬೇಕು ; ಶಾಸ್ತ್ರಧರ್ಮಗಳನ್ನು ನಿಲ್ಲಿಸಬೇಕು ; ದೇಶಮತಾಭಿಮಾನಗಳನ್ನು ವಹಿಸಬೇಕು. ಆ ಮೂಢೆಯರು ಶಾಸ್ತ್ರಜ್ಞಾನವಿಲ್ಲದವರಾಗಿ ಬುದ್ಧಿವಾದಗಳನ್ನು ಹೇಳುತ್ತಿರುವರು. ಶಾಸ್ತ್ರಬದ್ಧರಾದ ನಮಗೆ ಮನುಷ್ಯಬುದ್ಧಿ ಪ್ರಮಾಣವಲ್ಲ. ಮೇಲಣ ಮತದ ಸತ್ಯಗಳು ಶಾಸ್ತ್ರದಿಂದಲ್ಲದೆ ಮತ್ತೆ ಯಾವ ಬುದ್ಧಿಯಿಂದ ತಿಳಿಯುವುದು ? ಪಾಪಾತ್ಮೆಯರಾದ ನವನಾಗರಿಕೆಯರು ಶಾಸ್ತ್ರನಿಷಿದ್ಧನಾದ, ದ್ವಾದಶ ಮಹಾಪಾತಕಗಳಲ್ಲಿ ಘೋರತಮವಾದ, ಮುಡಿಗೆಣಸಿನಗಡ್ಡೆಯ ಪಲ್ಯವನ್ನು ರಹಸ್ಯವಾಗಿ ಯಾರೂ ತಿಳಿಯದಂತೆ ತಿನ್ನುವರಂತೆ ! ಎಂತಹ ಘೋರ ಕೃತ್ಯವನ್ನು ಮಾಡುತ್ತಿರುವರು ನೋಡಿದಿರಾ ? ನೋಡಿದಹಾಗೆ ಒಬ್ಬರೂ ಹೇಳುವುದಿಲ್ಲವೇನು ? ಸ್ವಪಕ್ಷಸ್ಥಾಪನಕ್ಕೂ, ಪರಪಕ್ಷನಿರಾಕರಣಕ್ಕೂ ಸುಳ್ಳಾಡಬಹುದು. ಮತ ವಿಷಯದಲ್ಲಿ ಅಸತ್ಯದೋಷವಿಲ್ಲ. ಇದು ಸೂಕ್ಷ್ಮಧರ್ಮವು. ನನ್ನ ಮಾತು ನಂಬಿರಿ. ನೋಡದೆ ಹೋದರೂ ನೀವೀಗ ನೋಡಿದ ಹಾಗೆಯೇ ಹೇಳುತ್ತಿರುವಿರಿ. ನನಗೀಗ ಪರಮಸಂತೋಷವಾಯಿತು. ನೀವು ನವನಾಗರಿಕ

ಷೋಥೆಯನ್ನು ನಿರ್ಮೂಲವಮಾಡುವುದಕ್ಕೂ, ಶ್ರೀಜಗದ್ಗುರುಗಳ ಅಧಿಕಾರ ವ್ಯಾಪಿಸುವಂತೆ ಮಾಡುವುದಕ್ಕೂ ದೇಶಮತಾಭಿಮಾನಗಳುಳ್ಳವರಾಗಿ ಬ್ರಾಣಗಳ ಲ್ಲಾಶೆಯಿಡದೆ ಹೋರಾಡಿರಿ".

ಈ ಉಪನ್ಯಾಸದಿಂದ ಜನರ ಮನಸ್ಸುಗಳೆಲ್ಲವೂ ಪೂರ್ವಾಚಾರಪಕ್ಷಕ್ಕೆ ತಿರಿಗಿ ಹೋದ ಹಾಗೆ ಕಂಡುಬಂದುದು. ಮರುದಿನ ಮೊದಲ್ಗೊಂಡು ಪ್ರಜೆಗಳು ನವ ನಾಗರಿಕರ ವಿಷಯದಲ್ಲಿ ಅನೇಕಾಸತ್ಯಗಳನ್ನು ಹೇಳುತ್ತ, ಅನೇಕ ದೋಷಾರೋಪಣೆಗಳನ್ನು ಮಾಡುತ್ತ, ಅನೇಕಾಪವಾದಗಳನ್ನಿಡುತ್ತ, ಅವರನ್ನು ಮೂರ್ಖ ಮಹಾಜನರ ದೃಷ್ಟಿಯಲ್ಲಿ ಹಾಸ್ಯಾಸ್ಪದರನ್ನಾಗಿ ಮಾಡಲಾರಂಭಿಸಿದರು. ಈ ಪಾಮರ ಮಹಾಜನ ಪ್ರವಾಹವನ್ನು ಅಡ್ಡಕಟ್ಟಿ ಮರಳಿಸುವುದಕ್ಕಾಗಿ ನನ್ನ ಯಜಮಾನಗಿತಿಯೂ ನಾನೂ ಕೂಡ ಪುರುಷ ಸ್ವಾತಂತ್ರ್ಯವಿಷಯದಲ್ಲಿ ಉಪನ್ಯಸಿಸುವುದಕ್ಕೆ ಆರಂಭಿಸಿದೆವು. ನನ್ನ ಉಪನ್ಯಾಸದ ಪರ್ಯವಸಾನವನ್ನು ನಿಮಗೆ ಮೇಲಣ ಪ್ರಕರಣದಲ್ಲಿ ಹೇಳುವೆನು.

## ಎಂಟನೆಯ ಪ್ರಕರಣವು.

ಗಂಭೀದಂಭಿಯ ಉಪನ್ಯಾಸವಾದ ಮೂರನೆಯ ದಿನ "ಪುರುಷ ಸ್ವಾತಂತ್ರ್ಯಗಳನ್ನು ಕುರಿತು" ಸತ್ಯರಾಜಾಚಾರ್ಯನು ಉಪನ್ಯಸಿಸುವನಾದುದರಿಂದ ಪೌರಸ್ತ್ರೀ ಮಹಾಜನರೆಲ್ಲರೂ ರಾಜಕೀಯ ಪಾಠಶಾಲಾಮಂದಿರಕ್ಕೆ ಭಾನುವಾರ ದಿನ ಪ್ರಾತಃಕಾಲ ಒರುವ ಹಾಗೆ ಪ್ರಾರ್ಥಿಸಲ್ಪಟ್ಟಿರುವರೆಂದು, ಪ್ರಕಟಣ ಪತ್ರಿಕೆಯನ್ನು ನನ್ನ ಯಜಮಾನಗಿತಿಯಾದ ಘಾಂಥೀಭಾಂಗಿ ಪುರಜನರೆಲ್ಲರಿಗೂ ಕಳುಹಿದಳು. ಕಾಲವೈಪರೀತ್ಯದಿಂದುಂಟಾದ ಈ ವಿಡ್ಡೂರವನ್ನು ನೋಡಬೇಕೆಂದು ಆ ದಿನ ಪ್ರಾತಃಕಾಲದಲ್ಲಿ ಪುರದೊಳಗಣ ಸುಂದರೀಬೃಂದವೆಲ್ಲವೂ ಪಾಠಶಾಲಾ ಮಂದಿರಕ್ಕೆ ದಯಮಾಡಿ, ಸಭೆ ತುಂಬಿಯಿತ್ತು. ಆ ಬಂದವರೊಳಗೆ ದುಂಥೀಲಂಥಿಯೂ ಗಂಭೀದಂಭಿಯೂ ಅವರ ಪರಿವಾರದವರೂ ಮುಂದಾಗಿ ಇಡಿಸಿದ ಅಗ್ರಪೀಠಗಳನ್ನಲಂಕರಿಸಿದರು. ಗದ್ದಲವಾಗದಂತೆ ಕಾಪಾಡುವುದಕ್ಕೆ ನಮ್ಮ ಯಜಮಾನಗಿತಿಯ ಕೋರಿಕೆಯ ಪ್ರಕಾರ ಕೆಲವು ರಕ್ಷಕ ಭಟರೂ ವೇತ್ರಹಸ್ತೆಯರಾಗಿ ಬಂದಿದ್ದರು. ಉಪನ್ಯಾಸ ಸಮಯ ಸಮೀಪಿಸುವಾಗ ನನ್ನ ಯಜಮಾನಗಿತಿಯೊಡನೆ ಕೂಡಿ ನಾನು ಅಲ್ಲಿಗೆ ಹೋಗುವಾಗ ಪೌರಸ್ತ್ರೀ

ಮಹಾಜನರು “ಅಡಿಗೆಮನೆಯ ಮೂಲೆಯಲ್ಲಿ ಅಡಗಿರದೆ ಪುರುಷಭೂಷಣ ವಾದ ಲಜ್ಜೆಬಿಟ್ಟು ಪುರುಷನೊಬ್ಬನು ಸಭೆಗೆ ಬರುವನಂತೆ” ಎಂದೊಬ್ಬಾಕೆ ಯೂ, ‘ಸುಮ್ಮನೆ ಸಭೆಗೆ ಬರುವುದು ಮಾತ್ರವೆ ಅಲ್ಲದೆ, ನಾಚಿಕೆಬಿಟ್ಟು ಅಲ್ಲಿ ಸ್ತ್ರೀಯರ ಮುಂದೆ ತಾನು ತಕ್ಕವನೆಂಬಂತೆ ಮಾತನಾಡ ಹೋಗುವನಂತೆ’ ಎಂದು ಇನ್ನೊಬ್ಬಾಕೆಯೂ, ‘ಕಾಲಮಹಿಮೆಯ ದೆಸೆಯಿಂದ ಎಂತಹ ವೈಪರಿತ್ಯ ಗಳಾದರೂ ಹುಟ್ಟುತ್ತಿವೆ’ ಎಂದು ಮತ್ತೊಬ್ಬಳೂ, ‘ಧರ್ಮ ವಿಚಾರಿ ಪುರುಷನು ಸಭೆಯಲ್ಲಿ ಪ್ರಸಂಗಿಸುವುದು ದೇಶಾರಿಷ್ಟ’ವೆಂದು ಬೇರೊಬ್ಬಳೂ. ‘ಹೀಗೆ ಪುರುಷರಾಟಗಳನ್ನು ನಡೆಯ ಬಿಡುವುದು ಅಪಮಾನಕರ’ವೆಂದು, ಮತ್ತೊ ಬ್ಬಳೂ-ತಮ್ಮಲ್ಲಿ ತಾವೇ ಮೂಗಿನ ಮೇಲೆ ಬೆರಳಿಟ್ಟುಕೊಂಡು, ಆಶ್ಚರ್ಯಪಡುತ್ತ, ಮಾತನಾಡಿ ಕೊಳ್ಳುತ್ತಿರುವ ಮಾತುಗಳು ನನ್ನ ಕಿವಿಗೆ ಬಿದ್ದುವು. ಇಷ್ಟರಲ್ಲಿ ಉಪ ನ್ಯಾಸ ಸಮಯ ಸಮೀಪಿಸಿದುದರಿಂದ, ಸಭೆಯವರಿಂದ ದುಂಢೀಲಂಢಿಯ ವರು ಅಗ್ರಾಸನಾಸೀನರಾಗಿ ಮಾಡಲ್ಪಟ್ಟರು. ತರುವಾಯ ನಾನು ಉಪನ್ಯಾಸಿ ಸುವುದಕ್ಕೆ ಮೊದಲು ಮಾಡಿದೆನು.

“ಓ ಪುಣ್ಯಸತಿಯರಿರಾ! ಸ್ತ್ರೀಯರ ಹಾಗೆಯೇ ಪುರುಷರಿಗೂ ಭಗವಂತನು ಬುದ್ಧಿಯನ್ನು ದಯಪಾಲಿಸಿರುವನು......”.

ಘೋರ ಮಹಾಸ್ತ್ರೀಯರು - “ಇಲ್ಲಿಲ್ಲ. ಇದು ಸರ್ವ್ವಾಬದ್ಧವು; ಸ್ವಭಾವ ವಿರುದ್ಧವು. ಪುರುಷರಿಗೆ ಬುದ್ಧಿಯಿಲ್ಲವೇ ಇಲ್ಲ. ಸ್ತ್ರೀಯರ ಸೇವೆಮಾಡಿ ಒದುಕ ಬೇಕಾದ ಪುರುಷರಿಗೆ, ದೇವರು ಬುದ್ಧಿಕೊಟ್ಟಿರುವುರೆಂಬುದು ದೈವದೂಷಣವು; ಶಾಸ್ತ್ರದೂಷಣವು.”

“ಅಮ್ಮಣ್ಣಿಯರಿರಾ! ನನ್ನ ಮಾತುಗಳನ್ನು ಕೊಂಚ ಕೇಳಿದ ತರುವಾಯ ನಿಮ್ಮ ಅಭಿಪ್ರಾಯವನ್ನು ಹೇಳಬಹುದು. ಕೊಂಚ ಶಾಂತರಾಗಿರಿ. ಈ ದೇಶ ದಲ್ಲಿ ವಿದ್ಯೆಯಿಲ್ಲದೆ ಹೋದುದರಿಂದ ಪುರುಷರಲ್ಲಿ ಬುದ್ಧಿವಿಕಾಸ ಕಾಣದೆಯಿ ದ್ದರೂ......”

ಘೋರ ಮಹಾಕಾಂತೆಯರು (ಕಿವಿಗಳನ್ನು ಮುಚ್ಚಿಕೊಂಡು) - “ಅಕಟ ಕಟಾ! ಈ ಹೊತ್ತು ಎಂತಹ ಪಾಪದ ಮಾತುಗಳನ್ನು ಕೇಳುತ್ತಿರುವೆವು! ಪುರು ಷರಿಗಂತೆ! ವಿದ್ಯೆಯಂತೆ! ಏನೀ ಕಲಿಯುಗದ ಪ್ರಭಾವವು! ಏನೀ ದುಷ್ಕಾಲದ ಮಹಿಮೆ! ಓದಿದ ಪುರುಷರನ್ನು ನೋಡಿದರೆ ಸಚೇಲಸ್ನಾನ ಮಾಡಬೇಕೆಂದು

ಶಾಸ್ತ್ರಗಳು ಹೇಳುತ್ತಿವೆ. ಇರುವ ದುರ್ಗುಣಗಳು ಸಾಲದೆ, ಪುರುಷರಿಗೆ ವಿದ್ಯೆಯನ್ನೂ ಹೇಳಿಸಿ ಮತ್ತಷ್ಟು ಮತ್ತೆ ಕೆಡಿಸಬೇಕೇ ?".

"ತಾಯಿಯರಿರಾ ! ನನ್ನ ಮಾತುಗಳನ್ನು ಕಡೆಯ ವರೆಗೆ ಕೇಳಿರಿ. ಈ ದೇಶದಲ್ಲಿ ವಿದ್ಯೆ ಇಲ್ಲದೆ ಹೋದುದರ ದೆಸೆಯಿಂದ, ಪುರುಷರಲ್ಲಿ ಬುದ್ಧಿವಿಕಾಸ ಕಾಣದೆ ಹೋದರೂ, ಈ ದೇಶದ ಸ್ತ್ರೀಯರ ಹಾಗೆಯೇ ನಮ್ಮ ದೇಶದಲ್ಲಿ ಪುರುಷರಿಗೆ ವಿದ್ಯೆ ಕೊಡಿಸುವುದರಿಂದ ಅವರು ಅಲ್ಲಿ ಬುದ್ಧಿಶಾಲಿಗಳಾಗಿ—"

ಪೌರಮಹಾಂಗನೆಯರು-" ನಿಮ್ಮದು ಹಾಳುದೇಶವು, ಪಿಶಾಚದೇಶವು, ರಾಕ್ಷಸದೇಶವು, ನಿಮ್ಮ ಪಾಪಿಷ್ಠ ದೇಶದ ಮಾತನ್ನು ನಮಗೆ ಹೇಳಬೇಡ. ನಿಮ್ಮದು ಪಾಪಾತ್ಮರಿರುವ ನರಕ ಭೂಮಿ."

"ನೀವು ನನ್ನನ್ನು ದೂಷಿಸಿದರೂ ದೂಷಿಸಿರಿ - ಪರಮ ಪಾವನವಾದ ನನ್ನ ದೇಶವನ್ನು ಮಾತ್ರ ದೂಷಿಸಬೇಡಿರಿ. ನಮ್ಮದು ಮಹರ್ಷಿಗಳಿದ್ದ ಪುಣ್ಯಭೂಮಿ. ಯಜ್ಞಾದಿಗಳಿಗೆ ಜನ್ಮಸ್ಥಾನವಾದ ಕರ್ಮಭೂಮಿ. ನಮ್ಮ ದೇಶವನಂತ ಮಹಿಮೆಗಳಿಗೆ ಆಸ್ಪದವಾದುದು. ಮಡಿಕೆಯಿಂದ ಹುಟ್ಟಿದ ಒಬ್ಬ ಮಹಾಪುರುಷನು ಸಮುದ್ರವನ್ನು ಸಿಟ್ಟಿನಿಂದ ಕುಡಿದುಬಿಟ್ಟನು ; ಗಾಳಿಗೆ ಹುಟ್ಟಿದ ಒಬ್ಬ ಮಹಾಪುರುಷನು ಸೂರ್ಯಬಿಂಬವನ್ನು ಹಣ್ಣೆಂದು ಹಿಡಿದನು ; ಹೊದೆಯಲ್ಲಿ ಹುಟ್ಟಿದ ಮಹಾಪುರುಷನೊಬ್ಬನು ಕ್ರೌಂಚಪರ್ವತಕ್ಕೆ ರಂಧ್ರ ಮಾಡಿದನು......"

ಪೌರಮಹಾನಾರಿಯರು - " ಸಾಕು, ಬಾಯಿ ಮುಚ್ಚು, ನೀನು ಅಸತ್ಯವಾದಿ ; ಕಳ್ಳ ; ಸುಳ್ಳುಗಾರ ; ದೈವಸೃಷ್ಟಿಯಲ್ಲಿ ಸ್ತ್ರೀಯರಿಗಲ್ಲದೆ ಪುರುಷರಿಗೆ ಇಂತಹ ಮಹಿಮೆಗಳೆಲ್ಲಿಯೂ ಇರಲಾರವು. ನೀನು ಶುಂಠ ; ಕಳ್ಳುಕುಡಿಕ ; ಉನ್ಮತ್ತ."

"ಓ ಅಗ್ರಾಸನಾಸೀನೆಯರಿರಾ ! ಇವರು ನನ್ನನ್ನು ಹೇಗೆ ದೂಷಿಸುತ್ತಿರುವರು ಚಿತ್ತವಿಸಿದಿರೇ ?"

ಅಗ್ರಾಸನಾಸೀನೆ-' ಓ ಪೌರನಾರೀಮಣಿಗಳಿರಾ ! ಒಂದು ನಿಮಿಷ ಸುಮ್ಮನಿರಿ. ಓ ಉಪನ್ಯಾಸಕನೇ ! ನೀನು ಕೆಲಸಕ್ಕೆ ಬಾರದ ನಿನ್ನ ದೇಶವರ್ಣನೆಯನ್ನು ಬಿಟ್ಟು ಹೇಳಬೇಕಾದ ಸಂಗತಿಯನ್ನು ಹೇಳು."

"ಸ್ತ್ರೀಯರ ಹಾಗೆಯೇ ಪುರುಷರಿಗೂ ಕೆಲವು ಸ್ವಾತಂತ್ರ್ಯಗಳುಂಟು"

ಒಬ್ಬಾಕೆ - ' ಯಾವುವೂ ಇಲ್ಲ.'

ಇನ್ನೊಬ್ಬಾಕೆ - "ಅವರಿಗಿರುವ ಸ್ವಾತಂತ್ರ್ಯಗಳೆಲ್ಲವೂ ಸ್ತ್ರೀಯರ ದಾಸ್ಯಕರ್ಮದಲ್ಲಿ."

ಮತ್ತೊಬ್ಬಾಕೆ - "ಪತ್ನೀಶುಶ್ರೂಷೆ ಮಾಡುವುದು."

ಬೇರೊಬ್ಬಾಕೆ - 'ಸ್ತ್ರೀಸೇವೆ ಮಾಡುತ್ತ ಮೂಲೆಯಲ್ಲಡಗಿರುವುದು.'

"ನಾನೀಗ ಪುರುಷರಿಗೆ ಸ್ತ್ರೀಪರಿಚರ್ಯೆ ಧರ್ಮವಲ್ಲವೆಂಬುದಿಲ್ಲ. ಶಾಕಪಾಕಗಳನ್ನಾದರೂ ಜಿಹ್ವೆಗಿಂಪಾಗಿ ಮಾಡುವುದಕ್ಕೆಕೂಡ ಪುರುಷನು ಬರಹಕಲಿತು ಪಾಕಶಾಸ್ತ್ರವನ್ನಭ್ಯಸಿಸಬೇಕಲ್ಲವೇ?"

ಪಾರಮಹಾಕಾಳಿನಿಯರು - "ಅವಶ್ಯವಿಲ್ಲ. ಅಭ್ಯಾಸದಿಂದಲೇ ಪಾಕಮಾಡುವುದಕ್ಕೆ ಕಲಿಯಬಹುದು. ಪುರುಷರಿಗೆ ಸ್ವಪ್ನದಲ್ಲಿಯಾದರೂ ಬರಹದ ಹೆಸರು ಹೇಳಕೂಡದು."

"ಹಾಗೆನ್ನ ಬಾರದು. ಓದದೆ ಹೋದ ಪಕ್ಷದಲ್ಲಿ ಪುರುಷರು ಜ್ಞಾನಹೀನರಾಗಿ ಪಶುಸಮಾನರಾಗುವರಲ್ಲವೇ?"

ಪಾರ - 'ಪುರುಷರು ಓದಿಲ್ಲದಾಗಲೇ ಪಶುಗಳು. ಕೋತಿಗೆ ತೆಂಗಿನಕಾಯಿಯಹಾಗೆ ಅವರಿಗೆ ಬರಹಕೂಡ ದೊರೆತ ಪಕ್ಷದಲ್ಲಿ ಸ್ವಭಾವದುಷ್ಟರಾದ ಪುರುಷರು ಪಶುಗಳಿಗಿಂತಲೂ ಕೀಳಾಗುವರು. ಪುರುಷರಿಗೆ ಜ್ಞಾನದೊಡನೆ ಕೆಲಸವಿಲ್ಲ. ಪುರುಷರಿಗೆ ಸಮಸ್ತ ಧರ್ಮಗಳೂ ಸಮಸ್ತಕರ್ಮಗಳೂ ಸಮಸ್ತ ಪುಣ್ಯಗಳೂ ಪತ್ನೀಸೇವೆಯೊಳಗೆಯೇ ಸೇರಿವೆ. ಪತ್ನಿಯರ ಉಚ್ಛಿಷ್ಟಭೋಜನವೇ ಪುರುಷರಿಗೆ ಮೋಕ್ಷಸಾಧನವು; ಪತ್ನಿಯರ ಪಾದೋದಕಪಾನವೇ ಪುರುಷರಿಗೆ ಪಾಪವಿಮೋಚಕವು; ಪತ್ನಿಯರ ಚರಣರಜೋಧಾರಣವೇ ಪುರುಷರಿಗೆ ಸರ್ವಸುಖದಾಯಕವು. ಪುರುಷರಿಗೆ ಪತ್ನಿಯೊಬ್ಬಾಕೆಯೇ ಪರಮದೈವತವು; ಪುರುಷರಿಗೆ ಪತ್ನೀಸೇವೆಯೊಂದೇ ಶಾಸ್ತ್ರವಿಹಿತವಾದ ಸನಾತನ ಧರ್ಮವು."

"ಓ ಕಾಂತಾಶ್ರೇಷ್ಠೆಯರುಗಳಿರಾ! ತಾಯಿಯರಿರಾ! ನ್ಯಾಯಬುದ್ಧಿಯಿಂದ ಆಲೋಚಿಸಿರಿ. ಶಾಸ್ತ್ರವು ನ್ಯಾಯವಿರೋಧವಾಗಿದ್ದಾಗೆ......".

ಗಂಭೀದಂಭೀ - "ಅದೋ ಶಾಸ್ತ್ರದೂಷಣೆ ಬರುತ್ತಿದೆ. ಈ ಪಾಪಾತ್ಮನು ಶಾಸ್ತ್ರ ತಿರಸ್ಕಾರ ಮಾಡುತ್ತಿರುವನು. ಶಾಸ್ತ್ರಗಳಲ್ಲಿದ್ದುದು ಯಾವದೂ ನ್ಯಾಯವಿರೋಧವಲ್ಲ. ನಿತ್ಯವೂ ನೂರು ಸುಳ್ಳುಗಳನ್ನಾಡುತ್ತಿದ್ದರೂ, ಸಾವಿರ ಹತ್ಯೆ

ಗಳನ್ನು ಮಾಡುತ್ತಿದ್ದರೂ, ಲಕ್ಷೈಕಕಳ್ಳತನಗಳನ್ನು ಮಾಡುತ್ತಿದ್ದರೂ, ಶಾಸ್ತ್ರದಲ್ಲಿ ಹೇಳಿರುವ ಪಕ್ಷಕ್ಕೆ ಅವೆಲ್ಲವೂ ಪರಮ ಧರ್ಮಗಳಾಗುವವು. ಓ ಸಹೋದರಿಯರಾ ! ಹೀಗೆ ನಿಷ್ಪ್ರಯೋಜಕವಾಗಿ ಗಂಡಾಗಿ ಹುಟ್ಟಿದ ವ್ಯರ್ಥಪುರುಷನೊಬ್ಬನು ಶಾಸ್ತ್ರನಿಂದೆ ಮಾಡುತ್ತಿರಲಾಗಿ ಕಿವಿಗಳಟ್ಟುಕೊಂಡು ಕೇಳುತ್ತ ಸುಮ್ಮನಿರುವಿರೇನು ? ನಿಮ್ಮ ಶಾಸ್ತ್ರಾಭಿಮಾನ ಸತ್ತುಹೋಯಿತೇ ? ನೀವು ಸ್ತ್ರೀಜನ್ಮವೆತ್ತಲಿಲ್ಲವೇ ?

ಒಬ್ಬಾಕೆ - ‘ಈ ಪುರುಷಕೀಟವನ್ನು ಸಾಯಬಡಿಯಿರಿ’

ಇನ್ನೊಬ್ಬಾಕೆ - ‘ನಾಚಿಕೆಯಿಲ್ಲದೆ ಸಭೆಗೆ ನಡೆದುಬಂದ ಇವನ ಕಾಲುಗಳನ್ನು ಬಿರಿಯುವಂತೆ ಹೊಡಿಯಿರಿ.’

ಬೇರೊಬ್ಬಾಕೆ - ‘ಪುರುಷವಿದ್ಯೆಯೆಂದು ಕೂಗಿ ಅರಚಿದ ಈತನ ಕೊರಳನ್ನು ಕಿವುಚಿರಿ.’

ಈಪ್ರಕಾರವಾಗಿ ಹಲವರು ಹಲವು ವಿಧವಾಗಿ ನನ್ನನ್ನು ದೂಷಿಸುತ್ತ ಪರಿಹಾಸಿಸುತ್ತ, ನನ್ನ ಮೇಲೆಬಿದ್ದು, ನನ್ನ ಯಜಮಾನಗಿತಿ ನಿವಾರಿಸುತ್ತಿದ್ದರೂ ನಿಲ್ಲದೆ, ಕೆಲವರು ನೆತ್ತಿಯ ಮೇಲೆಯೂ, ಕೆಲವರು ಬೆನ್ನಿನಮೇಲೆಯೂ, ಕೆಲವರು ಮುಖದಮೇಲೆಯೂ, ಕೈಗಳಿಂದಲೂ ಮೊಣಕೈಗಳಿಂದಲೂ ಕಾಲುಗಳಿಂದಲೂ ಗುದ್ದಿಯೂ ಕುತ್ತಿಯೂ ಒದೆದೂ ನನ್ನನ್ನು ಪ್ರಾಣಾವಶಿಷ್ಟನನ್ನಾಗಿ ಮಾಡಿಬಿಟ್ಟರು. ರಕ್ಷಕಭಟಿಯರಾಸಂದಣಿಯಲ್ಲಿ ದಂಡಪಾಣಿಗಳಾಗಿ ಯಮಭಟರ ಹಾಗೆ ನನ್ನನ್ನು ರಕ್ಷಿಸಲೆಂಬಂತೆ ಬಳಿಗೆ ಬಂದರಾದರೂ, ಅವರ ಗುರಿಯುಪೂರ್ವವಾದುದರಿಂದಲೋ, ಮತ್ತೆ ಯಾವ ಹೇತುವಿನಿಂದಲೋ, ಅವರ ವೇತ್ರಪ್ರಹಾರಗಳೆಲ್ಲವೂ ನನ್ನ ಮೇಲೆಯೆ ಅಲ್ಲದೆ, ಗದ್ದಲ ಮಾಡಿದವರಮೇಲೆ ಒಂದೂ ಬೀಳಲಿಲ್ಲ. ಕೊಂಚ ಹೊತ್ತಿನೊಳಗೆ ನಾನು ಮೂರ್ಛಿತನಾದೆನು. ರಕ್ಷಕ ಭಟಿಯರು ನನಗೆ ಶೈತ್ಯೋಪಚಾರಮಾಡಿ ಮೂರ್ಛೆತಿಳಿದ ತರುವಾಯ ನನ್ನನ್ನು ಧರ್ಮವೈದ್ಯಶಾಲೆಗೆ ಭಂಡಿಯಮೇಲೆ ಕೊಂಡುಹೋಗಿ ಅಲ್ಲಿಯ ರಾಜಕೀಯವೈದ್ಯೆಗೊಪ್ಪಿಸಿದರು. ನಾನು ಇಪ್ಪತ್ತುದಿನ ಅವರ ಚಿಕಿತ್ಸೆಯಲ್ಲಿದ್ದ ತರುವಾಯ, ಎದ್ದು ಭೂಮಿಯಲ್ಲಿಕಾಲಿಟ್ಟು ಸ್ವಲ್ಪಸ್ವಲ್ಪ ತಿರುಗುವುದಕ್ಕಾರಂಭಿಸಿದೆನು. ರಾಜಕೀಯೋದ್ಯೋಗಿನಿಯರು ಈ ದೊಂಬಿ ಮಾಡಿದವರನ್ನು ಹಿಡಿಯಬೇಕೆಂದು ರಕ್ಷಕಭಟಿಯರಿಗಾಜ್ಞಾಪಿಸಿದರೂ, ಅವರಾ ದೊಂಬಿಯಕಾಲದಲ್ಲಿ ಅಲ್ಲಿದ್ದರೂ,

ಭಯದಿಂದ ಕಣ್ಣುಬಿಡದರೆ ನೋಡಲಾರದವರಾದುದರಿಂದ, ಒಬ್ಬರನ್ನಾದರೂ ಹಿಡಿಯಲಾರದೆ ಹೋದರು. ನಾನು ವೈದ್ಯಶಾಲೆಯಲ್ಲಿರುತ್ತಿದ್ದಾಗ ಪ್ರತಿದಿನವೂ ತಪ್ಪದೆ ಫಾಂಥೀಭಾಂಗಿ ಬಂದು ನನ್ನನ್ನು ನೋಡಿ ಹೋಗುತ್ತಿದ್ದಳು. ವೈದ್ಯಶಾಲಾಧಿಕಾರಿಣಿಯೂ ನನ್ನಲ್ಲಿ ಪುತ್ರವಾತ್ಸಲ್ಯವುಳ್ಳವಳಾಗಿ ನನ್ನ ಪಥ್ಯಪಾನಗಳನ್ನು ತಾನಾಗಿ ವಿಚಾರಿಸುತ್ತ, ಒಳ್ಳೆಯ ಮದ್ದುಗಳನ್ನು ಕೊಡುತ್ತಬಂದಳು. ಆ ಕಾಲದಲ್ಲಿ ಫಾಂಥಿಭಾಂಗಿಯ ತಾಯಿಯೂ ಎರಡುಮೂರಾವರ್ತಿ ವೈದ್ಯಶಾಲೆಗೆ ಬಂದು ನನ್ನ ಕ್ಷೇಮವನ್ನು ವಿಚಾರಿಸುತ್ತ, ಒಂದು ದಿನ ನನ್ನನ್ನು ನೋಡಿ - "ನೀನು ಹೀಗೆ ಆಗದ ದೇಶದಲ್ಲಿ ಒಕ್ಕಿಲ್ಲದ ಹಕ್ಕಿಯಾಗಿ ಸಾಯುವುದಕ್ಕಿಂತಲೂ ಸುಖವಾಗಿ ಸ್ವದೇಶಕ್ಕೆ ಹೋಗಿ ಸೊಂಪಾಗಿ ಇರಬಾರದೇ ?" ಎಂದು ಪ್ರಶ್ನೆ ಮಾಡಿದಳು. ಆಗ ನಮಗಿಬ್ಬರಿಗೂ ಹೀಗೆ ಕೆಳಗಿನ ಸಂಭಾಷಣೆ ನಡೆಯಿತು:—

'ಅಮ್ಮಾ ! ನಾನೂ ಸ್ವದೇಶಕ್ಕೆ ಹೋಗಬೇಕೆಂದೇ ಇರುವೆನು.'

'ಇದ್ದ ಪಕ್ಷದಲ್ಲಿ ಶೀಘ್ರವಾಗಿ ಹೋಗಬಾರದೇ ?'

'ಹೋಗುವುದಕ್ಕೆ ನನಗೆ ಶಕ್ತಿಯಿಲ್ಲ ನಮ್ಮ ದೇಶದಮಾರ್ಗವು ನನಗೆ ತಿಳಿಯದು.'

'ದಾರಿ ತಿಳಿಯದಿದ್ದರೆ ನಿಮ್ಮ ದೇಶದಿಂದ ನಮ್ಮ ದೇಶಕ್ಕೆ ಹೇಗೆಬಂದೆ ?'

'ಗುರುಪ್ರಭಾವದ ದೆಸೆಯಿಂದ.'

'ಈಗಲೂ ತಿರಿಗಿ ಗುರುಪ್ರಭಾವದ ದೆಸೆಯಿಂದಲೇ ಹೋಗು.'

'ಈಗ ದಾರಿತೋರುವುದಕ್ಕೆ ನಮ್ಮ ಗುರುವಿಲ್ಲಿ ಇಲ್ಲ.'

"ಗುರುವಾಗಿ ದಾರಿತೋರುವುದಕ್ಕೆ ನಾನಿಲ್ಲಿರುವೆನು. ನನ್ನ ಉಪದೇಶ ತೆಗೆದುಕೋ. ನೀನು ಬೇಗನೆ ಹೋಗದಪಕ್ಷದಲ್ಲಿ ನಿನ್ನನ್ನು ಇಲ್ಲಿಯವರು ತಪ್ಪದೆ ಕೊಂದುಹಾಕಿ ಬಿಡುವರು."

ಎಂದು ನನಗಾಕೆಯೊಂದುಮಂತ್ರವನ್ನುಪದೇಶಿಸಿ ಈ ಮಂತ್ರವನ್ನು ಮೂರುಲಕ್ಷ ಜಪಮಾಡಿದ ಪಕ್ಷದಲ್ಲಿ ಸಿದ್ಧಿಯಾಗುವುದೆಂದೂ, ತರುವಾಯ ಆ ಮಂತ್ರಪ್ರಭಾವದಿಂದ ಬಯಸಿದ ದೇಶಕ್ಕೆ ಹಾರಿಹೋಗ ಬಹುದೆಂದೂ ಹೇಳಿದಳು. ಒಂದು ತಿಂಗಳಲ್ಲಿ ನಾನು ಚೆನ್ನಾಗಿ ಸ್ವಸ್ಥನಾಗಿ ಮರಳಿ ಎಂದಿನಂತೆಯೇ ಬೀದಿಯಲ್ಲಿ ತಿರುಗತೊಡಗಿದೆನು. ತರುವಾಯ ವೈದ್ಯಶಾಲೆಯವರು ನನಗೆ

ಬಲವಾದ ಘಾತವುಂಟಾದಹಾಗೆ ವಿಮುಕ್ತಿಪತ್ರವನ್ನಿತ್ತು ಕಳುಹಿಸಿಕೊಟ್ಟರು. ನಾನು ಮರಳಿ ಬಂದು ಘಾಂಡೀಭಾಂಗಿಯ ಮನೆಯೊಳಕ್ಕೆ ಪ್ರವೇಶಿಸಿದೆನು. ನಾನು ಬೀದಿಗೆ ಹೊರಟಾಗೆಲ್ಲ ಸ್ತ್ರೀಯರು ನನ್ನನ್ನು ಬೆರಳಿಂದ ತೋರಿಸಿ ಕುಚೋದ್ಯಮಾಡುತ್ತ, ಇವನನ್ನೀಸಾರಿ ಪ್ರಾಣದೊಡನೆ ಬಿಡಕೂಡದೆಂದು ತಮ್ಮಲ್ಲಿಯೆ ಎಂದುಕೊಳ್ಳುತ್ತ, ನನ್ನನ್ನು ನೋಡಿ ನಗತೊಡಗಿದರು. ಸ್ತ್ರೀಯರಿಗೆ ಸ್ವಾತಂತ್ರ್ಯವಿದ್ದ ಪಕ್ಷದಲ್ಲಿ ಎಂತಹ ಕೇಡುಗಳುಂಟಾಗುವುವೋ ಕಂಡಿರಾ! 'ನಸ್ತ್ರೀಸ್ವಾತಂತ್ರ್ಯಮರ್ಹತಿ' ಎಂದು ಹೇಳಿದ ನಮ್ಮ ಶಾಸ್ತ್ರಕಾರನು ಹುಚ್ಚನಲ್ಲ. ಸಾಮಾನ್ಯರಿಗೆ ಕಂಡುಬಾರದಿದ್ದರೂ, ಸರ್ವಜ್ಞರಾದ ನಮ್ಮ ಪೂರ್ವಜರು ಎಂತಹ ಬುದ್ಧಿವಂತರೆಂದು ಹೇಳಿದರೂ ಹೇಳಬಹುದು. ನಮ್ಮ ದೇಶದಲ್ಲಿ ಮಾತ್ರ, ನಾವು ಎಂದೂ, ಪುರುಷನಾಮವೆಂಬುದು ಭೂಮಿಯಲ್ಲಿರುವ ವರೆಗೆ, ಸ್ತ್ರೀಯರಿಗೆ ಸ್ವಾತಂತ್ರ್ಯದ ಅಣುಮಾತ್ರವನ್ನಾದರೂ ಬರಗೊಳಸಗೊಡದು.

ಆ ಬಳಿಕ ನನಗಾ ದೇಶಬಿಟ್ಟು ಬೇಗನೆ ಹೋಗಬೇಕೆಂಬ ಬುದ್ಧಿಹುಟ್ಟಿತು. ಹೀಗೆ ಹೇಳಿದೊಡನೆ ನೀವು ನನ್ನನ್ನು ಆ ದೇಶದ ಸ್ತ್ರೀಯರಿಗೆ ಹೆದರಿ ಓಡಿಹೋಗುತ್ತಿರುವ ಭೀರುವೆಂದು ಭಾವಿಸುವಿರೋ ಏನೊ! ನೀವು ಹಾಗೆ ಎಷ್ಟು ಮಾತ್ರವೂ ತಿಳಿಯಕೂಡದು. ಮಹಾಭಾರತಯೋಧರ ಜನ್ಮಭೂಮಿಯಾದ ಭರತಖಂಡದಲ್ಲಿ ಹುಟ್ಟಿ, ಅದರಲ್ಲಿಯೂ ಮುಖ್ಯವಾಗಿ ಭಯವಿಹೀನವಾದ ಬ್ರಾಹ್ಮಣಕುಲದಲ್ಲಿ ಉದ್ಭವಿಸಿದ ನನಗೆ, ಪೌರುಷಕ್ಕೆ ಕೊರತೆಯುಂಟೇ? ಮೂರುಮೂರು ಮಾತಿಗೂ ಇಲ್ಲ. ಸಮಯ ಒದಗಿದ ಪಕ್ಷದಲ್ಲಿ ನಾನು ಪ್ರಾಣಗಳನ್ನಾದರೂ ತೃಣಪ್ರಾಯವಾಗಿ ಬಿಡಲಾಪೆನು. ಅದಲ್ಲದೆ ನಾನು ಆ ದೇಶದಲ್ಲಿ ಮೃತನಾದ ಪಕ್ಷದಲ್ಲಿ ನನಗೆ ವೀರಸ್ವರ್ಗವೇ ಸಿದ್ಧವಾದರೂ ನಿಮಗೀ ವಾರ್ತೆಗಳನ್ನು ಹೇಳಿ ನಿಮ್ಮನ್ನು ಆನಂದಪಡಿಸುವವರು ಮತ್ತೊಬ್ಬರು ದೊರೆಯರೆಂದು ನಿಮ್ಮ ಮೇಲೆ ಅವ್ಯಾಜಾನುಗ್ರಹದಿಂದಲೇ ನಾನು ಕರಸ್ಥವಾದ ಇಂದ್ರನ ಅರ್ಧಾಸನವನ್ನೂ ರಂಭಾಸಂಭೋಗವನ್ನೂ, ಕಳೆದುಕೊಂಡೆನಲ್ಲದೆ, ಬೇರೊಂದು ಕಾರಣದಿಂದಲ್ಲ. ನನ್ನ ನಿಮಿತ್ತವಾಗಿ ಕಷ್ಟಪಡುತ್ತಿರುವ ಘಾಂಡೀಭಾಂಗಿಯನ್ನು ಬಿಟ್ಟು, ಕೃತಘ್ನನಾಗಿ, ಸ್ವಾರ್ಥಪರತೆಯಿಂದ ಹೋಗುವೆನೆಂದೂ, ನೀವು ಎಂದುಕೊಳ್ಳಕೂಡದು. ನನ್ನ ದೆಸೆಯಿಂದ ಘಾಂಡೀಭಾಂಗಿಗೆ ವಿಪತ್ತುಗಳು ಬಂದವಾತು ಸತ್ಯವೇ. ಆ ಆಪತ್ತುಗಳನ್ನು ತಿಳಿದೇ, ನಾನು ತಮ್ಮ ದೇಶದಿಂದ ಹೊರಟು ಹೋದಪಕ್ಷದಲ್ಲಿ ತನ್ನ ಪುತ್ರಿಕೆಗೆ ಕಷ್ಟಗಳು ತೊಲಗುವುವೆಂದು ಘಾಂಡೀಭಾಂಗಿಯ ತಾಯಿ

ನನಗಾ ಮಂತ್ರವನ್ನು ಉಪದೇಶಿಸಿದಳಲ್ಲದೆ, ನನ್ನ ಮೇಲಿರುವ ನಿರ್ವ್ಯಾಜಾನುಗ್ರಹ ದಿಂದಲೇ ಅಲ್ಲ. ಆ ಮಾತು ಹೋಗಲಿ. ನಾನಾದೇಶವನ್ನು ಬಿಡಲು ಯತ್ನಿಸು ವುದಕ್ಕೆ ಇನ್ನೊಂದು ಮುಖ್ಯಕಾರಣವೂ ಉಂಟು. ಹಿಂದೂ ಜನರು ದೇಶಾಟನೆ ಮಾಡಿ ಹೊಸದೇಶಗಳನ್ನು ಕಂಡವರಲ್ಲವೆಂದೂ, ನೂತನವಾಗಿ ಶೋಧಿಸಿ, ಚರಿ ತ್ರೆಗಳನ್ನು ಬರೆಯ ಸಮರ್ಥರಲ್ಲವೆಂದೂ, ಪಶ್ಚಿಮಖಂಡನಿವಾಸಿಗಳು ನಮ್ಮ ಮೇಲೆ ಎರಡು ನಿಂದೆಗಳನ್ನು ಹೊರಿಸುವರು. ಈ ಎರಡು ನಿಂದೆಗಳನ್ನು ಸು ಳ್ಳಾಗುವಂತೆ ಮಾಡಿ ನಮ್ಮ ದೇಶಕ್ಕೆ ಖ್ಯಾತಿ ಬರಿಸಬೇಕೆಂಬ ಪಟ್ಟಿಂತೆಯಿಂದ ನನ್ನ ಅಮೂಲ್ಯವಾದ ಪ್ರಾಣಗಳನ್ನು ಆ ದೇಶಕ್ಕೆ ಬಲಿಹಾಕದೆ, ಎದ್ದು ಹೋದ ವನಾದೆನು. ನಾನು ನೋಡಿದ ಈ ದೇಶಗಳನ್ನೂ, ನಾನು ಬರೆದ ಈ ಚರಿತ್ರೆಯ ನ್ನೂ, ಕೇಳಿದವರೂ ಕಂಡವರೂ, ಹಿಂದೂ ಜನರಮೇಲೆ ಇನ್ನೂ ಮುಂದೆ ಈ ಎರಡು ನಿಂದೆಗಳನ್ನಾರೋಪಿಸಲವಕಾಶವಿಲ್ಲದವರಾಗಿ, ಹಿಂದೂ ಜನರು ಎಂತಹ ಕಾರ್ಯಕ್ಕಾದರೂ ಸಮರ್ಥರೆಂದೊಪ್ಪಿಕೊಂಡು, ನಮ್ಮವರನ್ನು ಸಾವಿರಬಾಯಿಗ ಳಿಂದ ಶ್ಲಾಘಿಸಿ ಪೂಜಿಸಬೇಕಾದವರಾಗುವರಲ್ಲವೇ ? ಓ ಪಾಠಕರಿರಾ ! ನಮ್ಮ ದೇಶಕ್ಕೆ ನಾನು ಸಂಪಾದಿಸಿದ ಈ ಕೀರ್ತಿಯಿಂದ ನೀವು ಕೊಂಚಕಾಲದ ವರೆಗೆ ತೃಪ್ತಿಹೊಂದಿರಿ

ಪರದೇಶಯಾತ್ರೆಯನ್ನು ತ್ವರಿತವಾಗಿ ನೆರವೇರಿಸಬೇಕೆಂಬ ಬುದ್ಧಿಯಿಂದ, ಒಂಟಿಯಾಗಿ ರಂಥೀನಗರ ಪ್ರಾಂತ್ಯದಲ್ಲಿಯ ಅರಣ್ಯಕ್ಕೆ ಹೋಗಿ, ನನ್ನ ಯಜ ಮಾನಗಿತಿಯ ತಾಯಿ ಉಪದೇಶಿಸಿದ ಮಂತ್ರವನ್ನು ಪುರಶ್ಚರಣೆ ಮಾಡುತ್ತಿರಲಾಗಿ, ಒಬ್ಬ ಸಿದ್ಧನು ಆಕಸ್ಮಿಕವಾಗಿ ಆಕಾಶದಿಂದಿಳಿದು ನನ್ನ ಇದಿರಲ್ಲಿ ನಿಂತನು. ನಾನಾ ಮಹಾತ್ಮನಿಗೆ ಭಕ್ತಿಪೂರ್ವಕವಾಗಿ ನಮಸ್ಕಾರಮಾಡಿ ಕೈಜೋಡಿಸಿ ನಿಂತುಕೊಂ ಡೆನು. ಆ ಸಿದ್ಧಾಗ್ರಗಣ್ಯನು ನನ್ನಲ್ಲಿ ಅಕಾರಣಕರುಣೆಯುಳ್ಳವನಾಗಿ, ಪೂರ್ವದಲ್ಲಿ ಪ್ರವರಾಖ್ಯನಕಾಲಿಗೆ ಪಾದಲೇಪನ ಮಾಡಿದ ಸಿದ್ಧೇಂದ್ರನೆಂಬವನು ತಾನೇ ಎಂ ದೂ, ಮಂತ್ರಸಿದ್ಧಿಯಾಗ ಬೇಕಾದರೆ ಚಿರಕಾಲ ಬೇಕಾಗುವುದೆಂದು ದಿವ್ಯಜ್ಞಾನ ದಿಂದ ತಿಳಿದು ನನಗಾ ಲೇಪನವನ್ನು ಕೊಡ ಬಂದೆನೆಂದೂ, ಹೇಳಿ ಆ ಮೂಲಿಕೆ ಯ ಹೆಸರನ್ನು ಕೂಡ ನನಗೆ ಅನುಗ್ರಹಿಸಿ ಅದೃಶ್ಯನಾದನು. ಆ ಔಷಧಿಯ ಹೆ ಸರು ದತ್ತೂರಪರ್ಣಿ. ಅದರ ಎಲೆಗಳು ಕರಿಯುಮ್ಮತ್ತಿಯ ಎಲೆಗಳಹಾಗೆಯೇ ಇರುವುವು ; ಹೂವುಗಳು ಬೆಟ್ಟದಾವರಿಕೆ ಗಿಡದ ಹೂವುಗಳಂತಿರುವವು ; ಶಾಖೆ ಗಳು ನೈದಿಲೆಯ ದಂಟುಗಳಹಾಗೆ ಇರುವವು. ಈ ಗಿಡವನ್ನು ಸಮೂಲವಾಗಿ

ತಂದು ಅರೆದು ರಸತೆಗೆದು ಕಾಲಿಗೆ ತಿಕ್ಕಿಕೊಂಡ ಪಕ್ಷದಲ್ಲಿ, ನಾವು ಕೋರಿದ ಸ್ಥಳಗಳಿಗೆಲ್ಲ ಮನೋವೇಗದಿಂದ ಹೋಗಬಹುದು. ಈ ಗಿಡಗಳು ವಿಶಾಖಪಟ್ಟಣ ದಲ್ಲಿ "ಅಲ್ಲಿಕೊಂಡ" ವೆಂಬ ಬೆಟ್ಟದಮೇಲೆ ಬೇಕಾದಷ್ಟು ಇವೆ. ನಾನಾಗಿಡದ ರಸ ವನ್ನು ಕಾಲಡಿಗಳಿಗೆ ಪೂಸಿಕೊಂಡು, ಲಂಕಾದ್ವೀಪಕ್ಕೆ ಹೋಗಬೇಕೆಂದು ಮನ ಸ್ಸಿನಲ್ಲಿ ಸಂಕಲ್ಪಿಸಿ ಕೊಂಡೊಡನೆ, ಕ್ಷಣಕಾಲದಲ್ಲಿ ಲಂಕೆಯನ್ನು ಸೇರಿದೆನು. ಈ ಪ್ರಯಾಣಕಥೆ ಮೊದಲಾದುವನ್ನು ಕುರಿತು ನಿಮಗೆ ಮುಂದೆ ತಿಳುಹುವೆನು. ನಾನು ಹೊರಟ ದಿನ ಮೊದಲ್ಗೊಂಡು ರಂಥೀ ದೇಶದಲ್ಲಿ ಮೂರುವರ್ಷವೆರಡು ತಿಂಗಳು ಹತ್ತೊಂಬತ್ತು ದಿನವಿದ್ದೆನು.

## ಪ್ರಥಮಭಾಗಂ ಸಂಪೂರ್ಣಂ.